ಸೋಮವಾರ, ಮೇ 29, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಅಬುಧಾಬಿಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟ ಸಾರಾ ಅಲಿ ಖಾನ್ ಪಾಲ್ಗೊಂಡಿದ್ದರು

ಒಂದು ವರ್ಷ ಚುನಾವಣೆ ತಯಾರಿ ನಡೆಸಿ, ಜನರ ನಿರೀಕ್ಷೆಗೆ ತಕ್ಕಂತೆ ಆಡಳಿತ ನಡೆಸಿ – ಮುಖ್ಯಮಂತ್ರಿ ಸೂಚನೆ

ಲೋಕಸಭಾ ಚುನಾವಣೆ: ಸಚಿವರಿಗೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ವಿಸ್ತರಣೆಯ ಬೆನ್ನಲ್ಲೇ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಗುರಿಯನ್ನು ಎಲ್ಲ ಸಚಿವರಿಗೂ ನಿಗದಿ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ತಿಳಿಸಿದೆ.

ಸಂಪುಟದ ಎಲ್ಲ ಸ್ಥಾನಗಳನ್ನೂ ಭರ್ತಿ ಮಾಡಿದ ಬಳಿಕ, ಮುಖ್ಯಮಂತ್ರಿಯವರು ಸಚಿವರ ಜತೆ ಚರ್ಚೆ ನಡೆಸಿದ್ದಾರೆ. 'ಒಂದು ವರ್ಷ ಲೋಕಸಭಾ ಚುನಾವಣೆಗೆ ತಯಾರಿ ನಡೆಸಬೇಕು. ಜನರ ನಿರೀಕ್ಷೆಗೆ ತಕ್ಕ ಆಡಳಿತ ನೀಡಬೇಕು' ಎಂದು ಸೂಚಿಸಿದ್ದಾರೆ.

'ರಾಜ್ಯದಲ್ಲಿ ಕನಿಷ್ಠ 20 ಸ್ಥಾನಗಳನ್ನು ಗೆದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರಿಗೆ ಉಡುಗೊರೆಯಾಗಿ ನೀಡಬೇಕು ಎಂಬ ಗುರಿ ನೀಡಿದ್ದಾರೆ' ಎಂದು ಮುಖ್ಯಮಂತ್ರಿ ಕಚೇರಿಯ ಪ್ರಕಟಣೆ ತಿಳಿಸಿದೆ.

'ವಿಧಾನಸಭೆ ಚುನಾವಣೆಯಲ್ಲಿ ಜನರು ನಮಗೆ ಅಭೂತಪೂರ್ವ ಬೆಂಬಲ ನೀಡಿದ್ದಾರೆ. ದೊಡ್ಡ ಬಹುಮತದ ಗೆಲುವಿನ ಮೂಲಕ ಹೆಚ್ಚಿನ ಜವಾಬ್ದಾರಿ ನೀಡಿದ್ದಾರೆ. ಜನರ ಸಮಸ್ಯೆಗಳನ್ನು ಆಲಿಸಿ, ಸ್ಪಂದಿಸಬೇಕು. ಆಯಾ ಕ್ಷೇತ್ರದಲ್ಲೇ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಚಿವರು ಕ್ರಿಯಾಶೀಲತೆ ರೂಪಿಸಿಕೊಳ್ಳಬೇಕು ಎಂಬ ನಿರ್ದೇಶನ ನೀಡಿದ್ದಾರೆ' ಎಂದು ಮಾಹಿತಿ ನೀಡಿದೆ.

ಜನರು ಸಣ್ಣ ಕೆಲಸಗಳಿಗೂ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಬೇಕು. ಕೆಲಸ ಮಾಡಿಸಿಕೊಳ್ಳಲು ವಿಧಾನಸೌಧದವರೆಗೂ ಜನ ಬಾರದಂತೆ ತಡೆಯಬೇಕು. ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜನರಿಗೆ ತಲುಪುವಂತೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಆಡಳಿತದಲ್ಲಿ ಹಿಂದಿನ ಅವಧಿಯ ತಪ್ಪುಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಎಂಬ ಸೂಚನೆಯನ್ನೂ ನೀಡಿದ್ದಾರೆ.

ಮುಖ್ಯಾಂಶಗಳು

- ಜನರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಿ
- ಕ್ಷೇತ್ರದ ಮಟ್ಟದಲ್ಲಿಯೇ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿ
- ಗ್ಯಾರಂಟಿ ಯೋಜನೆಗಳ ಲಾಭವನ್ನು ಸಮರ್ಪಕವಾಗಿ ತಲುಪಿಸಿ

ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ತಾಕೀತು

'ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿನ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಿ, ನಾವು ಅಧಿಕಾರಕ್ಕೆ ಬಂದಿದ್ದೇವೆ. ಈಗ ಭ್ರಷ್ಟಾಚಾರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಭ್ರಷ್ಟಾಚಾರದಲ್ಲಿ ನಿರತರಾಗುವ ಅಧಿಕಾರಿಗಳನ್ನು ಪತ್ತೆಹಚ್ಚಿ, ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಚಿವರಿಗೆ ಸಿದ್ದರಾಮಯ್ಯ ತಾಕೀತು ಮಾಡಿದ್ದಾರೆ' ಎಂದು ಮುಖ್ಯಮಂತ್ರಿಯವರ ಕಚೇರಿ ತಿಳಿಸಿದೆ.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಪರಾಭವಗೊಳಿಸಲು ಪರಿಸ್ಥಿತಿ ಹದವಾಗಿದೆ. ಇದಕ್ಕಾಗಿ ಉಸ್ತುವಾರಿ ವಹಿಸಿದ ಜಿಲ್ಲೆಗಳಲ್ಲಿ ಸಚಿವರು ಸಕ್ರಿಯವಾಗಿ ಕೆಲಸ ಮಾಡಬೇಕು. ಪ್ರತಿ ತಾಲ್ಲೂಕು ಮಟ್ಟದಲ್ಲಿ ಸಭೆ ನಡೆಸಿ ಸಮಸ್ಯೆಗಳನ್ನು ಪರಿಹರಿಸಬೇಕು ಎಂಬ ಸೂಚನೆಯನ್ನೂ ನೀಡಿದ್ದಾರೆ ಎಂದು ಹೇಳಿದೆ.

ಸುದ್ದಿ 2 ನಿಮಿಷ

ಉಪ ಸಭಾಧ್ಯಕ್ಷ ಸ್ಥಾನ ಒಪ್ಪುವುದಿಲ್ಲ: ಪುಟ್ಟರಂಗಶೆಟ್ಟಿ

ಚಾಮರಾಜನಗರ: 'ಸಚಿವ ಸ್ಥಾನ ಸಿಗದಿರುವುದಕ್ಕೆ ಬೇಸರಗೊಂಡಿರುವ ಚಾಮರಾಜನಗರ ಶಾಸಕ ಸಿ. ಪುಟ್ಟರಂಗಶೆಟ್ಟಿ, ವಿಧಾನಸಭೆಯ ಉಪ ಸಭಾಧ್ಯಕ್ಷ ಸ್ಥಾನ ಒಪ್ಪಿಕೊಳ್ಳುವುದಿಲ್ಲ' ಎಂದು ಭಾನುವಾರ ಹೇಳಿದ್ದಾರೆ.

ಜಿಲ್ಲೆಯ ಯಳಂದೂರು ತಾಲ್ಲೂಕಿನ ಉಪ್ಪಿನಮೋಳೆಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, 'ನಾನು ಆ ಸ್ಥಾನವನ್ನು ಒಪ್ಪಿಕೊಳ್ಳುವುದಿಲ್ಲ. ಒಪ್ಪದಂತೆ ಬೆಂಬಲಿಗರು, ಕಾರ್ಯಕರ್ತರೂ ನನ್ನ ಮೇಲೆ ಒತ್ತಡ ಹಾಕುತ್ತಿದ್ದಾರೆ' ಎಂದರು.

'ಉಪ ಸಭಾಧ್ಯಕ್ಷನಾದರೆ ಕ್ಷೇತ್ರದ ಜೊತೆಗಿನ ಸಂಪರ್ಕ ಕಡಿತವಾಗುತ್ತದೆ. ಮತದಾರರ ಬಳಿಗೆ ಹೋಗಲು ಸಾಧ್ಯವಾಗುವುದಿಲ್ಲ. ನನಗೆ ಈ ಹುದ್ದೆ ಬೇಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಿಳಿಸಿದ್ದೇನೆ' ಎಂದು ಹೇಳಿದರು.

ರಾಹುಲ್ ಗಾಂಧಿಗೆ ಜಯಚಂದ್ರ ಮೊಮ್ಮಗಳ ಪತ್ರ

ತುಮಕೂರು: ಶಾಸಕ ಟಿ.ಬಿ. ಜಯಚಂದ್ರಗೆ ಸಚಿವ ಸ್ಥಾನ ನೀಡುವಂತೆ ಅವರ ಎಂಟು ವರ್ಷದ ಮೊಮ್ಮಗಳು ಆರ್ನಾ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದಾಳೆ.

'ನಮ್ಮ ತಾತನಿಗೆ ಸಚಿವ ಸ್ಥಾನ ನೀಡದಿರುವುದರಿಂದ ತುಂಬಾ ಬೇಸರ ಆಗಿದೆ. ಸಚಿವ ಸ್ಥಾನಕ್ಕೆ ಅವರು ಸೂಕ್ತವಾದ ವ್ಯಕ್ತಿ. ಅವರು ಶ್ರಮ ಜೀವಿ. ಜನರಿಗೆ ಸಹಾಯ ಮಾಡುತ್ತಾರೆ. ಅದಕ್ಕೆ ಅವರು ಸಚಿವರಾಗಬೇಕು' ಎಂದು ಪತ್ರ ಹಾಗೂ ವಿಡಿಯೊ ಮೂಲಕ ಮನವಿ ಮಾಡಿದ್ದಾಳೆ.

'ನಮ್ಮ ತಾತ ಜನರನ್ನು ತುಂಬಾ ಪ್ರೀತಿ ಮಾಡುತ್ತಾರೆ. ಅವರಿಗೆ ಸಚಿವ ಸ್ಥಾನ ಕೊಡುವಂತೆ ರಾಹುಲ್ ಗಾಂಧಿ ಅವರಿಗೆ ಪತ್ರ ಬರೆದಿದ್ದೇನೆ. ದಯವಿಟ್ಟು ಈ ಪತ್ರವನ್ನು ಓದಿ' ಎಂದು ಆಕೆ ಮನವಿ ಮಾಡಿಕೊಂಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಮಗಳು ಸ್ವಇಚ್ಛೆಯಿಂದ ಪತ್ರ ಬರೆದಿದ್ದಾಳೆ. ಸೋಮವಾರ ಇದನ್ನು ರಾಹುಲ್ ಗಾಂಧಿ ಅವರಿಗೆ ಕಳುಹಿಸಲಾಗುವುದು' ಎಂದು ಜಯಚಂದ್ರ ಅವರ ಪುತ್ರ ಸಂದೀಪ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಸಚಿವ ಸ್ಥಾನಕ್ಕಾಗಿ ಸವದಿ, ನಾನು ಕಾಯುತ್ತೇವೆ: ಶೆಟ್ಟರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಲಕ್ಷ್ಮಣ ಸವದಿ ಹಾಗೂ ನನಗೆ ಸಚಿವ ಸ್ಥಾನ ನೀಡಬೇಕೆನ್ನುವುದು ಜನರ ಅಭಿಲಾಷೆ. ಸಚಿವ ಸ್ಥಾನ ನೀಡುವ ಬಗ್ಗೆ ಯಾರೂ ಭರವಸೆ ನೀಡಿಲ್ಲ. ಮುಂದೆ ಒಳ್ಳೆಯ ಸ್ಥಾನಮಾನ ಸಿಗುವ ಭರವಸೆಯಿದೆ. ಅಲ್ಲಿಯವರೆಗೆ ನಾವು ಕಾಯುತ್ತೇವೆ' ಎಂದು ಕಾಂಗ್ರೆಸ್ ಮುಖಂಡ ಜಗದೀಶ ಶೆಟ್ಟರ್ ಹೇಳಿದರು.

ಭಾನುವಾರ ತಮ್ಮ ನಿವಾಸದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಸಚಿವ ಸಂಪುಟ ದಲ್ಲಿ ಇರುವುದು 34 ಸ್ಥಾನ ಮಾತ್ರ. ಎಲ್ಲರಿಗೂ ಸ್ಥಾನ ಸಿಗುವುದಿಲ್ಲ. ಆದರೆ, ಸವದಿ ಮತ್ತು ನನಗೆ ಸಚಿವ ಸ್ಥಾನ ದೊರೆಯಬೇಕು ಎನ್ನುವುದು ಜನರ ಒತ್ತಾಯವಾಗಿದೆ' ಎಂದರು.

'ಬಿಜೆಪಿಯಲ್ಲಿ ಪಕ್ಷ ಕಟ್ಟಿದ ಮುಖಂಡರೆಲ್ಲ ಈಗ ಹೊರಗೆ ಹೋಗಿದ್ದಾರೆ. ಕಾರ್ಯಕರ್ತರೇ ಮೂಲಾಧಾರವಾಗಿರುವ ಪಕ್ಷಕ್ಕೆ ಸಮರ್ಥ ನಾಯಕ ಇಲ್ಲದಂತಾಗಿದೆ. ಕಾಂಗ್ರೆಸ್ ಬಹುಮತ ಪಡೆದು ಸರ್ಕಾರ ರಚಿಸಿ, ಸಚಿವ ಸ್ಥಾನ ಹಂಚಿಕೆಯಾದರೂ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುವ ಬಿಜೆಪಿಗೆ ಯಾರನ್ನು ನಾಯಕನನ್ನಾಗಿ ಮಾಡಬೇಕು ಎಂದು ತಿಳಿಯುತ್ತಿಲ್ಲ. ಫಲಿತಾಂಶ ಪ್ರಕಟವಾದ ತಕ್ಷಣ ಶಾಸಕಾಂಗ ಸಭೆ ಕರೆದು ವಿರೋಧ ಪಕ್ಷದ ನಾಯಕನ ಹೆಸರು ಘೋಷಿಸಬೇಕು. ಯಾಕಾಗಿ ವಿಳಂಬ ಮಾಡುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ. ರಾಷ್ಟ್ರೀಯ ಪಕ್ಷಕ್ಕೆ ಈ ಪರಿಸ್ಥಿತಿ ಬರಬಾರದಿತ್ತು' ಎಂದರು.

ಕೈಗಾರಿಕೆ ಅಭಿವೃದ್ಧಿಗೆ ಒತ್ತಾಯ: 'ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಲು ಸಾಕಷ್ಟು ಕಂಪನಿಗಳು ಮುಂದೆ ಬಂದಿವೆ. ಆದರೆ, ಹಿಂದಿನ ಸರ್ಕಾರ ಜಾಗ ಹಂಚಿಕೆ ಮಾಡಿಲ್ಲ. ತಕ್ಷಣ ಜಾಗ ನೀಡಿ ಕೈಗಾರಿಕೆ ಅಭಿವೃದ್ಧಿಗೆ ಮುಂದಾಗಬೇಕೆಂದು ಸರ್ಕಾರವನ್ನು ಸಹ ನಾನು ಒತ್ತಾಯಿಸುತ್ತೇನೆ' ಎಂದು ಹೇಳಿದರು.

'ಗ್ಯಾರಂಟಿ' ಜಾರಿ: ಸಿ.ಎಂ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ' ಭರವಸೆಗಳ ಜಾರಿಗೆ ಒತ್ತಡ ಹೆಚ್ಚುತ್ತಿರುವ ಬೆನ್ನಲ್ಲೆ, ಈ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಬಂಧಿಸಿದ ಐದು ಇಲಾಖೆಗಳ ಮುಖ್ಯಸ್ಥರ ಮಹತ್ವದ ಸಭೆಯನ್ನು ಸೋಮವಾರ ನಡೆಸಲಿದ್ದಾರೆ.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಬೆಳಿಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೆ ಸಭೆ ನಡೆಯಲಿದೆ. ಯೋಜನೆಯನ್ನು ಜಾರಿಗೊಳಿಸಬೇಕಿರುವ ಇಂಧನ (ಪ್ರತಿ ಮನೆಗೆ 200 ಯುನಿಟ್ ವಿದ್ಯುತ್ ಉಚಿತ-ಗೃಹ ಜ್ಯೋತಿ), ಮಹಿಳಾ ಮತ್ತು ಮಕ್ಕಳ ಕಲ್ಯಾಣ (ಪ್ರತಿ ಮನೆಯ ಯಜಮಾನಿ ಮಹಿಳೆಗೆ ₹ 2000), ಆಹಾರ (10 ಕೆ.ಜಿ ಅಕ್ಕಿ-ಅನ್ನಭಾಗ್ಯ), ಸಾರಿಗೆ (ಮಹಿಳೆಯರಿಗೆ ಸರ್ಕಾರಿ ಬಸ್ಸಿನಲ್ಲಿ ಉಚಿತ ಪ್ರಯಾಣ), ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ (ನಿರುದ್ಯೋಗಿಗಳಿಗೆ ಭತ್ಯೆ-ಯುವನಿಧಿ) ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಗೆ ಹಾಜರಾಗುವಂತೆ ಸೂಚನೆ ನೀಡಲಾಗಿದೆ.

'ಪ್ರತಿ ಇಲಾಖೆಯ ಮುಖ್ಯಸ್ಥರು, ತಮ್ಮ ಇಲಾಖೆಯ ಯೋಜನೆಯ ಅನುಷ್ಠಾನದ ಕುರಿತು ಪ್ರಾತ್ಯಕ್ಷಿಕೆ ಸಹಿತ ಅರ್ಧ ಗಂಟೆಯಲ್ಲಿ ವಿವರಗಳನ್ನು ನೀಡಬೇಕು. ಯೋಜನೆಗೆ ಫಲಾನುಭವಿಗಳನ್ನು ನಿಗದಿಪಡಿಸುವುದು, ಆರ್ಥಿಕವಾಗಿ ತಗಲುವ ವೆಚ್ಚ, ಅನುಷ್ಠಾನ ಹೇಗೆ? ಮತ್ತಿತರ ಮಾಹಿತಿಗಳ ಸಹಿತ ಸಭೆಗೆ ಹಾಜರಾಗುವಂತೆ ಸೂಚಿಸಲಾಗಿದೆ' ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಅಧಿಕಾರಿಗಳು ಸೋಮವಾರದ ಸಭೆಯಲ್ಲಿ ಮಂಡಿಸುವ ಮಾಹಿತಿಗಳ ಆಧಾರದಲ್ಲಿ ಯೋಜನೆಯ ರೂಪುರೇಷೆ ಸಿದ್ಧಪಡಿಸಲಾಗುತ್ತದೆ. ಸಂಪುಟದ ಮುಂದಿನ ಸಭೆಯಲ್ಲೇ ಐದು ಯೋಜನೆಗಳಿಗೂ ಒಪ್ಪಿಗೆ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

'ಬಿಜೆಪಿ ಜನರನ್ನು ಎತ್ತಿಕಟ್ಟುತ್ತಿದೆ'

ಬೆಂಗಳೂರು: 'ಬಿಜೆಪಿಯವರಿಗೆ ಈಗ ಮಾಡಲು ಬೇರೆ ಕೆಲಸ ಇಲ್ಲ. ಹೀಗಾಗಿ, ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾನುವಾರ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೆಲವು ಶಾಸಕರು ಮತ್ತು ಬಿಜೆಪಿ ನಾಯಕರು ವಿದ್ಯುತ್ ಬಿಲ್ ಪಾವತಿಸಬೇಡಿ, ಬಸ್‌ಗಳಲ್ಲಿ ಟಿಕೆಟ್ ಪಡೆಯಬೇಡಿ ಎಂದು ಜನರನ್ನು ಪ್ರಚೋದಿಸುತ್ತಿದ್ದಾರೆ' ಎಂದರು.

'ಪ್ರತಿ ಪ್ರಜೆಗೆ ₹15 ಲಕ್ಷ ನೀಡುವ ಹಾಗೂ ರೈತರ ₹ 1 ಲಕ್ಷದವರೆಗಿನ ಸಾಲ ಮನ್ನಾ ಮಾಡವುದಾಗಿ ಬಿಜೆಪಿಯವರು ಭರವಸೆ ನೀಡಿದ್ದರು. ಮೊದಲು ಅವರುಗಳನ್ನು ಈಡೇರಿಸಿ, ನಂತರ ಕಾಂಗ್ರೆಸ್ ಬಗ್ಗೆ ಮಾತನಾಡಲಿ' ಎಂದು ಹೇಳಿದರು.

'ನಾವು ಬಸವಣ್ಣ ಮತ್ತು ಕುವೆಂಪು ಅವರ ನಾಡಿನವರು. ಕಾಂಗ್ರೆಸ್ ಪಕ್ಷವು ನುಡಿದಂತೆ ನಡೆಯಲಿದೆ. ಎಲ್ಲ ಗ್ಯಾರಂಟಿ ಯೋಜನೆಗಳನ್ನೂ ನಮ್ಮ ಸರ್ಕಾರ ಅನುಷ್ಠಾನಕ್ಕೆ ತರಲಿದೆ' ಎಂದರು.

'ಹುದ್ದೆಗಳ ಭರ್ತಿಗೆ ಸಮಯ ಬೇಕು': 'ಎಲ್ಲ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ನಾವು ಜನರಿಗೆ ಭರವಸೆ ನೀಡಿದ್ದೇವೆ. ಶೀಘ್ರದಲ್ಲಿ ಈ ಪ್ರಕ್ರಿಯೆ ನಡೆಯಲಿದೆ' ಎಂದು ಹೇಳಿದರು.

ಗ್ಯಾರಂಟಿ ಯೋಜನೆಗಳ ಜಾರಿಗೆ ಬಿಜೆಪಿಯವರು ಸಮಯ ನೀಡಬೇಕು. ನಾವು ನಿರ್ದಿಷ್ಟ ಸಮಯದಲ್ಲಿ ಜಾರಿ ಮಾಡದಿದ್ದರೆ ಪ್ರತಿಭಟಿಸಲಿ
ಸತೀಶ ಜಾರಕಿಹೊಳಿ, ಸಚಿವ

ಕಾಂಗ್ರೆಸ್ ಗ್ಯಾರಂಟಿಗಳ ವಿರುದ್ಧ ಮುಗ್ಧ ಜನರನ್ನು ಎತ್ತಿ ಕಟ್ಟುವ ಕೆಲಸ ನಡೆಯುತ್ತಿದೆ. ಇದು ಯಾರಿಗೂ ಶೋಭೆ ತರುವಂತಹದ್ದಲ್ಲ
ಕೆ.ಎನ್. ರಾಜಣ್ಣ, ಸಚಿವ

ರಜಾ ಮಜಾ... ದಾವಣಗೆರೆಯ ಕುಂದವಾಡ ಕೆರೆಯ ವಾಯುವಿಹಾರ ಮಾರ್ಗದಲ್ಲಿ ಬಾಲಕರು ಭಾನುವಾರ ಮುಂಜಾನೆ ಸೈಕಲ್ ಸವಾರಿಯಲ್ಲಿ ತೊಡಗಿರುವುದು –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

'ಅತೃಪ್ತರ ಜೊತೆ ಶೀಘ್ರ ವರಿಷ್ಠರ ಚರ್ಚೆ'

ಸಚಿವ ಸ್ಥಾನ ಸಿಗದವರಿಗೆ ಬೇರೆ ಹುದ್ದೆ: ಸತೀಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಸಚಿವ ಸ್ಥಾನ ಸಿಗಲಿಲ್ಲ ಎಂಬ ಕಾರಣಕ್ಕೆ ಅಸಮಾಧಾನ ಮತ್ತು ಆರೋಪ ಸಹಜ. ಸಚಿವ ಸ್ಥಾನ ಕೈತಪ್ಪಿದವರನ್ನು ವರಿಷ್ಠರು ಕರೆಯಿಸಿ ಮಾತನಾಡುತ್ತಾರೆ. ಅವರಿಗೆ ಬೇರೆ ಬೇರೆ ಹುದ್ದೆಗಳನ್ನು ಕೊಡುವ ಸಾಮರ್ಥ್ಯ ಪಕ್ಷಕ್ಕಿದೆ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಜಿಲ್ಲೆಯ ಹಲವು ಶಾಸಕರಿಗೆ ಸಚಿವ ಸ್ಥಾನ ಕೈತಪ್ಪಿದ ವಿಚಾರವಾಗಿ ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುದ್ದಿಗಾರರಿಗೆ ಅವರು ಪ್ರತಿಕ್ರಿಯಿಸಿದರು.

'ಈ ಬಾರಿ ಗೆದ್ದವರ ಪೈಕಿ, ಕನಿಷ್ಠ ಮೂರು ಅಥವಾ ನಾಲ್ಕು ಬಾರಿ ಗೆದ್ದವರೇ ಹೆಚ್ಚಿನವರಿದ್ದಾರೆ. ರಾಜಕೀಯ ಸ್ಥಿತಿಗೆ ಅನುಸಾರವಾಗಿ ಜಿಲ್ಲೆಗೆ ಎರಡು ಸಚಿವ ಸ್ಥಾನ ನೀಡಲಾಗಿದೆ. ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರು ಸಚಿವ ಸ್ಥಾನ ಕೈತಪ್ಪಿದವರೊಂದಿಗೆ ಮಾತುಕತೆ ನಡೆಸಿ ಮನವೊಲಿಸುತ್ತಾರೆ' ಎಂದರು.

'ರಾಜ್ಯದಲ್ಲಿ ಮೌಢ್ಯ ನಿಷೇಧ ಕಾಯ್ದೆ ಈಗಾಗಲೇ ಜಾರಿಯಾಗಿದೆ. ಹಾಗಾಗಿ, ಮತ್ತೆ ಅದನ್ನು ನಾವು ಜಾರಿಗೆ ತರುವ ಅವಶ್ಯಕತೆ ಇಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಸಿದ್ದರಾಮಯ್ಯ ಮುಂದಿನ ಐದು ವರ್ಷಗಳ ಅವಧಿಗೆ ಮುಖ್ಯಮಂತ್ರಿಯಾಗಿರುತ್ತಾರೆಯೇ' ಎಂಬ ಪ್ರಶ್ನೆಗೆ, 'ಪಕ್ಷದ ಹಂತದಲ್ಲಿ ಯಾವ ರೀತಿ ಮಾತುಕತೆಯಾಗಿದೆ ಎಂಬುದು ಗೊತ್ತಿಲ್ಲ. ಆದರೆ, ಯಾರೇ ಆದರೂ ಕಾಂಗ್ರೆಸ್‌ನವರೇ ಮುಖ್ಯಮಂತ್ರಿಯಾಗಿರುತ್ತಾರೆ. ಮುಖ್ಯಮಂತ್ರಿ ಅವಧಿ 50:50 ಇರುತ್ತದೆಯೋ, 12 ತಿಂಗಳಿಗೊಬ್ಬರು ಆಗುತ್ತಾರೆಯೋ ಗೊತ್ತಿಲ್ಲ' ಎಂದು ಹಾಸ್ಯ ಚಟಾಕಿ ಹಾರಿಸಿದರು.

'ಬಿಜೆಪಿ ಸರ್ಕಾರದ ಯೋಜನೆಗಳನ್ನು ಮುಂದುವರಿಸುತ್ತೀರಾ ಎಂಬ ಪ್ರಶ್ನೆಗೆ, 'ಅವಶ್ಯಕವಾಗಿರುವ ಹಾಗೂ ಜನಪರ ವಾಗಿದ್ದರೆ ಯೋಜನೆಗಳನ್ನು ಮುಂದುವರಿಸುತ್ತೇವೆ. ಅನವಶ್ಯಕವಾಗಿದ್ದರೆ ಸ್ಥಗಿತಗೊಳಿಸುತ್ತೇವೆ' ಎಂದು ಅವರು ತಿಳಿಸಿದರು.

'ಜಾರಕಿಹೊಳಿ ಸಿ.ಎಂ ಸ್ಥಾನಕ್ಕೆ ಅರ್ಹರು'

ಬೆಳಗಾವಿ: 'ಸತೀಶ ಜಾರಕಿಹೊಳಿ ಅವರಿಗೆ ಉಪ ಮುಖ್ಯಮಂತ್ರಿ ಅಷ್ಟೇ ಅಲ್ಲ, ಮುಖ್ಯಮಂತ್ರಿ ಆಗುವ ಅರ್ಹತೆಯಿದೆ. ಅದಕ್ಕೆ ಕಾಲ ಕೂಡಿಬರಬೇಕು. ಅವರು ಇಂದಲ್ಲ, ನಾಳೆ ಮುಖ್ಯಮಂತ್ರಿ ಆಗುತ್ತಾರೆ' ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ಸತೀಶ ಅವರಿಗೆ ಡಿಸಿಎಂ ಸ್ಥಾನ ಕೈತಪ್ಪಿದ ವಿಚಾರವಾಗಿ ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಅಂಗನವಾಡಿ ಕಾರ್ಯಕರ್ತೆಯರ ವೇತನ ಹೆಚ್ಚಿಸುವ ಕುರಿತು ರಾಹುಲ್ ಗಾಂಧಿ ನೀಡಿದ ಭರವಸೆ ಈಡೇರಿಸುತ್ತೀರಾ ಎನ್ನುವ ಪ್ರಶ್ನೆಗೆ, 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರ ಸ್ವೀಕರಿಸಿ, ಇಲಾಖೆವಾರು ಸಭೆಗಳನ್ನು ನಡೆಸಬೇಕಿದೆ. ಆದರೆ, ನಾವು ನೀಡಿದ ವಾಗ್ದಾನ ಈಡೇರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆ' ಎಂದರು.

'ನಿಷೇಧ ಮಾಡುವುದಾಗಿ ತಿಳಿಸಿಲ್ಲ'

'ರಾಜ್ಯ ಸರ್ಕಾರದಿಂದ ನಿರ್ದಿಷ್ಟವಾಗಿ ಯಾವುದೇ ಸಂಘಟನೆಯನ್ನು ನಿಷೇಧಿಸುತ್ತೇವೆ ಎಂದು ತಿಳಿಸಿಲ್ಲ. ಈಗ ಅಂತಹ ತರಾತುರಿಯೇನಿಲ್ಲ. ಆರ್‌ಎಸ್‌ಎಸ್ ಉದಾಹರಣೆ ನೀಡಿದ್ದೇವೆಯೇ ಹೊರತು, ನಿಷೇಧಿಸುವುದಾಗಿ ಹೇಳಿಲ್ಲ' ಎಂದು ಸತೀಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳಕರ ಪ್ರತಿಕ್ರಿಯಿಸಿದರು.

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಕೋಡ್ ಸ್ಕ್ಯಾನ್ ಮಾಡಿ...

9 ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೇ 31ರ ಬಳಿಕ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, 9 ಜಿಲ್ಲೆಗಳಿಗೆ ಭಾರತೀಯ ಹವಾಮಾನ ಇಲಾಖೆ 'ಯೆಲ್ಲೋ ಅಲರ್ಟ್' ಘೋಷಿಸಿದೆ.

ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ನಗರ–ಗ್ರಾಮಾಂತರ, ರಾಮನಗರ, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಿಗೆ ಮೇ 31ರಂದು 'ಯೆಲ್ಲೋ ಅಲರ್ಟ್' ನೀಡಲಾಗಿದೆ. ಜೂನ್ 1ರಂದು ಕೋಲಾರ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ.

ಸೋಮವಾರ ಹಾಗೂ ಮಂಗಳವಾರ ಸಹ ಕರಾವಳಿ, ದಕ್ಷಿಣ ಒಳನಾಡು ಹಾಗೂ ಉತ್ತರ ಒಳನಾಡಿನ ಒಂದೆರಡು ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ನೆಚ್ಚರಿಕೆ ನೀಡಿದೆ.

ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ವೇಳೆ ಗುಡುಗು ಸಹಿತ ಮಳೆ ಆಗಬಹುದು. ಕೆಲವೊಮ್ಮೆ ಮೇಲ್ಮೈ ಸುಳಿಗಾಳಿ ಬೀಸಲಿದೆ. ಗರಿಷ್ಠ ಉಷ್ಣಾಂಶ 33 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 23 ಡಿಗ್ರಿ ಸೆಲ್ಸಿಯಸ್ ದಾಖಲಾಗಲಿದೆ.

ಭಾನುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಕಳೆದ 24 ಗಂಟೆಯಲ್ಲಿ ಹಾಸನ ಜಿಲ್ಲೆಯ ಬೇಲೂರು, ಮೈಸೂರಿನ ಹುಣಸೂರಿನಲ್ಲಿ ತಲಾ 2 ಸೆಂ.ಮೀ, ಚಿಕ್ಕಮಗಳೂರಿನ ಕಳಸ, ಉತ್ತರ ಕನ್ನಡದ ಶಿರಾಲಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಕಾರಿನ ಮೇಲೆ ಉರುಳಿದ ಮರ: ಬೆಳಗಾವಿ ನಗರದಲ್ಲಿ ಭಾನುವಾರ ಸಂಜೆ ಕೆಲಕಾಲ ಉತ್ತಮ ಮಳೆಯಾಗಿದೆ. ಇಲ್ಲಿನ ಅನಗೋಳದ ಆಶೀರ್ವಾದ ಕಲ್ಯಾಣ ಮಂಟಪದ ಬಳಿ ನಿಲ್ಲಿಸಲಾಗಿದ್ದ ಕಾರಿನ ಮೇಲೆ ಮರ ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಸಾವು, ನೋವು ಸಂಭವಿಸಿಲ್ಲ.

31ಕ್ಕೆ ಶಾಲಾ ಪ್ರಾರಂಭೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023–24ನೇ ಸಾಲಿನ ಶೈಕ್ಷಣಿಕ ಅವಧಿ ಇದೇ ಮೇ 29ರಿಂದ ಆರಂಭವಾಗಲಿದ್ದು, 31ರಂದು ರಾಜ್ಯದಾದ್ಯಂತ ಏಕಕಾಲಕ್ಕೆ ಶಾಲಾ ಪ್ರಾರಂಭೋತ್ಸವ ಹಮ್ಮಿಕೊಳ್ಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚಿಸಿದೆ.

ರಾಜ್ಯದ ಎಲ್ಲ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರು, ಶಿಕ್ಷಕರು 29ರಂದು ಶಾಲೆಗೆ ಬಂದು ಸಿದ್ಧತೆ ನಡೆಸಬೇಕು. ಶಾಲೆಗಳನ್ನು ಸಿಂಗರಿಸಬೇಕು. ಹಬ್ಬದ ವಾತಾವರಣ ನಿರ್ಮಿಸಬೇಕು. 31ರಂದು ಶಾಲಾ ಆರಂಭೋತ್ಸವ ಏರ್ಪಡಿಸಿ, ಅಂದಿನಿಂದಲೇ ತರಗತಿ ಆರಂಭಿಸಬೇಕು. ಜೂನ್ 30ರ ಒಳಗೆ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

ಅ.7ರವರೆಗೆ (2023) ಮೊದಲ ಅವಧಿಯ ತರಗತಿಗಳು ನಡೆಯಲಿವೆ. ಅ.8ರಿಂದ 24ರವರೆಗೆ ದಸರಾ ರಜೆ. ಮತ್ತೆ ಅ. 25ರಿಂದ 2024ರ ಏಪ್ರಿಲ್ 10ರವರೆಗೆ ಎರಡನೇ ಅವಧಿಯ ತರಗತಿಗಳು ನಡೆಯಲಿವೆ. ಏ.11ರಿಂದ ಮೇ 28ರ ವರೆಗೆ ಬೇಸಿಗೆ ರಜೆ ನೀಡಲಾಗುತ್ತದೆ.

ಶಾಲೆಗಳು ಪ್ರಾರಂಭವಾಗುತ್ತಿರುವ ಪ್ರಯುಕ್ತ ಕಲಬುರಗಿಯ ತಾರಫೈಲ್‌ನಲ್ಲಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಭಾನುವಾರ ಶಿಕ್ಷಕರು ಸ್ವಚ್ಛತೆಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಸಂಕ್ಷಿಪ್ತ ಸುದ್ದಿ

ಕಲುಷಿತ ನೀರು ಸೇವನೆ: ತುರ್ತು ಕ್ರಮಕ್ಕೆ ಸಿ.ಎಂ ಸೂಚನೆ

ಬೆಂಗಳೂರು: ರಾಯಚೂರು ಜಿಲ್ಲೆಯ ರೇಕಲಮರಡಿ ಬಳಿಯ ಗೊರೆಬಾಳದಲ್ಲಿ ಕಲುಷಿತ ನೀರು ಕುಡಿದು ಜನ ಅಸ್ವಸ್ಥಗೊಂಡಿರುವ ಪ್ರಕರಣದಲ್ಲಿ ತುರ್ತು ಕ್ರಮ ಕೈಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

'ಘಟನೆಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲಾ ಪಂಚಾಯಿತಿ ಸಿಇಒ ಜತೆ ಭಾನುವಾರ ದೂರವಾಣಿ ಮೂಲಕ ಮಾಹಿತಿ ಪಡೆದಿದ್ದಾರೆ. ಅಸ್ವಸ್ಥಗೊಂಡಿರುವವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಬೇಕು. ಮೃತರ ಕುಟುಂಬಕ್ಕೆ ಪರಿಹಾರ ವಿತರಿಸಬೇಕು ಎಂಬ ಸೂಚಿಸಿದ್ದಾರೆ' ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ.

ರಾಯಚೂರು ಜಿಲ್ಲೆಯ ಗ್ರಾಮಗಳಲ್ಲಿ ಕಲುಷಿತ ನೀರು ಕುಡಿದು ಜನ ಅಸ್ವಸ್ಥರಾಗುತ್ತಿರುವ ಘಟನೆ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದ್ದಾರೆ.

ತೊಂದರೆ ಇರುವ ಜನವಸತಿ ಗ್ರಾಮಗಳಿಂದ ನೀರಿನ ಮಾದರಿಯ ಪರೀಕ್ಷೆ ನಡೆಸಿ ವರದಿ ತರಿಸಿಕೊಳ್ಳಬೇಕು. ಶುದ್ಧ ನೀರರು ಪೂರೈಕೆಗೆ ಕ್ರಮ ವಹಿಸಬೇಕು ಎಂದು ಸೂಚಿಸಿದ್ದಾರೆ ಎಂದು ಮುಖ್ಯಮಂತ್ರಿಯವರ ಕಚೇರಿ ತಿಳಿಸಿದೆ.

ಶಾಂತಿ ಭಂಗ ಮಾಡಿದರೆ ಕ್ರಮ ಖಚಿತ: ಪ್ರಿಯಾಂಕ್ ಖರ್ಗೆ

ಬೆಂಗಳೂರು: 'ಶಾಂತಿ ಭಂಗ ಮಾಡುವ ಯಾವುದೇ ಸಂಘಟನೆಯಾದರೂ ಕಾನೂನು ಕ್ರಮ ಖಚಿತ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಭಾನುವಾರ ಪುನರುಚ್ಚರಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ತಾಕತ್ತಿದ್ದರೆ ನಿಷೇಧಿಸಿ ಎಂದು ಬಿಜೆಪಿಯವರು ಹೇಳುತ್ತಾರೆ. ಅವರಿಗೆ ತಾಕತ್ತಿದ್ದರೆ ಕಾನೂನು ಉಲ್ಲಂಘಿಸಲಿ. ಬಾಬಾ ಅಂಬೇಡ್ಕರ್ ಅವರ ಸಂವಿಧಾನ ಏನು ಎಂದು ತೋರಿಸ್ತೇವೆ' ಎಂದರು.

'ಸಂವಿಧಾನ ಪಾಲಿಸುತ್ತೇವೆ ಎಂದು ಬಿಜೆಪಿಯವರು ಯಾಕೆ ಹೇಳುವುದಿಲ್ಲ. ವಿವೇಕ ಇಲ್ಲದೇ ಮಾತನಾಡುತ್ತಿದ್ದಾರೆ. ಸರ್ಕಾರದ ಯೋಜನೆ ಮಾನದಂಡ ಇಲ್ಲದೆಯೇ ನಡೆಯುತ್ತದೆಯೇ. ಅಷ್ಟೂ ವಿವೇಕ ಬಿಜೆಪಿಯವರಿಗೆ ಇಲ್ಲವೇ' ಎಂದೂ ಪ್ರಶ್ನಿಸಿದರು.

ಪರಮೇಶ್ವರ ಮನೆಗೆ ಪೇಜಾವರಶ್ರೀ ಭೇಟಿ

ಬೆಂಗಳೂರು: ಸಚಿವ ಜಿ.ಪರಮೇಶ್ವರ ಅವರ ಇಲ್ಲಿನ ಸದಾಶಿವನಗರದ ಮನೆಗೆ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರು ಭಾನುವಾರ ಭೇಟಿ ನೀಡಿದ್ದು, ಕುಶಲೋಪರಿ ವಿಚಾರಿಸಿದರು.

ಸಿದ್ದರಾಮಯ್ಯ ಸಂಪುಟದಲ್ಲಿ ಗೃಹ ಖಾತೆಯ ಜವಾಬ್ದಾರಿ ವಹಿಸಿಕೊಳ್ಳುವುದು ಬಹುತೇಕ ಖಚಿತವಾಗಿರುವ ಬೆನ್ನಲ್ಲೇ ಶ್ರೀಗಳ ಭೇಟಿ ಕುತೂಹಲ ಮೂಡಿಸಿತ್ತು. ಶ್ರೀಗಳಿಗೆ ಪರಮೇಶ್ವರ ದಂಪತಿ ಫಲತಾಂಬೂಲ ನೀಡಿ ನಮಸ್ಕರಿಸಿದರು.

ನಂತರ ಮಾತನಾಡಿದ ಪರಮೇಶ್ವರ, 'ಯಶಸ್ವಿಯಾಗಿ ಸರ್ಕಾರ ನಡೆಸಲು ಎಲ್ಲರ ಸಹಕಾರ ಅಗತ್ಯ. ಯಾವ ಸಂಘಟನೆಗಳನ್ನೂ ನಿಷೇಧಿಸುವ ಪ್ರಶ್ನೆ ಸದ್ಯಕ್ಕೆ ಇಲ್ಲ. ಕಾನೂನು ಉಲ್ಲಂಘಿಸುವ ಸಂಘಟನೆಗಳ ವಿರುದ್ಧ ಕ್ರಮ ಖಚಿತ. ನಿಯಮಕ್ಕೆ ಅನುಗುಣವಾಗಿ ನಡೆಯುವ ಸಂಘಟನೆಗಳನ್ನು ನಿಷೇಧಿಸುವ ಪ್ರಶ್ನೆಯೇ ಇಲ್ಲ' ಎಂದರು.

ಖಾತೆಗಳ ಅಧಿಕೃತ ಹಂಚಿಕೆಯಾಗದಿದ್ದರೂ ಕಮಲ್ ಪಂಥ್ ಸೇರಿದಂತೆ ಹಲವು ಹಿರಿಯ ಪೊಲೀಸ್ ಅಧಿಕಾರಿಗಳು ಪರಮೇಶ್ವರ ಅವರ ಮನೆಗೆ ಭೇಟಿ ನೀಡಿ ಶುಭಾಶಯ ಕೋರಿದರು.

'ಸಂಕ್ರಮಣ ಬಳಿಕ ಅಯೋಧ್ಯೆಯಲ್ಲಿ ರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಮಕರ ಸಂಕ್ರಮಣ ನಂತರದ ಶುಭ ಮುಹೂರ್ತದಲ್ಲಿ ಅಯೋಧ್ಯೆಯ ರಾಮಮಂದಿರದಲ್ಲಿ ಬಾಲ ರಾಮನ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯ ಜರುಗಲಿದೆ' ಎಂದು ವಿಶ್ವ ಹಿಂದೂ ಪರಿಷತ್ ಕೇಂದ್ರೀಯ ಸಹ ಕಾರ್ಯದರ್ಶಿ, ಅಯೋಧ್ಯೆಯ ರಾಮ ಮಂದಿರ ನಿರ್ಮಾಣದ ಉಸ್ತುವಾರಿಯಲ್ಲಿ ಒಬ್ಬರಾದ ಗೋಪಾಲ್ ನಾಗರಕಟ್ಟೆ ಹೇಳಿದರು.

ಇಲ್ಲಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಭಾನುವಾರ ನಡೆದ ಕಟ್ಟಡ ವಾಸ್ತುಪೂಜೆ ಮತ್ತು ಲೋಕಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಮ ಮಂದಿರ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ಜೂನ್ ಅಂತ್ಯದ ವೇಳೆಗೆ ನೆಲ ಮಹಡಿ ರಚನೆಯು ಸಂಪೂರ್ಣವಾಗಿ ಮುಗಿಯಲಿದೆ. ವಿದ್ಯುತ್ ಸಂಪರ್ಕ, ಕಟ್ಟಡದ ಹೊಳಪು, ಮೂರ್ತಿಗಳ ಕೆತ್ತನೆಯೊಂದಿಗೆ ಡಿಸೆಂಬರ್ ಒಳಗೆ ಮುಗಿಸುತ್ತೇವೆ' ಎಂದರು.

'ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಗೆ ಸಮಯ ನಿಗದಿ ಆಗಿದೆ. ಆರು ತಿಂಗಳ ಸಮಯ ಇದ್ದು, ಒಂದು ಮೂರ್ತಿ ಕೆತ್ತನೆಗೆ 4ರಿಂದ 5 ತಿಂಗಳು ಹಿಡಿಯುತ್ತದೆ. ಒಂದು ಮೂರ್ತಿ ಕೆತ್ತನೆಯ ಕೊನೆ ಗಳಿಗೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೆ, ಮತ್ತೊಂದು ಮೂರ್ತಿಗೆ ಆರು ತಿಂಗಳು ಬೇಕಾಗುತ್ತದೆ. ಇದನ್ನು ತಪ್ಪಿಸಲು ರಾಜಸ್ಥಾನದ ಒಬ್ಬ ಹಾಗೂ ಕರ್ನಾಟಕದ ಇಬ್ಬರು ಕಲಾವಿದರು ಮೂರು ರಾಮನ ಮೂರ್ತಿಗಳನ್ನು ಕೆತ್ತುವರು. ಆಯ್ಕೆ ಸಮಿತಿಯು ಅವುಗಳಲ್ಲಿ ಸುಂದರವಾದ ಒಂದು ಮೂರ್ತಿಯನ್ನು ಅಂತಿಮಗೊಳಿಸಲಿದೆ' ಎಂದರು.

'ಅಯೋಧ್ಯೆ ಚಿಕ್ಕ ನಗರ. ಮಂದಿರ ಲೋಕಾರ್ಪಣೆಗೆ ಬರುವಂತಹ ರಾಮ ಭಕ್ತರಿಗೆ ವ್ಯವಸ್ಥೆ ಕಲ್ಪಿಸುವುದು ಕಷ್ಟವಾಗುತ್ತದೆ. ಹೀಗಾಗಿ, ಒಂದೊಂದು ಪ್ರಾಂತದವರಿಗೆ ಒಂದೊಂದು ದಿನ ಆಹ್ವಾನಿಸಲಾಗುವುದು. ಶ್ರೀರಾಮನ ಮಂದಿರ ರಾಷ್ಟ್ರದ ಮಂದಿರವಾಗಲಿದೆ' ಎಂದ ಅವರು, 'ಕಾಶಿಯ ಶಿವ ಕೂಡ ತನ್ನ ಮೂಲ ಸ್ಥಾನದಲ್ಲಿ ಪ್ರತಿಷ್ಠಾಪನೆ ಆಗಬೇಕು. ಮಥುರಾ ಕೂಡ ನಮ್ಮ ಕೈಗೆ ಬರಬೇಕು' ಎಂದರು. .

ಭದ್ರಾವತಿಯಲ್ಲಿ ಮತೀಯ ಗೂಂಡಾಗಿರಿ

ಮುಸ್ಲಿಂ ವಿದ್ಯಾರ್ಥಿನಿ ಕರೆ ತಂದಿದ್ದಕ್ಕೆ ಹಲ್ಲೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮುಸ್ಲಿಂ ವಿದ್ಯಾರ್ಥಿನಿಯನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಬಂದ ಕಾರಣಕ್ಕೆ ಪ್ಯಾರಾ ಮೆಡಿಕಲ್ ಕಾಲೇಜಿನ ಮೂವರು ಹಿಂದೂ ವಿದ್ಯಾರ್ಥಿಗಳ ಮೇಲೆ ಭದ್ರಾವತಿಯಲ್ಲಿ ಶುಕ್ರವಾರ ಗುಂಪೊಂದು ಹಲ್ಲೆ ನಡೆಸಿದೆ.

ಭದ್ರಾವತಿಯ ವಿಶ್ವೇಶ್ವರಯ್ಯ ನಗರದ ಹಿಂದೂ ವಿದ್ಯಾರ್ಥಿ ಹಾಗೂ ಖಲಂದರ್ ನಗರದ ಮುಸ್ಲಿಂ ವಿದ್ಯಾರ್ಥಿನಿ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಸಹಪಾಠಿಗಳು. ವಿದ್ಯಾರ್ಥಿನಿಯ ಅಕ್ಕನಿಗೆ ಅಪಘಾತವಾಗಿರುವ ಬಗ್ಗೆ ಕಾಲೇಜಿನಲ್ಲಿದ್ದಾಗ ಮಾಹಿತಿ ಲಭಿಸಿದೆ.

ಹೀಗಾಗಿ ವಿದ್ಯಾರ್ಥಿಯು ತನ್ನ ಸ್ನೇಹಿತರಿಂದ ಬೈಕ್ ಪಡೆದು ಆಕೆಯನ್ನು ಖಲಂದರ್ ನಗರದ ಮನೆಗೆ ಕರೆದುಕೊಂಡು ಬಂದಿದ್ದ. ವಾಪಸ್ ತೆರಳುವಾಗ ಅಲ್ಲಿನ ಝಂಡಾ ಕಟ್ಟೆಯ ಬಳಿ ಗುಂಪೊಂದು ವಿದ್ಯಾರ್ಥಿಯನ್ನು ಅಡ್ಡಗಟ್ಟಿದೆ. ಆತನ ಹೆಸರು ಕೇಳಿದ ಗುಂಪು, 'ನಮ್ಮ ಸಮುದಾಯದ ಹುಡುಗಿಯನ್ನು ಏಕೆ ಬೈಕ್‌ನಲ್ಲಿ ಕೂರಿಸಿಕೊಂಡು ಬಂದೆ' ಎಂದು ಪ್ರಶ್ನಿಸಿ ಹಲ್ಲೆ ಮಾಡಿದೆ.

ಈ ವಿಷಯ ತಿಳಿದು ಸ್ಥಳಕ್ಕೆ ಬಂದ ವಿದ್ಯಾರ್ಥಿಯ ಇಬ್ಬರು ಸ್ನೇಹಿತರ ಮೇಲೂ ಹಲ್ಲೆ ಮಾಡಲಾಗಿದೆ. ಈ ವೇಳೆ ಸ್ಥಳದಲ್ಲಿದ್ದ ಮಿಜಾನ್‌ಖಾನ್ ಎಂಬುವರು ಜಗಳ ಬಿಡಿಸಿ ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಈ ಬಗ್ಗೆ ಭದ್ರಾವತಿಯ ಹಳೆನಗರ ಪೊಲೀಸ್ ಠಾಣೆಗೆ ವಿದ್ಯಾರ್ಥಿಯು ಭಾನುವಾರ ದೂರು ನೀಡಿದ್ದಾರೆ.

ಮುಖ್ಯಾಂಶಗಳು

- ಪ್ಯಾರಾ ಮೆಡಿಕಲ್ ಕಾಲೇಜಿನ 3 ಹಿಂದೂ ವಿದ್ಯಾರ್ಥಿಗಳ ಮೇಲೆ ಹಲ್ಲೆ
- ಭದ್ರಾವತಿಯ ಹಳೆನಗರ ಪೊಲೀಸ್ ಠಾಣೆಗೆ ದೂರು

₹2000 ನೋಟು ವಿನಿಮಯ ಪ್ರಶ್ನಿಸಿದ್ದ ಅರ್ಜಿ: ಇಂದು ತೀರ್ಪು

ನವದೆಹಲಿ: ಬ್ಯಾಂಕ್‌ಗಳಲ್ಲಿ ಗುರುತಿನ ಚೀಟಿ ಇಲ್ಲದೇ ₹ 2000 ಮುಖಬೆಲೆಯ ನೋಟುಗಳ ವಿನಿಮಯಕ್ಕೆ ಅವಕಾಶ ನೀಡಿರುವ ಆರ್‌ಬಿಐ, ಎಸ್‌ಬಿಐನ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿ ಕುರಿತು ದೆಹಲಿ ಹೈಕೋರ್ಟ್ ಸೋಮವಾರ ತೀರ್ಪು ಪ್ರಕಟಿಸಲಿದೆ.

ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅರ್ಜಿ ಸಲ್ಲಿಸಿದ್ದರು. ಮುಖ್ಯ ನ್ಯಾಯಮೂರ್ತಿ ಸುಭಾಷ್ ಚಂದ್ರ ಶರ್ಮ ಮತ್ತು ನ್ಯಾಯಮೂರ್ತಿ ಸುಬ್ರಮಣಿಯಮ್ ಪ್ರಸಾದ್ ಅವರಿದ್ದ ಪೀಠವು ಮೇ 23ರಂದು ವಿಚಾರಣೆ ನಡೆಸಿ ತೀರ್ಪು ಕಾಯ್ದಿರಿಸಿತ್ತು.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
'ಇ-ಕೋರ್ಸ್'ನಲ್ಲಿ ಗ್ರಾಫಿಕ್ ಡಿಸೈನ್ ಕಲಿಕೆ...

ಮುರುಘಾ ಮಠಕ್ಕೆ ಬಸವಪ್ರಭು ಸ್ವಾಮೀಜಿ ಉಸ್ತುವಾರಿ 4
40 ಡ್ರೋನ್ ಹೊಡೆದುರುಳಿಸಿದ ಉಕ್ರೇನ್ ಸೇನೆ
ಡಿಜಿಟಲೀಕರಣ: ಕೆ.ಸಿ. ಜನರಲ್ ಪ್ರಥಮ 4
ಕೀವ್: ರಷ್ಯಾದಿಂದ ಡ್ರೋನ್ ದಾಳಿ 8

ನೆರವೇರಿದ ಗಣಪತಿ ಹೋಮ, ಸರ್ವಧರ್ಮ ಪ್ರಾರ್ಥನೆ • ರಾಷ್ಟ್ರಪತಿ, ಉಪ ರಾಷ್ಟ್ರಪತಿಗಿಲ್ಲ ಆಹ್ವಾನ

ಮಾತಿನ ಮನೆಗೆ ನೂತನ ಭವನ

ಸಂಸತ್ ಕಟ್ಟಡ ಉದ್ಘಾಟಿಸಿದ ಪ್ರಧಾನಿ • 22 ವಿರೋಧ ಪಕ್ಷಗಳಿಂದ ಕಾರ್ಯಕ್ರಮಕ್ಕೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಸೇರಿದಂತೆ 22 ವಿರೋಧ ಪಕ್ಷಗಳ ಬಹಿಷ್ಕಾರ, ಮಹಿಳಾ ಕುಸ್ತಿಪಟುಗಳನ್ನು ಪೊಲೀಸರು ವಶಕ್ಕೆ ಪಡೆಯುವಾಗ ನಡೆದ ಗದ್ದಲ, ತಳ್ಳಾಟದ ಬೆಳವಣಿಗೆಗಳ ನಡುವೆಯೇ ಪ್ರಧಾನಿ ನರೇಂದ್ರ ಮೋದಿ ಅವರು ನೂತನ ಸಂಸತ್ ಭವನದ ಉದ್ಘಾಟನೆಯನ್ನು ಭಾನುವಾರ ಶಾಸ್ತ್ರೋಕ್ತವಾಗಿ ನೆರವೇರಿಸಿದರು.

ಸಮಾರಂಭವನ್ನು ಎರಡು ಭಾಗಗಳಲ್ಲಿ ಆಯೋಜಿಸಲಾಗಿತ್ತು. ಒಂದು ನೂತನ ಸಂಸತ್ ಭವನದ ಉದ್ಘಾಟನೆ. ಎರಡನೆಯದು ಹಿಂದುತ್ವ ಸಿದ್ಧಾಂತವಾದಿ ವಿ.ಡಿ. ಸಾವರ್ಕರ್ ಅವರ ಜಯಂತಿ ಕಾರ್ಯಕ್ರಮ.

ಪ್ರಧಾನಿ ಮೋದಿ ಅವರು ನೂತನ ಸಂಸತ್ ಭವನಕ್ಕೆ ಬೆಳಿಗ್ಗೆ 7.30ರ ಸುಮಾರಿಗೆ ಬಂದರು. ನಂತರ ಧಾರ್ಮಿಕ ಕಾರ್ಯಕ್ರಮಗಳು ಒಂದರ ನಂತರ ಒಂದರಂತೆ ಜರುಗಿದವು.

ಪ್ರಧಾನಿ ಮೋದಿ ಅವರು 'ಗಣಪತಿ ಹೋಮ'ವನ್ನು ಮೊದಲಿಗೆ ನೆರವೇರಿಸಿದರು. ಕರ್ನಾಟಕದ ಶೃಂಗೇರಿ ಮಠದ ವೈದಿಕರು ಹೋಮವನ್ನು ನಡೆಸಿಕೊಟ್ಟರು. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರೂ ಪ್ರಧಾನಿ ಅವರೊಂದಿಗೆ ಈ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು. ಸಂಸತ್ ಭವನದ ಎದುರು ಇರುವ ಮಹಾತ್ಮ ಗಾಂಧಿ ಅವರ ಪ್ರತಿಮೆಯ ಎದುರಿನಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಇದಾದ ಬಳಿಕ, ಐತಿಹಾಸಿಕ ಮಹತ್ವದ್ದು ಎಂದು ಹೇಳಲಾದ 'ಸೆಂಗೋಲ್' ಅನ್ನು ತಮಿಳುನಾಡಿನ ಆಧೀನಂ ಪೀಠದ ಯತಿಗಳ ಸಮೂಹದೊಂದಿಗೆ ಪ್ರಧಾನಿ ಅವರು ನೂತನ ಸಂಸತ್ ಭವನದ ಒಳಗೆ ಮೆರವಣಿಗೆ ಮೂಲಕ ಕೊಂಡೊಯ್ದರು. ಈ ವೇಳೆ 'ನಾದಸ್ವರ' ನುಡಿಸಿ ಮಂತ್ರಗಳನ್ನು ಉಚ್ಚರಿಸಲಾಯಿತು. ಸ್ಪೀಕರ್ ಪೀಠದ ಬಲ ಬದಿಯಲ್ಲಿ 'ಸೆಂಗೋಲ್' ಅನ್ನು ಪ್ರತಿಷ್ಠಾಪಿಸಲಾಯಿತು.

ಜೈನ, ಇಸ್ಲಾಂ, ಬೌದ್ಧ, ಸಿಖ್ ಸೇರಿದಂತೆ ಸರ್ವಧರ್ಮ ಪ್ರಾರ್ಥನೆ ನಡೆಯಿತು. ನೂತನ ಸಂಸತ್ ಭವನದ ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ಭಾಗಿಯಾಗಿದ್ದ ಕಾರ್ಮಿಕ ಸಮೂಹವನ್ನು ಪ್ರಧಾನಿ ಮೋದಿ ಅವರು ಸನ್ಮಾನಿಸಿದರು.

ಶಿಷ್ಟಾಚಾರದ ಕಾರಣಗಳಿಂದಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ನೂತನ ಸಂಸತ್ ಭವನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ. ಆದರೆ, ಇಬ್ಬರೂ ತಮ್ಮ ಸಂದೇಶಗಳನ್ನು ಕಳುಹಿಸಿದ್ದರು. ರಾಜ್ಯಸಭೆಯ ಉಪ ಸಭಾಪತಿ ಹರಿವಂಶ್ ಅವರು ಇಬ್ಬರ ಸಂದೇಶಗಳನ್ನು ಓದಿದರು. ನರೇಂದ್ರ ಮೋದಿ ಅವರು ಮಧ್ಯಾಹ್ನದ ವೇಳೆಗೆ ಭಾಷಣ ಮಾಡಿದರು.

ನೂತನ ಸಂಸತ್ ಭವನದ ಉದ್ಘಾಟನೆಯ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಸೆಂಗೋಲ್' ಎದುರು ಉದ್ದಂಡ ನಮಸ್ಕಾರ ಮಾಡಿದರು –ಪಿಟಿಐ ಚಿತ್ರ

'ಅಭಿವೃದ್ಧಿಶೀಲ ಭಾರತ'ಕ್ಕೆ ನಾಂದಿ: ಮೋದಿ

'ಹೊಸ ಸಂಸತ್ ಭವನವು, ಗುಲಾಮಗಿರಿ ಮನಃಸ್ಥಿತಿಯನ್ನು ಹಿಂದೆಬಿಟ್ಟು 'ಅಭಿವೃದ್ಧಿಶೀಲ ಭಾರತ'ಕ್ಕೆ ನಾಂದಿ ಹಾಡಿದೆ. ನವ ಭಾರತದ ಆಶೋತ್ತರಗಳ ಪ್ರತಿಬಿಂಬವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. 'ಇತರ ದೇಶಗಳನ್ನು ಅಭಿವೃದ್ಧಿಶೀಲವಾಗಿಸಲು ಈ 'ಅಭಿವೃದ್ಧಿಶೀಲ ಭಾರತ'ವು ಸಹಕಾರಿಯಾಗಲಿದೆ' ಎಂದೂ ಹೇಳಿದರು.

'ಭಾರತವು ಈಗ ತನ್ನ ಪ್ರಗತಿಯ ಪ್ರಯಾಣವನ್ನು ಆರಂಭಿಸಿದೆ. ನಮ್ಮ ಪರಂಪರೆಯನ್ನು ಉಳಿಸಿಕೊಂಡೇ ಅಭಿವೃದ್ಧಿಯ ಹೊಸ ಆಯಾಮದೊಂದಿಗೆ 'ಅಮೃತಕಾಲ'ವು ಮುನ್ನುಗ್ಗುತ್ತಿದೆ. ಈ ಕಾಲವು ದೇಶಕ್ಕೆ ಹೊಸ ದಿಕ್ಕನ್ನು ನೀಡಿದೆ. ಈ ಕಾಲವೇ ಜನರ ಆಶೋತ್ತರಗಳನ್ನು ಆಗುಮಾಡುತ್ತಿದೆ' ಎಂದರು.

'ಭಾರತವು ಪ್ರಜಾಪ್ರಭುತ್ವದ ದೇಶ ಮಾತ್ರವಲ್ಲ. ಅದು ಪ್ರಜಾಪ್ರಭುತ್ವದ ತಾಯಿ ಕೂಡ. ನಮ್ಮ 'ಅಭಿವೃದ್ಧಿಶೀಲ ಭಾರತ'ದ ಕನಸು ನನಸಾಗುವುದನ್ನು ಈ ನೂತನ ಭವನ ನೋಡಲಿದೆ. ನಮ್ಮ ಪ್ರಜಾಪ್ರಭುತ್ವವು ನಮ್ಮ ಸ್ಫೂರ್ತಿ, ನಮ್ಮ ಸಂವಿಧಾನವು ನಮ್ಮ ಪರಿಹಾರ; ಸ್ಫೂರ್ತಿ ಮತ್ತು ಪರಿಹಾರ ಎರಡನ್ನೂ ಪ್ರತಿನಿಧಿಸುವುದು ಸಂಸತ್ತು' ಎಂದು ಹೇಳಿದರು.

'ಪ್ರಜಾಸತ್ತಾತ್ಮಕ ಸಭೆ ಮತ್ತು ಸಮಿತಿಗಳ ತತ್ವಗಳನ್ನು ವೇದಗಳು ಬೋಧಿಸುತ್ತವೆ. ಗಣರಾಜ್ಯದ ವಿವರಣೆಯನ್ನು ನಾವು ಮಹಾಭಾರತದಲ್ಲಿ ಕಾಣಬಹುದು. ಭಾರತವು ವೈಶಾಲಿಯ (ಮಹಾವೀರ ಜನಿಸಿದ ಸ್ಥಳ) ಪ್ರಜಾಪ್ರಭುತ್ವವನ್ನು ಕಂಡಿದೆ. ಬಸವಣ್ಣ ಅವರ ಅನುಭವ ಮಂಟಪವು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ' ಎಂದರು.

'ಈ ಕಟ್ಟಡಕ್ಕೆ ದೊಡ್ಡ ಪರಂಪರೆ ಇದೆ. ಇಲ್ಲಿ ವಾಸ್ತು ಇದೆ. ಕಲೆ ಇದೆ. ಸಂಸ್ಕೃತಿ ಇದೆ. ಈ ಎಲ್ಲದರ ಜೊತೆಗೆ ಸಂವಿಧಾನವಿದೆ' ಎಂದರು.

> ರಾಷ್ಟ್ರಪತಿಯಿಂದ ಉದ್ಘಾಟನೆಯ ಹಕ್ಕನ್ನು ಕಿತ್ತುಕೊಳ್ಳಲಾಯಿತು. ಮಹಿಳಾ ಕುಸ್ತಿಪಟುಗಳಿಗೆ ಸರ್ವಾಧಿಕಾರಿ ಧೋರಣೆಯೊಂದಿಗೆ ರಸ್ತೆಯಲ್ಲಿ ಹೊಡೆಯಲಾಯಿತು. ಅಲ್ಲಿಗೆ ಪ್ರಜಾಪ್ರಭುತ್ವ, ರಾಷ್ಟ್ರೀಯತೆ, ಹೆಣ್ಣುಮಕ್ಕಳನ್ನು ಉಳಿಸಿ ಎಂಬ ಬಿಜೆಪಿ–ಆರ್‌ಎಸ್‌ಎಸ್‌ನ ಮೂರು ಸುಳ್ಳು ಸಿದ್ಧಾಂತಗಳು ದೇಶದೆದುರು ನಗ್ನವಾದವು
>
> **ಮಲ್ಲಿಕಾರ್ಜುನ ಖರ್ಗೆ**
> ಎಐಸಿಸಿ ಅಧ್ಯಕ್ಷ

> ಸಮಾರಂಭದಲ್ಲಿ ನಡೆದ ಧಾರ್ಮಿಕ ವಿಧಿವಿಧಾನಗಳನ್ನು ನೋಡಿದರೆ ದೇಶವನ್ನು ಹಲವು ಶತಮಾನಗಳ ಹಿಂದಕ್ಕೆ ಒಯ್ಯುವಂತೆ ತೋರುತ್ತಿದೆ. ವಿಜ್ಞಾನದ ಕುರಿತು ಯಾವುದೇ ರಾಜಿ ಸಲ್ಲ. ಸಮಾಜವನ್ನು ವೈಜ್ಞಾನಿಕ ಮನೋಭಾವದೊಂದಿಗೆ ನಿರ್ಮಿಸಲು ನೆಹರೂ ಅವರು ಶ್ರಮಪಟ್ಟಿದ್ದರು. ಆದರೆ, ಈಗ ಆಗುತ್ತಿರುವುದು ಇದಕ್ಕೆ ವಿರುದ್ಧವಾದುದು
>
> **ಶರದ್ ಪವಾರ್**
> ಎನ್‌ಸಿಪಿ ಮುಖ್ಯಸ್ಥ

> ರಾಷ್ಟ್ರಪತಿ, ಉಪ ರಾಷ್ಟ್ರಪತಿ ಮತ್ತು ವಿರೋಧ ಪಕ್ಷಗಳ ಅನುಪಸ್ಥಿತಿಯಲ್ಲಿ 'ನವ ಭಾರತ'ದ ಘೋಷಣೆ ಮಾಡಲಾಗಿದೆ. ಭಾರತ ಅಂದರೆ ದೇಶ ಮತ್ತು ನಾಗರಿಕರು; ನವ ಭಾರತ ಎಂದರೆ ರಾಜ ಮತ್ತು ಪ್ರಜೆ
>
> **ಸೀತಾರಾಂ ಯೆಚೂರಿ**
> ಸಿಪಿಎಂ ಪ್ರಧಾನ ಕಾರ್ಯದರ್ಶಿ

ಇನ್ನಷ್ಟು ಸುದ್ದಿಗಳು 9

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕುಸ್ತಿಪಟು ಸಾಕ್ಷಿ ಮಲಿಕ್ ಅವರನ್ನು ಪೊಲೀಸರು ಭಾನುವಾರ ವಶಕ್ಕೆ ಪಡೆದರು–ಪಿಟಿಐ ಚಿತ್ರ

ನೂತನ ಸಂಸತ್ ಭವನದ ಬಳಿ ತೆರಳಲು ಯತ್ನ

ಕುಸ್ತಿಪಟುಗಳು ಪೊಲೀಸ್ ವಶಕ್ಕೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಕುಸ್ತಿಪಟುಗಳು ನೂತನ ಸಂಸತ್ ಭವನದ ಬಳಿಗೆ ಹೋಗಲು ಮುಂದಾದಾಗ ಪೊಲೀಸರು ಅವರನ್ನು ಭಾನುವಾರ ವಶಕ್ಕೆ ಪಡೆದರು.

ಅಂತರರಾಷ್ಟ್ರೀಯ ಮಟ್ಟದ ಕುಸ್ತಿಪಟುಗಳಾದ ವಿನೇಶಾ ಪೋಗಟ್, ಸಾಕ್ಷಿ ಮಲಿಕ್ ಮತ್ತು ಬಜರಂಗ್ ಪೂನಿಯಾ ಅವರನ್ನು ಕಾನೂನು ಮತ್ತು ಸುವ್ಯವಸ್ಥೆ ಉಲ್ಲಂಘಿಸಿದ ಆರೋಪದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಜಂತರ್‌ಮಂತರ್‌ನಲ್ಲಿ ವಿನೇಶಾ ಪೋಗಟ್, ಸಂಗೀತಾ ಪೋಗಟ್ ಮತ್ತು ಇತರರು ಬ್ಯಾರಿಕೇಡ್‌ಗಳನ್ನು ದಾಟಲು ಯತ್ನಿಸಿದಾಗ ಪೊಲೀಸರು ಮತ್ತು ಕುಸ್ತಿಪಟುಗಳ ನಡುವೆ ನೂಕಾಟ, ತಳ್ಳಾಟ ನಡೆದಿದೆ.

ಪೊಲೀಸರು ವಶಕ್ಕೆ ಪಡೆಯಲು ಯತ್ನಿಸಿದಾಗ ವಿನೇಶಾ ಅವರು ತೀವ್ರ ಪ್ರತಿರೋಧವೊಡ್ಡಿದರು. ಸಂಗೀತಾ ಅವರು ರಸ್ತೆಯಲ್ಲಿ ಮಲಗಿ ವಿನೇಶಾ ಅವರನ್ನು ಗಟ್ಟಿಯಾಗಿ ಹಿಡಿದುಕೊಂಡರು. ಆಗ ಪೊಲೀಸರು ಈ ಇಬ್ಬರನ್ನು ಹಾಗೂ ಇತರ ಕುಸ್ತಿಪಟುಗಳನ್ನು ಬಸ್‌ನಲ್ಲಿ ಕರೆದೊಯ್ದರು ಎಂದೂ ಮೂಲಗಳು ಹೇಳಿವೆ. ಬಳಿಕ ಜಂತರ್‌ಮಂತರ್‌ನ ಪ್ರತಿಭಟನೆ ಸ್ಥಳದಲ್ಲಿ ಕುಸ್ತಿಪಟುಗಳು ಬಳಸುತ್ತಿದ್ದ ಮಂಚ, ಹಾಸಿಗೆ, ಫ್ಯಾನ್, ಕೂಲರ್ ಮತ್ತು ಟೆಂಟ್‌ಗಳನ್ನು ಪೊಲೀಸರು ತೆರವುಗೊಳಿಸಿದ್ದಾರೆ ಎಂದೂ ವಿವರಿಸಿವೆ.

ಸಾಕ್ಷಿ ಹಾಗೂ ಬಜರಂಗ್ ಅವರನ್ನು ಬ್ರಿಜ್‌ಭೂಷಣ್ ಅವರ ನಿವಾಸದ ಬಳಿಯಿಂದ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಎಫ್‌ಐಆರ್: ಕುಸ್ತಿಪಟುಗಳ ಪ್ರತಿಭಟನೆ ಆಯೋಜನೆ ಮಾಡಿದವರು ಮತ್ತು ಅವರ ಬೆಂಬಲಿಗರ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಗಲಭೆ ಮತ್ತು ಕಾನೂನು ಬಾಹಿರವಾಗಿ ಗುಂಪು ಸೇರುವಿಕೆ ಸೇರಿ ಐಪಿಸಿಯ ಇತರ ಕೆಲ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

> **ಆರೋಪಿಯು ಮುಕ್ತವಾಗಿ ತಿರುಗಾಡುತ್ತಿದ್ದು, ಅವರಿಗೆ ಸರ್ಕಾರವು ಆಶ್ರಯ ನೀಡಿದೆ. ಪದಕ ವಿಜೇತ ಕುಸ್ತಿಪಟುಗಳನ್ನು ಜೈಲಿಗೆ ಹಾಕಲಾಗುತ್ತಿದೆ**
>
> **ವಿನೇಶಾ ಪೋಗಟ್,** ಕುಸ್ತಿಪಟು

> **ಪಟ್ಟಾಭಿಷೇಕ ಮುಗಿದ ಬಳಿಕ ಅಹಂಕಾರಿ ರಾಜನು ಜನರ ಧ್ವನಿಯನ್ನು ಬೀದಿಯಲ್ಲಿ ಹತ್ತಿಕ್ಕುತ್ತಿದ್ದಾನೆ**
>
> **ರಾಹುಲ್ ಗಾಂಧಿ**
> ಕಾಂಗ್ರೆಸ್ ನಾಯಕ

8ನೇ ಪುಟ ನೋಡಿ

ಬ್ಯಾಡ್ಮಿಂಟನ್: ಪ್ರಣಯ್‌ಗೆ ಕಿರೀಟ

ಕ್ವಾಲಾಲಂಪುರ (ಮಲೇಷ್ಯಾ) (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್ ಅವರು ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಇದರೊಂದಿಗೆ ಅವರು ಆರು ವರ್ಷಗಳ ದೀರ್ಘಕಾಲದ ಪ್ರಶಸ್ತಿ ಬರವನ್ನು ನೀಗಿಸಿಕೊಂಡರು.

ಇಲ್ಲಿ ನಡೆದ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಭಾನುವಾರ ಪ್ರಣಯ್ 21-19, 13-21, 21-18ರಿಂದ ಚೀನಾದ ವೆಂಗ್ ಹಾಂಗ್ ಯಾಂಗ್ ಅವರನ್ನು ಮಣಿಸಿದರು.

2017ರ ಅಮೆರಿಕ ಓಪನ್ ಗ್ರ್ಯಾನ್‌ಪ್ರಿಯಲ್ಲಿ ಚಿನ್ನದ ಪದಕ ಗೆದ್ದ ಬಳಿಕ ಪ್ರಣಯ್ ಅವರಿಗೆ ಪ್ರಮುಖ ಪ್ರಶಸ್ತಿ ಒಲಿದಿರಲಿಲ್ಲ. ಇದು ಅವರಿಗೆ ಬಿಡಬ್ಲ್ಯುಎಫ್ ವಿಶ್ವ ಟೂರ್ ವಿಭಾಗದಲ್ಲಿ ಮೊದಲ ಕಿರೀಟ. ಅಲ್ಲದೇ ಈ ವರ್ಷ ಭಾರತದ ಆಟಗಾರನೊಬ್ಬನಿಗೆ ಲಭಿಸಿದ ಮೊದಲ ಸಿಂಗಲ್ಸ್ ಪ್ರಶಸ್ತಿಯಾಗಿದೆ.

ವಿವರ ಪುಟ 10

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೊನೆಗೂ ಖಾತೆ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟದ ಸಚಿವರಿಗೆ ಖಾತೆ ಹಂಚಿಕೆ ಮಾಡಿ ಭಾನುವಾರ ಮಧ್ಯ ರಾತ್ರಿ ಅಧಿಸೂಚನೆ ಹೊರಡಿಸಲಾಗಿದೆ.

ಮುಖ್ಯಮಂತ್ರಿ ಕಳುಹಿಸಿದ್ದ ಪಟ್ಟಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂಕಿತ ಹಾಕಿದ ತಕ್ಷಣವೇ ರಾಜ್ಯ ಸರ್ಕಾರ ರಾಜ್ಯಪತ್ರ ಹೊರಡಿಸಿದೆ.

ಸಾರಿಗೆ ಖಾತೆ ಹಂಚಿಕೆ ಮಾಡಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದ ರಾಮಲಿಂಗಾರೆಡ್ಡಿ ಅವರಿಗೆ ಸಾರಿಗೆ ಖಾತೆಯ ಜೊತೆಗೆ ಹೆಚ್ಚುವರಿಯಾಗಿ ಮುಜರಾಯಿ ಖಾತೆಯನ್ನೂ ನೀಡಲಾಗಿದೆ.

ರಾಮಲಿಂಗಾರೆಡ್ಡಿ ಅವರು ಬೆಂಗಳೂರು ನಗರ ಅಭಿವೃದ್ಧಿ ಅಥವಾ ಬೇರೆ ಯಾವುದಾದರೂ ಪ್ರಮುಖ ಖಾತೆ ನೀಡುವಂತೆ ಬೇಡಿಕೆ ಇಟ್ಟಿದ್ದರು. ತಮಗಿಂತ ಕಿರಿಯರಿಗೆ ಪ್ರಮುಖ ಖಾತೆ ಹಂಚಿಕೆ ಮಾಡಲಾಗಿದೆ ಎಂದೂ ಅಸಮಾಧಾನ ವ್ಯಕ್ತಪಡಿಸಿದ್ದರು. ಮುನಿಸಿಕೊಂಡಿದ್ದ ಅವರ ಮನೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಂಸದ ಡಿ.ಕೆ. ಸುರೇಶ್ ಭಾನುವಾರ ತೆರಳಿ ಸಮಾಧಾನಪಡಿಸಿದ್ದರು.

ರಾಜ್ಯದಲ್ಲಿ ಪೂರ್ಣ ಸಚಿವ ಸಂಪುಟದ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದರೂ ಹೊಸ ಸಚಿವರಿಗೆ ಖಾತೆ ಹಂಚಿಕೆಯನ್ನು ಅಂತಿಮಗೊಳಿಸಲು ಭಾನುವಾರ ಮಧ್ಯರಾತ್ರಿವರೆಗೆ ಸಾಧ್ಯವಾಗಿರಲಿಲ್ಲ.

ಸಚಿವರಿಗೆ ಖಾತೆ ಹಂಚಿಕೆ ಮಾಡಲು ಪಟ್ಟಿಯನ್ನು ಅಂತಿಮಗೊಳಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲವು ಸಚಿವರು 'ಮಹತ್ವದ' ಖಾತೆಗಳಿಗೆ ಪಟ್ಟುಹಿಡಿದಿದ್ದ ಕಾರಣದಿಂದ ಅದನ್ನು ತಡೆಹಿಡಿದಿದ್ದರು.

ಶನಿವಾರವೇ ಖಾತೆ ಹಂಚಿಕೆ ಪಟ್ಟಿ ಸಿದ್ಧವಾಗಿತ್ತು. ರಾಜ್ಯಪಾಲರ ಅನುಮೋದನೆಗೆ ಕಳುಹಿಸಲು ತಯಾರಿಯೂ ನಡೆದಿತ್ತು. ಹಂಚಿಕೆ ಮಾಡಲಾಗಿದ್ದ ಖಾತೆಗೆ ಕೆಲವು ಸಚಿವರು ಅಸಮಾಧಾನ ವ್ಯಕ್ತಪಡಿಸಿದ ಕಾರಣ, ಪಟ್ಟಿಯಲ್ಲಿ ಸಣ್ಣಪುಟ್ಟ ಬದಲಾವಣೆ ಮಾಡಲು ಮುಖ್ಯಮಂತ್ರಿ ಮುಂದಾಗಿದ್ದರು.

'ಖಾತೆ ಹಂಚಿಕೆ ಪಟ್ಟಿಯನ್ನು ಶನಿವಾರ ರಾತ್ರಿ 10 ಗಂಟೆಗೆ ರಾಜಭವನಕ್ಕೆ ಕಳುಹಿಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ, ಆ ಪಟ್ಟಿಯನ್ನು ತಡೆಹಿಡಿಯುವಂತೆ ಮುಖ್ಯಮಂತ್ರಿ ಕಚೇರಿಯಿಂದ ಸೂಚನೆ ಬಂತು' ಎಂದು ಮೂಲಗಳು ತಿಳಿಸಿವೆ.

ಈ ಹಿಂದೆ ಗೃಹ ಖಾತೆ ನೀಡಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದ ಜಿ.ಪರಮೇಶ್ವರ ಅವರಿಗೆ ಗುಪ್ತಚರ ಹೊರತುಪಡಿಸಿ ಗೃಹ ಖಾತೆಯನ್ನೇ ನೀಡಲಾಗಿದೆ. ಪರಮೇಶ್ವರ ಅವರು ಕಂದಾಯ ಇಲಾಖೆ ಮೇಲೆ ಕಣ್ಣಿಟ್ಟಿದ್ದರು ಎನ್ನಲಾಗಿತ್ತು.

ಸಮಾಜ ಕಲ್ಯಾಣ ಅಥವಾ ಕಂದಾಯ ಖಾತೆ ಬಗ್ಗೆ ಒಲವು ಹೊಂದಿದ್ದರೆನ್ನಲಾದ ಕೆ.ಎಚ್.ಮುನಿಯಪ್ಪ ಅವರಿಗೆ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಜೊತೆಗೆ ಗ್ರಾಹಕ ವ್ಯವಹಾರಗಳ ಖಾತೆ ಜವಾಬ್ದಾರಿ ವಹಿಸಲಾಗಿದೆ.

ಯಾರಿಗೆ, ಯಾವ ಖಾತೆ?

ಸಿದ್ದರಾಮಯ್ಯ (ಮುಖ್ಯಮಂತ್ರಿ)	ಹಣಕಾಸು, ಆಡಳಿತ ಸುಧಾರಣೆ, ಗುಪ್ತಚರ, ವಾರ್ತಾ ಇಲಾಖೆ ಮತ್ತು ಹಂಚಿಕೆಯಾಗದೆ ಉಳಿದಿರುವ ಖಾತೆಗಳು
ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿ)	ಜಲಸಂಪನ್ಮೂಲ, ಬೆಂಗಳೂರು ನಗರ ಅಭಿವೃದ್ಧಿ
ಜಿ. ಪರಮೇಶ್ವರ	ಗೃಹ (ಗುಪ್ತಚರ ಹೊರತುಪಡಿಸಿ)
ಎಚ್.ಕೆ. ಪಾಟೀಲ್	ಕಾನೂನು ಮತ್ತು ಸಂಸದೀಯ ವ್ಯವಹಾರ, ಪ್ರವಾಸೋದ್ಯಮ
ಕೆ.ಎಚ್. ಮುನಿಯಪ್ಪ	ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕ ವ್ಯವಹಾರ
ಕೆ.ಜೆ. ಜಾರ್ಜ್	ಇಂಧನ
ಎಂ.ಬಿ. ಪಾಟೀಲ್	ಬೃಹತ್ ಮತ್ತು ಮಧ್ಯಮ ಕೈಗಾರಿಕೆ,
ರಾಮಲಿಂಗಾರೆಡ್ಡಿ	ಸಾರಿಗೆ, ಮುಜರಾಯಿ
ಸತೀಶ್ ಜಾರಕಿಹೊಳಿ	ಲೋಕೋಪಯೋಗಿ
ಪ್ರಿಯಾಂಕ್ ಖರ್ಗೆ	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್
ಜಮೀರ್ ಅಹ್ಮದ್ ಖಾನ್	ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತ
ಕೃಷ್ಣ ಬೈರೇಗೌಡ	ಕಂದಾಯ (ಮುಜರಾಯಿ ಹೊರತುಪಡಿಸಿ)
ದಿನೇಶ್ ಗುಂಡೂರಾವ್	ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಎನ್. ಚಲುವರಾಯಸ್ವಾಮಿ	ಕೃಷಿ
ಕೆ. ವೆಂಕಟೇಶ್	ಪಶು ಸಂಗೋಪನೆ ಮತ್ತು ರೇಷ್ಮೆ
ಡಾ. ಎಚ್.ಸಿ. ಮಹದೇವಪ್ಪ	ಸಮಾಜ ಕಲ್ಯಾಣ
ಈಶ್ವರ್ ಖಂಡ್ರೆ	ಅರಣ್ಯ, ಜೈವಿಕ ಮತ್ತು ಪರಿಸರ
ಕೆ.ಎನ್. ರಾಜಣ್ಣ	ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ)
ಶರಣಬಸಪ್ಪ ದರ್ಶನಾಪುರ್	ಸಣ್ಣ ಕೈಗಾರಿಕೆ, ಸಾರ್ವಜನಿಕ ಸ್ವಾಮ್ಯದ ಕೈಗಾರಿಕೆ
ಶಿವಾನಂದ ಪಾಟೀಲ್	ಜವಳಿ, ಸಕ್ಕರೆ, ಕೃಷಿ ಮಾರುಕಟ್ಟೆ
ಆರ್.ಬಿ. ತಿಮ್ಮಾಪುರ	ಅಬಕಾರಿ
ಎಸ್.ಎಸ್. ಮಲ್ಲಿಕಾರ್ಜುನ್	ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ
ಶಿವರಾಜ ಎಸ್. ತಂಗಡಗಿ	ಹಿಂದುಳಿದ ವರ್ಗ ಮತ್ತು ಕನ್ನಡ ಮತ್ತು ಸಂಸ್ಕತಿ
ಶರಣ್ ಪ್ರಕಾಶ್ ಪಾಟೀಲ್	ವೈದ್ಯಕೀಯ ಶಿಕ್ಷಣ, ಕೌಶಲ ಅಭಿವೃದ್ಧಿ
ಮಂಕಾಳ ವೈದ್ಯ	ಮೀನುಗಾರಿಕೆ, ಬಂದರು ಮತ್ತು ಒಳ ಸಾರಿಗೆ
ಲಕ್ಷ್ಮೀ ಹೆಬ್ಬಾಳಕರ	ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನ, ಹಿರಿಯರ ಕಲ್ಯಾಣ
ರಹೀಂ ಖಾನ್	ಪೌರಾಡಳಿತ, ಹಜ್
ಡಿ ಸುಧಾಕರ್	ಸಾಂಖ್ಯಿಕ ಮತ್ತು ಯೋಜನೆ
ಸಂತೋಷ್ ಲಾಡ್	ಕಾರ್ಮಿಕ
ಎನ್.ಎಸ್. ಬೋಸರಾಜು	ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ
ಬೈರತಿ ಸುರೇಶ್	ನಗರಾಭಿವೃದ್ಧಿ ಮತ್ತು ನಗರ ಯೋಜನೆ (ಬೆಂಗಳೂರು ಅಭಿವೃದ್ಧಿ, ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಂಆರ್‌ಡಿಎ, ಬಿಎಂಆರ್‌ಸಿಎಲ್ ಹೊರತುಪಡಿಸಿ)
ಮಧು ಬಂಗಾರಪ್ಪ	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಡಾ ಎಂ.ಸಿ. ಸುಧಾಕರ್	ಉನ್ನತ ಶಿಕ್ಷಣ
ಬಿ. ನಾಗೇಂದ್ರ	ಯುವಜನ ಸೇವೆ, ಕ್ರೀಡೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.

ಜೆ.ಸಿ. ರಸ್ತೆಯಲ್ಲಿ ವಾಹನ ದಟ್ಟಣೆ

ಸುಗಮ ಸಂಚಾರಕ್ಕೆ ಅಡ್ಡಿ

ಜೆ.ಸಿ.ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ರಸ್ತೆಯ ಪಕ್ಕದಲ್ಲಿರುವ ವಾಹನ ಬಿಡಿಭಾಗಗಳ ವ್ಯಾಪಾರಿಗಳು ಅಡ್ಡಿಪಡಿಸುತ್ತಿದ್ದಾರೆ. ಇದರಿಂದ ವಾಹನ ದಟ್ಟಣೆ ಹೆಚ್ಚುವ ಜತೆಗೆ ಅಪಘಾತ ಸಂಭವಿಸುವ ಸಾಧ್ಯತೆಯಿದೆ. ಜೆ.ಸಿ. ರಸ್ತೆ ಜಂಕ್ಷನ್‌ನಿಂದ ಹಿಡಿದು ರವೀಂದ್ರ ಕಲಾಕ್ಷೇತ್ರದವರೆಗೂ ರಸ್ತೆಯ ಎಡಬದಿಯಲ್ಲಿ ಟಯರ್, ಸೀಟ್ ಸೇರಿದಂತೆ ವಾಹನಗಳ ಬಿಡಿಭಾಗ ಹಾಗೂ ಗೃಹೋಪಯೋಗಿ ವಸ್ತುಗಳ ಮಾರಾಟ ಮಳಿಗೆಗಳಿವೆ. ವಾಹನಗಳ ಬಿಡಿ ಭಾಗ ಮಾರುವ ವ್ಯಾಪಾರಿಗಳು ನಡು ರಸ್ತೆಗೆ ಬಂದು, ಕಾರುಗಳನ್ನು ಅಡ್ಡ ಹಾಕುತ್ತಾರೆ. ಇದರಿಂದ ವಾಹನ ಸವಾರರು ನಡುರಸ್ತೆಯಿಂದ ಏಕಾಏಕಿ ಎಡಕ್ಕೆ ತಿರುವು ಪಡೆಯಲು ಮುಂದಾಗುತ್ತಾರೆ. ಈ ವೇಳೆ ಹಿಂಬದಿಯ ವಾಹನ ಡಿಕ್ಕಿಯಾಗಿ ಹಲವರು ಗಾಯ ಮಾಡಿಕೊಂಡ ಉದಾಹರಣೆಗಳೂ ಇವೆ. ಆದ್ದರಿಂದ ಪೊಲೀಸರು ಈ ಬಗ್ಗೆ ಕ್ರಮವಹಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು.

ರಾಘವೇಂದ್ರ, ಚಾಮರಾಜಪೇಟೆ

ಕೆಳ ಸೇತುವೆಯಲ್ಲಿ ಕಸದ ರಾಶಿ

ಕೆ.ಆರ್. ರಸ್ತೆಯ ಟ್ಯಾಗೋರ್ ವೃತ್ತದ ಕೆಳಸೇತುವೆ ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ. ಈ ಕೆಳಸೇತುವೆಯುದ್ದಕ್ಕೂ ಎಲ್ಲೆಂದರಲ್ಲಿ ಕಸದ ರಾಶಿಗಳು ಕಾಣಸಿಗುತ್ತವೆ. ವಾಹನ ಸವಾರರು ಕಸವನ್ನು ಸೇತುವೆಯ ಬಳಿಯೇ ಎಸೆದು ಹೋಗುತ್ತಿದ್ದಾರೆ. ಇದರಿಂದಾಗಿ ಮಳೆ ನೀರು ಕಾಲುವೆ ಮುಚ್ಚಿ, ಕೆಳ ಸೇತುವೆಯಲ್ಲಿ ನೀರು ನಿಲ್ಲುತ್ತಿದೆ. ಮಳೆ ಬಂದಾಗ ರಸ್ತೆ ಹೊಳೆಯ ಸ್ವರೂಪ ಪಡೆದುಕೊಳ್ಳುತ್ತದೆ. ವಾಹನ ಸವಾರರು ಕೊಳಚೆ ನೀರಿನಲ್ಲೇ ಸಾಗಬೇಕಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮವಹಿಸಬೇಕು.

ಟ್ಯಾಗೋರ್ ವೃತ್ತದ ಕೆಳಸೇತುವೆಯಲ್ಲಿ ಕಸ ಹಾಕಿರುವುದು

ರಾಜೇಶ್, ಬಸವನಗುಡಿ

ರಸ್ತೆ ಪಕ್ಕದಲ್ಲಿ ಕಸದ ರಾಶಿ

ಕೆಂಪೇಗೌಡ ಮುಖ್ಯ ರಸ್ತೆಯ ಬನ್ನಪ್ಪ ಪಾರ್ಕ್ ತಿರುವಿನಲ್ಲಿ ಕಸ ಹಾಕಿರುವುದು

ಕೆಂಪೇಗೌಡ ಮುಖ್ಯ ರಸ್ತೆಯ ಬನ್ನಪ್ಪ ಪಾರ್ಕ್ ತಿರುವಿನ ಎರಡೂ ಬದಿಯಲ್ಲಿ ಕಸ ಹಾಕಲಾಗುತ್ತಿದೆ. ಇದನ್ನು ವಿಲೇವಾರಿ ಮಾಡದಿರುವುದರಿಂದ ಅಲ್ಲಿಯೇ ಕೊಳೆತು ನಾರುತ್ತಿದೆ. ದುರ್ವಾಸನೆಯಿಂದ ಅಲ್ಲಿ ಓಡಾಡುವುದು ಕಷ್ಟವಾಗಿದೆ. ಈ ಸ್ಥಳದ ಪಕ್ಕದಲ್ಲಿಯೇ ಶಾಸಕರ ಭವನ ಇದ್ದು, ಕಚೇರಿಗೆ ಹೋಗಿ ಬರುವವರ ಸಂಖ್ಯೆ ಅಧಿಕ ಇದ್ದರೂ ಪಾಲಿಕೆ ಅಧಿಕಾರಿಗಳು ಕಸ ವಿಲೇವಾರಿಗೆ ಕ್ರಮ ವಹಿಸದಿರುವುದು ವಿಪರ್ಯಾಸ. ಮಳೆ ಬಂದಲ್ಲಿ ನೀರು ನಿಂತು, ಡೆಂಗಿ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಕೂಡಲೇ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸಬೇಕು.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ

ಒಳಚರಂಡಿ ನೀರು ರಸ್ತೆಗೆ

ಬೆಳ್ಳಂದೂರಿನ ಓಷಿಯನ್ ಎಬೊನಿ ಅಪಾರ್ಟ್‌ಮೆಂಟ್ ಸಮುಚ್ಛಯದ ಎದುರಿನ ರಸ್ತೆಯಲ್ಲಿ ಒಳಚರಂಡಿ ಕಟ್ಟಿದ್ದು, ನೀರು ರಸ್ತೆಯನ್ನು ಆವರಿಸಿಕೊಳ್ಳುತ್ತಿದೆ. ಇದರಿಂದ ಪ್ರಯಾಣಿಕರು ಮೂಗು ಮುಚ್ಚಿಕೊಂಡು ಸಾಗಬೇಕಾಗಿದೆ. ಮಳೆ ಬಂದಲ್ಲಿ ಚರಂಡಿ ನೀರು ರಸ್ತೆ ತುಂಬ ಆವರಿಸಿಕೊಳ್ಳಲಿದೆ. ಇದರಿಂದ ದ್ವಿಚಕ್ರ ವಾಹನ ಸವಾರರಿಗೆ ಸಂಚಾರ ಕಷ್ಟವಾಗಿದೆ. ನೀರು ಒಂದೆಡೆ ನಿಲ್ಲುತ್ತಿರುವುದರಿಂದ ರೋಗಗಳು ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಆದ್ದರಿಂದ ಅವಘಡ ಸಂಭವಿಸುವ ಮೊದಲು ಜಲಮಂಡಳಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಅನಶುಲ್, ಬೆಳ್ಳಂದೂರು



ಬೆಳ್ಳಂದೂರಿನಲ್ಲಿ ಒಳಚರಂಡಿ ನೀರು ಅಪಾರ್ಟ್‌ಮೆಂಟ್ ಸಮುಚ್ಚಯದ ಮುಂಭಾಗ ನಿಂತಿರುವುದು

ಹೂಳು ತುಂಬಿದ ಕಾಲುವೆ

ವಿಜಯನಗರ ವಿಧಾನಸಭೆ ಕ್ಷೇತ್ರದ ಕೆಂಪಾಪುರ ಅಗ್ರಹಾರದ 9ನೇ ಅಡ್ಡರಸ್ತೆಯಲ್ಲಿ ರಾಜಕಾಲುವೆಯಲ್ಲಿ ಹೂಳು ತುಂಬಿದೆ. ನಗರದ ವಿವಿಧೆಡೆಯ ಕೊಳಚೆ ನೀರು ಈ ಕಾಲುವೆ ಮೂಲಕ ಸಾಗುತ್ತದೆ. ಈಗ ಕಾಲುವೆಯಲ್ಲಿ ಹೂಳು ತುಂಬಿದ್ದರಿಂದ ಮಳೆ ಬಂದಲ್ಲಿ ನೀರು ಕಾಲುವೆ ತುಂಬಿ, ರಸ್ತೆಯ ಮೂಲಕ ಮನೆಗಳಿಗೆ ನುಗ್ಗುತ್ತಿದೆ. ಈ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದರೂ ಪ್ರಯೋಜನವಾಗಲಿಲ್ಲ. ಈ ವರ್ಷ ಮಳೆಗಾಲದಲ್ಲಿ ದೊಡ್ಡ ಪ್ರಮಾಣದಲ್ಲಿ ಹಾನಿಯಾಗುವ ಸಾಧ್ಯತೆಯಿದೆ. ಆದ್ದರಿಂದ ಈಗಲಾದರೂ ಕ್ರಮವಹಿಸಿ, ಹೂಳನ್ನು ತೆರವುಗೊಳಿಸಬೇಕು.

ಎಂ. ಉಮಾಶಂಕರಬಾಬು, ಕೆಂಪಾಪುರ ಅಗ್ರಹಾರ

ಕೆಂಪಾಪುರ ಅಗ್ರಹಾರದ ಬಳಿ ರಾಜಕಾಲುವೆಯಲ್ಲಿ ಹೂಳು ತುಂಬಿರುವುದು

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

(CIN): L85110KA1993PLC013869 ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು – 560 106.
ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

31ನೇ ಮಾರ್ಚ್ 2023ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್‌ಗಳಲ್ಲಿ)

ಕ್ರ. ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ವರ್ಷಕ್ಕೆ ಕೊನೆಗೊಂಡ	
		31 ಮಾರ್ಚ್ 2023 ಪರಿಶೋಧಿತ	31 ಡಿಸೆಂಬರ್ 2022 ಅಪರಿಶೋಧಿತ	31 ಮಾರ್ಚ್ 2022 ಪರಿಶೋಧಿತ	31 ಮಾರ್ಚ್ 2023 ಪರಿಶೋಧಿತ	31 ಮಾರ್ಚ್ 2022 ಪರಿಶೋಧಿತ
1.	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	3,176.99	1,983.44	2,357.25	9,288.22	7,879.64
2.	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	338.07	(101.98)	134.01	121.36	81.52
3.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳು)	338.07	(101.98)	(23.02)	121.36	(522.02)
4.	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ, (ವಿನಾಯಿತಿ ಪಡೆದ ಮತ್ತು / ಅಥವಾ ವಿಶೇಷ ವಸ್ತುಗಳ ನಂತರ)	257.93	(96.68)	(63.70)	66.94	(534.65)
5.	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	261.86	(129.73)	(56.10)	74.00	(510.43)
6.	ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ)	128.85	128.85	128.85	128.85	128.85
7.	ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಆಡಿಟೆಡ್ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ				1,978.32	1,910.83
8.	ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ					
	ಎ) ಮೂಲಭೂತ:	19.80	(5.92)	0.69	7.62	(23.70)
	ಬಿ) ಡೈಲ್ಯೂಟೆಡ್:	19.61	(5.92)	0.69	7.55	(23.70)

ಸೂಚನೆ :

1. 31 ಮಾರ್ಚ್ 2023ರ ತ್ರೈಮಾಸಿಕ ಹಾಗೂ ವರ್ಷಕ್ಕೆ ಕೊನೆಗೊಂಡ ಪ್ರತ್ಯೇಕವಾದ ಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್‌ಗಳಲ್ಲಿ)

ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ವರ್ಷಕ್ಕೆ ಕೊನೆಗೊಂಡ	
	31 ಮಾರ್ಚ್ 2023 ಪರಿಶೋಧಿತ	31 ಡಿಸೆಂಬರ್ 2022 ಅಪರಿಶೋಧಿತ	31 ಮಾರ್ಚ್ 2022 ಪರಿಶೋಧಿತ	31 ಮಾರ್ಚ್ 2023 ಪರಿಶೋಧಿತ	31 ಮಾರ್ಚ್ 2022 ಪರಿಶೋಧಿತ
ನಿವ್ವಳ ಮಾರಾಟ / ಕಾರ್ಯಾಚರಣೆಗಳಿಂದ ಆದಾಯ	1,970.29	1,040.02	1,226.38	5,052.30	3,538.17
ಲಾಭ ತೆರಿಗೆಯ ಮುಂಚೆ	307.64	(10.53)	189.37	263.78	153.76
ಲಾಭ ತೆರಿಗೆಯ ನಂತರ	228.22	(9.36)	143.95	193.99	117.66

2. ಪರಿಶೋಧಿತ, ಪ್ರತ್ಯೇಕವಾದ ಹಾಗೂ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 26ನೇ ಮೇ, 2023 ರಂದು ಪರಿಶೀಲಿಸಿದ್ದು ಹಾಗೂ ನಿರ್ದೇಶಕ ಮಂಡಳಿಯು 27ನೇ ಮೇ, 2023 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಕಂಪನಿಯ ನಿರ್ದೇಶಕರ ಮಂಡಳಿಯು ಮೇ 27, 2023 ರಂದು ನಡೆದ ಸಭೆಯಲ್ಲಿ, ಮಾರ್ಚ್ 31, 2023ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಅವಧಿಗೆ ಷೇರು ಬಂಡವಾಳದ ಮೇಲೆ ಪ್ರತಿ 10 ರೂ. ಷೇರಿಗೆ ರೂ. 4/- ಡಿವಿಡೆಂಡ್ ಅನ್ನು ಶಿಫಾರಸು ಮಾಡಿದೆ. ಈ ಅಂತಿಮ ಡಿವಿಡೆಂಡ್ ಅನ್ನು, ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.
4. ಮೇಲಿರುವ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ, 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾದ, ಸಮಗ್ರ ಹಣಕಾಸಿನ ಪರಿಶೋಧಿತ, ಪ್ರತ್ಯೇಕವಾದ ಫಲಿತಾಂಶಗಳ ಸಂಕ್ಷಿಪ್ತ ರೂಪ ಮತ್ತು ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಸಂಕ್ಷಿಪ್ತ ರೂಪವಾಗಿದೆ. ಸಮಗ್ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಹಣಕಾಸಿನ ಪ್ರತ್ಯೇಕವಾದ ಫಲಿತಾಂಶಗಳ ಸಮಗ್ರ ಹಣಕಾಸಿನ ಫಲಿತಾಂಶಗಳ ವಿವರವಾದ ವಿಧಾನದ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.
5. ಪ್ರಸ್ತುತ ಮಾರ್ಚ್ 31 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ಹಿಂದಿನ ವರ್ಷಗಳ ಅಂಕಿಅಂಶಗಳು ಸಂಪೂರ್ಣ ಹಣಕಾಸು ವರ್ಷಗಳ ಲೆಕ್ಕಪರಿಶೋಧನೆಯ ಅಂಕಿಅಂಶಗಳ ನಡುವಿನ ಸಮತೋಲನ ಅಂಕಿಅಂಶಗಳು ಮತ್ತು ಆಯಾ ವರ್ಷಗಳಿಗೆ ಡಿಸೆಂಬರ್ 31 ಕ್ಕೆ ಕೊನೆಗೊಂಡ ಒಂಬತ್ತು ತಿಂಗಳ ಲೆಕ್ಕಪರಿಶೋಧನೆ ಮಾಡದ ಪ್ರಕಟಿತ ವರ್ಷದಿಂದ ದಿನಾಂಕದ ಅಂಕಿಅಂಶಗಳು, ಸೀಮಿತ ಪರಿಶೀಲನೆಗೆ ಒಳಪಟ್ಟಿರುವ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದ ಅಂತ್ಯದ ದಿನಾಂಕವಾಗಿದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/-
ಅಪ್ಪಾರಾವ್ ವಿ ಮಲ್ಲವರಪು
ಅಧ್ಯಕ್ಷರು ಮತ್ತು ನಿರ್ವಾಹಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ: ಮೇ 27, 2023

ನಗರದಲ್ಲಿ ಇಂದು

ಪದವಿ ದಿನಾಚರಣೆ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಉದ್ಘಾಟನೆ: ಸಿ.ಎನ್. ಬಾಲಕೃಷ್ಣ, ಅತಿಥಿಗಳು: ಸುಂದರ್ ಮಡಕಶಿರ, ಅಧ್ಯಕ್ಷತೆ: ಎಂ. ಪುಟ್ಟಸ್ವಾಮಿ, ಉಪಸ್ಥಿತಿ: ರೇಣುಕಾಪ್ರಸಾದ್ ಕೆ.ವಿ., ಡಿ. ಹನುಮಂತಯ್ಯ, ಟಿ. ಕೋನಪ್ಪ ರೆಡ್ಡಿ, ರಾಘವೇಂದ್ರ, ಆಯೋಜನೆ: ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ, ಸ್ಥಳ: ಕುವೆಂಪು ಕಲಾಕ್ಷೇತ್ರ, ಬಿಐಟಿ ಆವರಣ, ಕೆ.ಆರ್. ರಸ್ತೆ, ಬೆಳಿಗ್ಗೆ 10ರಿಂದ

'ಬೊಂಬೆಹಬ್ಬ' ಬಹುಮಾನ ವಿತರಣಾ ಸಮಾರಂಭ: ಅತಿಥಿ: ರವೀಂದ್ರ ಭಟ್ಟ, ಅಧ್ಯಕ್ಷತೆ: ಎಚ್.ಎನ್. ಸುರೇಶ್, ಉಪಸ್ಥಿತಿ: ನಾಗಲಕ್ಷ್ಮೀ ಕೆ. ರಾವ್, ಉಷಾ ಪ್ರಸಾದ್, ಬಹುಮಾನ ವಿಜೇತರು: ಗಾಯಿತ್ರಿ ಹೆಗಡೆ ಗಡಿಗೆಹೊಳೆ, ಪವಿತ್ರಾ ಆರ್.ಎಸ್., ಚೈತ್ರಶ್ರೀ ಎಂ., ಚಂದನ ಎಲ್., ರಶ್ಮಿ ಎಂ.ಎಚ್., ಮಧುರಾ ಕೆ.ವೈ., ಚಿತ್ರಶ್ರೀ ಎಂ., ಆಯೋಜನೆ: ಇನ್ಫೋಸಿಸ್ ಫೌಂಡೇಷನ್, ಭಾರತೀಯ ವಿದ್ಯಾಭವನ, ಸ್ಥಳ: ಭಾರತೀಯ ವಿದ್ಯಾಭವನದ ಸಭಾ ಕೊಠಡಿ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಎನ್. ಹುಚ್ಚಮಾಸ್ತಿಗೌಡ ದತ್ತಿ ಉಪನ್ಯಾಸ: 'ಕರ್ನಾಟಕ ರಾಜಕೀಯದಲ್ಲಿ ಇತ್ತೀಚಿನ ದೃಷ್ಟಿಕೋನಗಳು' ಕುರಿತ ಉಪನ್ಯಾಸ: ಸಂದೀಪ್ ಶಾಸ್ತ್ರಿ, ಅಧ್ಯಕ್ಷತೆ: ಎಚ್.ಜಿ. ಬಾಲಗೋಪಾಲ್, ಉಪಸ್ಥಿತಿ: ಬಿ.ಎನ್. ಶಿವಕುಮಾರ್, ಎಚ್.ಆರ್. ಅರುಣಕುಮಾರಿ, ಆಯೋಜನೆ: ವಿವೇಕಾನಂದ ಪದವಿ ಕಾಲೇಜು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, 2ನೇ ಹಂತ, ಬೆಳಿಗ್ಗೆ 11

'ಕಲೆಯಿಂದ ವ್ಯಕ್ತಿತ್ವ ವಿಕಸನ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ನಮ್ಮ ಭವಿಷ್ಯವನ್ನು ನಾವೇ ಕಂಡುಕೊಳ್ಳಬೇಕು. ಇತರರಿಂದ ದೊರಕುವ ಸಹಾಯದಿಂದ ನಿರೀಕ್ಷೆಯಲ್ಲಿ ನಮ್ಮ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ಜನಪದ ಕಲಾವಿದೆ ಸವಿತಾ ಹೇಳಿದರು.

ಕೆಂಗೇರಿ ಉಪನಗರದ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಂತರ ಕಾಲೇಜು ವಾರ್ಷಿಕೋತ್ಸವ 'ಸೃಷ್ಟಿ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಪ್ರತಿಯೊಬ್ಬ ವಿದ್ಯಾರ್ಥಿಯು ವಿದ್ಯಾಭ್ಯಾಸದೊಂದಿಗೆ ಯಾವುದಾದರೂ ಕಲೆಯನ್ನು ರೂಢಿಸಿಕೊಳ್ಳಬೇಕು. ಕಲೆಯಿಂದ ವ್ಯಕ್ತಿತ್ವವು ವಿಕಸನಗೊಳ್ಳುತ್ತದೆ' ಎಂದು ಹೇಳಿದರು.

ಕಾಲೇಜು ಪ್ರಾಂಶುಪಾಲ ಜಯರಾಮ್ ಮಾತನಾಡಿ, 'ಪ್ರಸ್ತುತ ಸಂಗೀತ ಶೈಲಿಯ ನಡುವೆ ನಾಡಿನ ಜನಪದ ಕಲೆಯ ಮೂಲ ಸೊಬಗನ್ನು ಉಳಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಕಾಲೇಜಿನಲ್ಲಿ ಜನಪದ ಕಾರ್ಯಾಗಾರ ಆಯೋಜಿಸಲು ಸವಿತಾ ಅವರು ಸಮ್ಮತಿಸಿದ್ದು, ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ಪಿಯು ಕಾಲೇಜು ಪ್ರಾಂಶುಪಾಲ ಡಾ.ಆರ್.ಮಂಜುನಾಥ್, ಜನಪದ ಕಲಾವಿದೆ ಜೋಗಿ ಸುನೀತಾ, ರೂಪಶ್ರೀ ಯು., ಸೌಮ್ಯ ಡಿ.ಎನ್., ಆಶಾ.ಜಿ, ಅರ್ಚನಾ, ನಂದಿನಿ, ಶೋಭಾ ಹಾಜರಿದ್ದರು.

ಕೃಷಿ ಹೊಂಡದಲ್ಲಿ ಮುಳುಗಿ ಯುವಕ ಸಾವು; ಕೊಲೆ ಶಂಕೆ

ಕೋಲಾರ: ತಾಲ್ಲೂಕಿನ ವೇಮಗಲ್ ಹೋಬಳಿ ಮಲ್ಲಾಂಡಹಳ್ಳಿ ಗ್ರಾಮದ ಬಳಿ ಗೆಳೆಯರೊಂದಿಗೆ ಈಜಲು ಹೋಗಿದ್ದಾಗ ಯುವಕನೊಬ್ಬ ಕೃಷಿ ಹೊಂಡದಲ್ಲಿ ಮುಳುಗಿ ಮೃತಪಟ್ಟಿದ್ದು, ಕೊಲೆ ಶಂಕೆ ವ್ಯಕ್ತವಾಗಿದೆ.

ಬೆಂಗಳೂರಿನ ಹೆಬ್ಬಾಳದ ಚಾಲಕ ಶಿವಕುಮಾರ್ (34) ಮೃತ ಯುವಕ. ಶನಿವಾರ ರಾತ್ರಿ ಮೂವರು ಗೆಳೆಯರೊಂದಿಗೆ ಪಾರ್ಟಿ ಮಾಡಿ, ಬೆಳಗ್ಗಿನ ಜಾವ ಮಲ್ಲಾಂಡಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಕೃಷಿಹೊಂಡದಲ್ಲಿ ಈಜಲು ಹೋಗಿದ್ದಾಗ ದುರ್ಘಟನೆ ಸಂಭವಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆದರೆ, ಆತನ ಜತೆಯಲ್ಲಿದ್ದವರೇ ಕೊಲೆ ಮಾಡಿರುವುದಾಗಿ ಪೋಷಕರು ಆರೋಪಿಸಿದ್ದು, ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ವೇಮಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

WANTED KANNADA TEACHER (High School) Cambridge English School, Mathikere, Yeshwanthpur, Bangalore-54. Contact: No. 9379191544.

General

NEED COMPUTER Operators for Insurance Counter at petrol_pumps in Bengaluru. Payment 12000/- to15000/-.p.m. Contact: 9742149598

Teachers/ Professors

WANTED ENGLISH medium teachers for taking classes for nursery primary and High school, peon's watchman and ayahs. Contact personally with resume, original documents. Manjula Nadgir Memorial English School Near Modi Hospital Rajajinagar Bangalore – 560010. Ph: 23387333, 8867065525

PERSONAL

Change of Name

SEEMA, WIFE/O, JC680830Y, SUB MAJ/ASH, ASHOK KUMAR JOGI, Vill- Jamalpur, Malakhera, Alwar, Rajasthan changed name SEEMA to SEEMA DEVI, 26/05/2023, Notary K.V. Mani Bangalore

SMT VIMLA DEVI, Mother/o, JC680830Y, SUB MAJ/ASH, ASHOK KUMAR JOGI, Vill- Jamalpur, Malakhera, Alwar, Rajasthan changed name SMT VIMLA DEVI to BIMLA DEVI, 26/05/2023, Notary K.V. Mani Bangalore

CHANGE OF NAME
I, **GANESH,** R/@. No.38, Bhavani Krupa, Buragunte Village, Sarjapura-Attibele Main Road, Anekal Taluk, Bengaluru- 562125, have changed my name to **GANESH RAO** vide affidavit dated 22.05.2023 before Notary B.Chitra, Bengaluru.

I,MANJUNATH HEGDE, R/o No.388,16th Main,13th Cross, F Block, Sahakaranagar, Bangalore-560092. I have changed my name to MANJUNATH RAMAKRISHNA HEGDE for all purpose. Vide affidavit date 26-5-23, Before Notary Diwakar. N. Kagawad Bangalore.

I A. YASH ANAND R/a, #J-404, ETA Star Garden, near Angalaparameshwari Temple, Magadi Road, Bangalore- 560023 Have Changed my Name to YASH ANAND. A vide Affidavit Dated 16/05/2023 before Notary Mamatha N.K Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಮುಂಗಾರು ಸಮೀಪ: ಬಿಬಿಎಂಪಿಯಿಂದ ಮುಗಿಯದ ರಾಜಕಾಲುವೆ ನಿರ್ಮಾಣ ಕಾಮಗಾರಿ

ಮತ್ತೆ ಮುಳುಗಡೆ ಭೀತಿಯಲ್ಲಿ 'ರೈನ್‌ಬೊ'

• ಖಲೀಲಅಹ್ಮದ ಶೇಖ

ಬೆಂಗಳೂರು: ಕಳೆದ ವರ್ಷ ಮುಂಗಾರು ಅವಧಿಯಲ್ಲಿ ಜಲಾವೃತಗೊಂಡಿದ್ದ ಮಾರತ್ತಹಳ್ಳಿಯ ಕಸವನಹಳ್ಳಿ ಬಳಿಯ ರೈನ್‌ಬೊ ಬಡಾವಣೆ, ಸರ್ಜಾಪುರದ ರೈನ್‌ಬೊ ಡ್ರೈವ್‌ನಲ್ಲಿ ಈ ಬಾರಿಯೂ ಪ್ರವಾಹದ ಭೀತಿ ಎದುರಾಗಿದೆ.

ಮಳೆ ನೀರಿನಿಂದ ತುಂಬಿಹೋಗಿದ್ದ ಬಡಾವಣೆಗಳಲ್ಲಿ ಕಾರ್ಯಾಚರಣೆ ನಡೆಸುವ ಸಂದರ್ಭದಲ್ಲಿ ಮುಂದಿನ ಮಳೆಗಾಲದಲ್ಲಿ ಈ ರೀತಿಯ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳುವುದಾಗಿ ಅಂದಿನ ಮುಖ್ಯಮಂತ್ರಿಯಾದಿಯಾಗಿ ಬಿಬಿಎಂಪಿ ಮುಖ್ಯ ಆಯುಕ್ತರು ಭರವಸೆ ನೀಡಿದ್ದರು. ಆದರೆ, ಈವರೆಗೂ ವೈಟ್‌ಫೀಲ್ಡ್‌ನ ನಲ್ಲೂರ ಹಳ್ಳಿಯ ತಗ್ಗುಪ್ರದೇಶಗಳ ಸ್ಥಿತಿ ಸುಧಾರಣೆ ಆಗಿಲ್ಲ. ಮತ್ತೆ ಸಂಕಷ್ಟ ಎದುರಾಗುವ ಭೀತಿಯಿಂದ ನಿವಾಸಿಗಳು ಮನೆಗಳನ್ನು ತೊರೆದಿದ್ದಾರೆ. ಕೆಲವು ಮನೆಗಳ ಎದುರು ಮನೆ ಬಾಡಿಗೆಗೆ ಇದೆ, ಮಾರಾಟಕ್ಕಿದೆ ಎಂಬ ಫಲಕಗಳು ಅಳವಡಿಸಲಾಗಿದೆ.

ಪ್ರಜಾವಾಣಿ ವಿಶೇಷ

ಕಳೆದ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಸುರಿದ ಮಳೆಗೆ ಇಲ್ಲಿ ಸಾಕಷ್ಟು ಹಾನಿಯಾಗಿತ್ತು. ಇಲ್ಲಿನ ಬಹುತೇಕ ನಿವಾಸಿಗಳು ಬೇರೆ ಕಡೆ ಸ್ಥಳಾಂತರಗೊಂಡು ಬಾಡಿಗೆ ಮನೆಗಳಲ್ಲಿ ಜೀವನ ನಡೆಸುತ್ತಿದ್ದಾರೆ. ಬಿಬಿಎಂಪಿ ಮಾತ್ರ ಕಷ್ಟಕ್ಕೆ ಸ್ಪಂದಿಸುತ್ತಿಲ್ಲ. ಮತ್ತೆ ಜಲಪ್ರಳಯವಾಗದಂತೆ ಶಾಶ್ವತ ಪರಿಹಾರ ಕಲ್ಪಿಸುತ್ತಿಲ್ಲ ಎಂಬುದು ನಿವಾಸಿಗಳ ಆರೋಪ.

'ಹೋದ ವರ್ಷ ಸುರಿದ ಮಳೆ ನೀರು ಮನೆಗಳಿಗೆ ನುಗ್ಗಿದ ಪರಿಣಾಮ ಟಿವಿ, ಫ್ರಿಡ್ಜ್, ಫ್ಯಾನ್, ಆಹಾರ ಧಾನ್ಯಗಳು ಸೇರಿ ಬಹುತೇಕ ಬೆಲೆ ಬಾಳುವ ವಸ್ತುಗಳು ನೀರು ಪಾಲಾಗಿದ್ದವು. ಪರಿಹಾರ ಕೋರಿ ಬಿಬಿಎಂಪಿಗೆ ಹಲವು ಬಾರಿ ದಾಖಲೆಗಳನ್ನು ಸಲ್ಲಿಸಿದರೂ ಪರಿಹಾರ ಸಿಕ್ಕಿಲ್ಲ. ಜೂನ್‌ನಲ್ಲಿ ಮತ್ತೆ ಮುಂಗಾರು ಮಳೆ ಪ್ರಾರಂಭವಾಗಲಿದೆ. ಆದರೆ, ಪರಿಸ್ಥಿತಿ ಸುಧಾರಣೆಯಾಗಿಲ್ಲ. ಇಲ್ಲಿನ ಬಹುತೇಕ ಸ್ಥಿತಿವಂತರು ಬೇರೆ ಕಡೆ ಸ್ಥಳಾಂತರಗೊಂಡಿದ್ದಾರೆ. ಆದರೆ, ನಮ್ಮಂತಹ ಮಧ್ಯಮ ವರ್ಗದವರು ಬೇರೆ ಕಡೆಗೆ ಹೋಗುವಷ್ಟು ಆರ್ಥಿಕ ಶಕ್ತಿ ಇಲ್ಲ. ಆದ್ದರಿಂದ ಇಲ್ಲೇ ಜೀವನ ಸಾಗಿಸುತ್ತಿದ್ದೇವೆ' ಎಂದು ಸ್ಥಳೀಯ ನಿವಾಸಿಗಳಾದ ಮುರಳಿ ರೆಡ್ಡಿ, ಅಖಿಲೇಶ್ ಯಾದವ್ ತಿಳಿಸಿದರು.

'ಸೆಪ್ಟೆಂಬರ್‌ನಲ್ಲಿ ಸುರಿದ ಭಾರಿ ಮಳೆಗೆ ರೈನ್‌ಬೊ ಬಡಾವಣೆಯು ಕೆರೆಯಂತೆ ಆಗಿತ್ತು. ರಸ್ತೆಗಳೆಲ್ಲವೂ ಹೊಳೆಯಂತೆ ಆಗಿದ್ದವು. ಟ್ರ್ಯಾಕ್ಟರ್ ರಬ್ಬರ್ ಬೋಟ್‌ಗಳ ಸಹಾಯದಿಂದ ಮನೆಗಳಿಂದ ಹೊರಬಂದು ನಾಲ್ಕು ದಿನಗಳ ಕಾಲ ಪಿಜಿಯಲ್ಲಿ ನೆಲೆಸಿದ್ದೆವು. ಈಗ ಬಿಬಿಎಂಪಿ ಅತಿಕ್ರಮಣ ರಾಜಕಾಲುವೆ ತೆರವುಗೊಳಿಸಿದೆ. ಇದೇ ರಾಜಕಾಲುವೆಗೆ ತಡೆಗೋಡೆ ನಿರ್ಮಿಸಲಾಗುತ್ತಿದೆ. ಮತ್ತೆ ಪ್ರವಾಹದ ಭೀತಿ ಕಡಿಮೆಯಾಗಿದೆ' ಎಂದು ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿರುವ ಪಶ್ಚಿಮ ಬಂಗಾಳದ ಸುಮನ್ ತಿಳಿಸಿದರು.

'ಮೂರು ತಿಂಗಳಿನಿಂದ ಚೈತನ್ಯ ಶಾಲೆಯಿಂದ ರೈನ್ ಬೊ ಬಡಾವಣೆಯ ರೈಲ್ವೆ ಹಳಿಯವರೆಗೆ 450 ಮೀಟರ್ ರಾಜಕಾಲುವೆ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ. ಮಹದೇವಪುರದ ರಾಜಕಾಲುವೆಯಿಂದ ರೈನ್ ಬೊ ಬಡಾವಣೆಗೆ ನೀರು ಹರಿಯದಂತೆ ರಾಜಕಾಲುವೆ ನಿರ್ಮಿಸಲಾಗುತ್ತಿದೆ. 300 ಮೀಟರ್‌ನಷ್ಟು ಕಾಮಗಾರಿ ಮುಗಿದಿದ್ದು, 150 ಮೀಟರ್ ಕೆಲಸ ಮಾತ್ರ ಉಳಿದಿದೆ. ಮಳೆಗಾಲ ಪ್ರಾರಂಭ ಆಗುವುದಕ್ಕೂ ಮುನ್ನ ರಾಜಕಾಲುವೆ ನಿರ್ಮಾಣವಾಗಲಿದೆ' ಎಂದು ಬಿಬಿಎಂಪಿ ಗುತ್ತಿಗೆದಾರ ಮೂರ್ತಿ ವಿಶ್ವಾಸ ವ್ಯಕ್ತಪಡಿಸಿದರು.

ಸರ್ಜಾಪುರ ರಸ್ತೆಯ ರೈನ್ ಬೊ ಡ್ರೈವ್‌ನ ಮುಂಭಾಗದಲ್ಲಿ ಕಾಲುವೆ ಕಾಮಗಾರಿ ಅರ್ಧಕ್ಕೆ ನಿಂತಿದೆ (ಎಡಚಿತ್ರ), ಮಾರತ್ತಹಳ್ಳಿಯ ಕಸವನಹಳ್ಳಿ ಗ್ರಾಮದ 'ರೈನ್ ಬೊ' ಬಡಾವಣೆಯಲ್ಲಿ ರಾಜಕಾಲುವೆ ಕಾಮಗಾರಿ ಪ್ರಗತಿಯಲ್ಲಿದೆ

ಪ್ರಜಾವಾಣಿ ಚಿತ್ರಗಳು/ ರಂಜು ಪಿ.

ರೈನ್‌ಬೊ ಡ್ರೈವ್: ಮತ್ತೆ ಪ್ರವಾಹ ಭೀತಿ

'ಸೆಪ್ಟೆಂಬರ್‌ನಲ್ಲಿ ಸುರಿದ ಮಹಾಮಳೆಗೆ ತುಂಬಿಹೋಗಿದ್ದ ಸರ್ಜಾಪುರದ ರೈನ್‌ಬೊ ಡ್ರೈವ್‌ಗೆ ಮತ್ತೆ ಜಲಪ್ರಳಯದ ಭೀತಿ ಎದುರಾಗಿದೆ. ಸುತ್ತಲಿರುವ ಕೆರೆಗಳು ಮಳೆಗಾಲದ ಸಂದರ್ಭದಲ್ಲಿ ಕೋಡಿ ಬಿದ್ದಾಗ ರಾಜಕಾಲುವೆಯಲ್ಲಿ ಹರಿಯಬೇಕು. ಆದರೆ, ಈ ಪ್ರದೇಶದಲ್ಲಿ ಐಷಾರಾಮಿ ವಿಲ್ಲಾಗಳ ನಿರ್ಮಾಣ ಮಾಡಿಕೊಳ್ಳಲಾಗಿದೆ. ಇದರಿಂದ, ಮಳೆ ನೀರು ಸರಾಗವಾಗಿ ಹರಿಯಲು ಸಾಧ್ಯವಾಗುತ್ತಿಲ್ಲ. ಬಿಬಿಎಂಪಿಯು ಈ ಬಡಾವಣೆಯಲ್ಲಿ ಕಾಲುವೆ ನಿರ್ಮಾಣ ಮಾಡದಂತೆ ಸ್ಥಳೀಯ ನಿವಾಸಿಗಳು ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ಆದ್ದರಿಂದ, ತೆರವು ಕಾರ್ಯ ಸಾಧ್ಯವಾಗಿಲ್ಲ' ಎಂಬುದು ಸ್ಥಳೀಯರ ಮಾತು.

'ಬಿಬಿಎಂಪಿಯು ರೈನ್‌ಬೊ ಡ್ರೈವ್ ಹೊರಭಾಗದ ಎರಡು ಬದಿಗಳಲ್ಲಿ ಚಿಕ್ಕದಾಗಿದ್ದ ಚರಂಡಿಗಳನ್ನು 4 ಅಡಿ ವಿಸ್ತರಿಸಿ ಕಾಲುವೆಯನ್ನು ನಿರ್ಮಿಸುತ್ತಿದೆ. ಆದರೆ, ತಡೆಯಾಜ್ಞೆ ತಂದಿರುವ ಕಾರಣ ಕಾಮಗಾರಿ ಅರ್ಧಕ್ಕೆ ನಿಂತಿದೆ' ಎಂದು ಸ್ಥಳೀಯ ನಿವಾಸಿ ಸಂಜೋತ್ ಕುಮಾರ್ ತಿಳಿಸಿದರು.

'ರೈನ್‌ಬೊ ಡ್ರೈವ್‌ನಿಂದ ತಕರಾರು'

ತುಷಾರ್ ಗಿರಿನಾಥ್

'ಕಳೆದ ಬಾರಿ ಭಾರಿ ಮಳೆಯಿಂದ ಪೂರ್ಣ ಜಲಾವೃತಗೊಂಡಿದ್ದ ಸರ್ಜಾಪುರ ರಸ್ತೆಯಲ್ಲಿರುವ ರೈನ್‌ಬೊ ಡ್ರೈವ್ ಐಷಾರಾಮಿ ವಿಲ್ಲಾಗಳಿಗೆ ಮಳೆ ನೀರು ನುಗ್ಗಿತ್ತು. ಆ ಸಂದರ್ಭದಲ್ಲಿ ರಾಜಕಾಲುವೆಗಳ ಮರು ನಿರ್ಮಾಣ ಹಾಗೂ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಆರಂಭಿಸಲಾಗಿತ್ತು. ಆದರೆ, ರಾಜಕಾಲುವೆ ಒತ್ತುವರಿ ತೆರವು ಮಾಡದಂತೆ ನಿವಾಸಿಗಳು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದರಿಂದ ಯಾವುದೇ ರೀತಿಯ ತೆರವು ಆಗಿರಲಿಲ್ಲ. ವ್ಯಾಜ್ಯ ಇರುವುದರಿಂದ ಒಳಭಾಗದಲ್ಲಿ ಕಾಲುವೆ ನಿರ್ಮಿಸುತ್ತಿಲ್ಲ. ಹೊರಭಾಗದಲ್ಲಿ ಮಾತ್ರ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಕಾಮಗಾರಿ ಕೈಗೊಳ್ಳಲಾಗಿದೆ. ಇನ್ನು, ರೈನ್‌ಬೊ ಬಡಾ ವಣೆಯಲ್ಲಿ ಈಗಾಗಲೇ ಎಲ್ಲ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳ ಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಸ್ಥಳಾಂತರಗೊಂಡ ನಿವಾಸಿಗಳು'

ಹುಲಿಗೆಪ್ಪ

ಹೋದ ವರ್ಷ ಸುರಿದ ಭಾರಿ ಮಳೆಗೆ ರೈನ್‌ಬೊ ಡ್ರೈವ್ ಬಹುತೇಕ ಮುಳಗಡೆಯಾಗಿತ್ತು. ಆದ್ದರಿಂದ ಇಲ್ಲನ ನಿವಾಸಿಗಳು ಮನೆಗಳನ್ನು ಖಾಲಿ ಮಾಡಿ ಬೇರೆಕಡೆ ಸ್ಥಳಾಂತರಗೊಂಡಿದ್ದಾರೆ ಎಂದು ಡ್ರೈವ್‌ನಲ್ಲಿ ಕಾರ್ಯನಿರ್ವಹಿಸುವ ಹುಲಿಗೆಪ್ಪ ತಿಳಿಸಿದರು.

ಪ್ರವಾಹದ ಸಂದರ್ಭದಲ್ಲಿ ರೈನ್‌ಬೊ ಡ್ರೈವ್‌ನ ನಿವಾಸಿಗಳು ಮತ್ತು ಅವರ ಮಕ್ಕಳು ಕಚೇರಿಗಳಿಗೆ ಮತ್ತು ಶಾಲೆಗೆ ತೆರಳಲು ಟ್ರ್ಯಾಕ್ಟರ್, ರಬ್ಬರ್ ಬೋಟ್‌ಗಳನ್ನು ಬಾಡಿಗೆಗೆ ಪಡೆದಿದ್ದರು ಎಂದು ಸ್ಮರಿಸಿದರು.

ಮಳೆಯಿಂದ ಹಾನಿ ತಲುಪದ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾಲಕ್ಷ್ಮಿ ಬಡಾವಣೆಯಲ್ಲಿ ಮೇ 21ರಂದು ಸುರಿದ ಭಾರಿ ಮಳೆಯಿಂದ ಒಳಚರಂಡಿ ನೀರು ಮನೆಗಳಿಗೆ ನುಗ್ಗಿ ಹಾನಿಯಾಗಿತ್ತು. ಬಿಬಿಎಂಪಿ ವತಿಯಿಂದ ಪರಿಹಾರವನ್ನು ಇನ್ನೂ ವಿತರಿಸಿಲ್ಲ' ಎಂದು ಬಿಬಿಎಂಪಿ ಮಾಜಿ ಸದಸ್ಯ ಎಸ್. ಕೇಶವಮೂರ್ತಿ ಆರೋಪಿಸಿದರು.

'ಮಹಾಲಕ್ಷ್ಮಿಲೇಔಟ್ ವಿಧಾನಸಭೆ ವ್ಯಾಪ್ತಿಯಲ್ಲಿ ಮಳೆ ನೀರಿನಿಂದ ಹಾನಿಗೊಳಗಾದ ಕುಟುಂಬಕ್ಕೆ ತಕ್ಷಣ ಪರಿಹಾರ ನೀಡಿ ಎಂದು ಮೇ 22ರ ಸೋಮವಾರ ಮನವಿ ಮಾಡಲಾಗಿತ್ತು. ಬಿಬಿಎಂಪಿಯ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯ್‌ಪುರ ಅವರನ್ನು ಭೇಟಿ ಮಾಡಿ ಮನವಿಪತ್ರವನ್ನೂ ನೀಡಲಾಗಿತ್ತು. ಆದರೆ ಈವರೆಗೆ ಪರಿಹಾರ ವಿತರಣೆ ಆಗಿಲ್ಲ' ಎಂದರು.

'ಮಹಾಲಕ್ಷ್ಮೀಪುರಂನ ಗಣೇಶ್ ಬ್ಲಾಕ್ 3, 4 ಮತ್ತು 5ನೇ ಮುಖ್ಯರಸ್ತೆ ಮತ್ತು ಶಂಕರನಗರ ಚರಂಡಿ ಪಕ್ಕದ ಉದ್ಯಾನ ಹಾಗೂ ಉದ್ಯಾನ ಎದುರಿನ ಹಲವು ಮನೆಗಳಿಗೆ ನೀರು ನುಗ್ಗಿ ಹಾನಿ ಉಂಟಾಗಿತ್ತು. ಬೆಲೆಬಾಳುವ ವಸ್ತುಗಳು ಮತ್ತು ಪೀಠೋಪಕರಣಗಳು, ಅಮೂಲ್ಯ ವಸ್ತುಗಳು ನೀರಿನ ಪಾಲಾಗಿವೆ. ತಕ್ಷಣ ಪರಿಹಾರ ನೀಡಿದರೆ ಅವರ ಜೀವನಕ್ಕೆ ಅನುಕೂಲವಾಗಲಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೂ ಮನವಿ ಮಾಡಿರುವುದಾಗಿ' ಕೇಶವಮೂರ್ತಿ ತಿಳಿಸಿದರು.

ಬಿಬಿಎಂಪಿ ಮಾಜಿ ಆಡಳಿತ ಪಕ್ಷದ ನಾಯಕ ಎಂ.ಶಿವರಾಜು, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಪರಿಸರ ರಾಮಕೃಷ್ಣ, ನಟರಾಜ್, ಆನಂದ್ ಮೂರ್ತಿ ಇದ್ದರು.

ಪೂರ್ವಭಾವಿ ಪರೀಕ್ಷೆ

ಯುಪಿಎಸ್‌ಸಿಯ 2023ನೇ ಸಾಲಿನ ನಾಗರಿಕ ಸೇವಾ ಹುದ್ದೆಗಳ ಭರ್ತಿಗಾಗಿ ಭಾನುವಾರ ನಡೆದ ಪೂರ್ವಭಾವಿ ಪರೀಕ್ಷೆಗೆ ಹಾಜರಾಗಿದ್ದ ಅಭ್ಯರ್ಥಿಗಳು ನಗರದ ಬಿಎಂಎಸ್ ಮಹಿಳಾ ಕಾಲೇಜಿನಿಂದ ಹೊರಬಂದರು

– ಪ್ರಜಾವಾಣಿ ಚಿತ್ರ

ಹೋರಾಟಗಾರರ ಬಂಧನಕ್ಕೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಕುಸ್ತಿಪಟುಗಳ ಹೋರಾಟಕ್ಕೆ ಬೆಂಬಲ ನೀಡಲು ತೆರಳುತ್ತಿದ್ದ ಸಾಮಾಜಿಕ ಚಳವಳಿ ಮುಖಂಡರನ್ನು ಬಂಧಿಸಿರುವ ದೆಹಲಿ ಪೊಲೀಸರ ಕ್ರಮವನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ರಾಜ್ಯ ಸಮಿತಿ ಖಂಡಿಸಿದೆ.

'ಹೋರಾಟನಿರತ ಮಹಿಳಾ ಕುಸ್ತಿಪಟುಗಳ ಮಹಾ ಪಂಚಾಯತ್ ಕರೆಗೆ ಸ್ಪಂದಿಸಿ, ಬೆಂಬಲ ಸೂಚಿಸಲು ದೆಹಲಿಯ ಜಂತರ್ ಮಂತರ್ ಕಡೆಗೆ ಹೋರಾಟಗಾರರು ತೆರಳುತ್ತಿದ್ದರು. ಅಲ್ಲಿಯೇ ಹೋರಾಟಗಾರರ ಬಂಧಿಸಿ ಪ್ರತಿಭಟನೆ ಹತ್ತಿಕ್ಕಲಾಗಿದೆ' ಎಂದು ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ದೂರಿದ್ದಾರೆ.

'ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನೂತನ ಸಂಸತ್ ಭವನವನ್ನು 'ಪ್ರಜಾತಂತ್ರದ ದೇವಸ್ಥಾನ' ಎಂದು ಕರೆದು ಅದರ ಉದ್ಘಾಟನೆ ನಡೆಸುತ್ತಿದ್ದರು. ಭವನದ ಹತ್ತಿರದ ಜಂತರ್ ಮಂತರ್‌ನಲ್ಲಿ ಕೇಂದ್ರ ಸರ್ಕಾರ ಬೆಂಬಲಿತ ದೆಹಲಿ ಪೊಲೀಸರು ಪ್ರಜಾತಂತ್ರದ ಹಕ್ಕು ದಮನಗೊಳಿಸುತ್ತಿದ್ದಾರೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಪ್ರಜಾತಾಂತ್ರಿಕ ಹಕ್ಕುಗಳಿಗೆ ಕನಿಷ್ಠ ಗೌರವವನ್ನೂ ನೀಡದೆ ಮಹಾ ಪಂಚಾಯತ್ ಅನ್ನು ವಿಫಲಗೊಳಿಸುವ ದುರುದ್ದೇಶದಿಂದ ಸರ್ಕಾರವು ಪ್ರತಿಭಟನೆಗೆ ತೆರಳುತ್ತಿದ್ದ ಹಲವರನ್ನು ಬಂಧಿಸಿದೆ. ಕೆಲವರನ್ನು ಗೃಹಬಂಧನದಲ್ಲಿ ಇರಿಸಿದೆ. ಇದು ಖಂಡನೀಯ' ಎಂದು ಹೇಳಿದ್ದಾರೆ.

ದೆಹಲಿಯಲ್ಲಿ ಕುಸ್ತಿಪಟುಗಳು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ಸೂಚಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಕ್ರೀಡಾಪಟುಗಳು ಹಾಗೂ ಹೋರಾಟಗಾರರು ಪ್ರತಿಭಟನೆ ನಡೆಸಿದರು.

ಮಹಿಳಾ ಕುಸ್ತಿಪಟುಗಳ ಮೇಲೆ ದೌರ್ಜನ್ಯ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಕುಸ್ತಿಪಟುಗಳ ಮೇಲೆ ನಡೆದಿರುವ ದೌರ್ಜನ್ಯ ಖಂಡಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕ್ರೀಡಾಪಟುಗಳು ಹಾಗೂ ಹೋರಾಟಗಾರರು ಭಾನುವಾರ ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರ ಹಾಕಿದರು.

'ಕುಸ್ತಿ ಫೆಡರೇಷನ್ ಮುಖ್ಯಸ್ಥ, ಆರೋಪಿ ಸ್ಥಾನದಲ್ಲಿರುವ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಕೆಲವು ಹಿತಾಸಕ್ತಿಗಳು ರಕ್ಷಿಸುತ್ತಿವೆ. ಮಹಿಳಾ ಕುಸ್ತಿಪಟುಗಳ ಪರ ಹೋರಾಟ ನಡೆಸಿದರೆ ಹೋರಾಟವನ್ನೇ ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ. ದೆಹಲಿಯಲ್ಲಿ ಭಾನುವಾರ ಕುಸ್ತಿಪಟುಗಳು ಹಾಗೂ ಸಾಮಾಜಿಕ ಹೋರಾಟಗಾರರ ಮೇಲೆ ದೌರ್ಜನ್ಯ ಎಸಗಿರುವುದು ಖಂಡನೀಯ. ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಬಂಧಿಸಬೇಕು' ಎಂದು ಪ್ರತಿಭಟನಕಾರರು ಹೇಳಿದರು.

'ಇಡೀ ಪ್ರಕರಣದ ಸತ್ಯವು ಜನರಿಗೆ ಗೊತ್ತಾಗಬೇಕು. ತನಿಖೆ ನಡೆಸಿ ಅದರ ವರದಿಯನ್ನು ಬಹಿರಂಗ ಪಡಿಸಬೇಕು. ಮಹಿಳೆಯರು ಕೆಲಸ ಮಾಡುವ ಸ್ಥಳದಲ್ಲಿ ರಕ್ಷಣೆ ನೀಡಬೇಕು' ಎಂದು ಆಗ್ರಹಿಸಿದರು.

'ಮೋದಿ ಅವರೇ ಬೇಟಿ ಬಚಾವೊ ಎಂದರೆ ಲೈಂಗಿಕ ಕಿರುಕುಳದ ವಿರುದ್ಧ ಹೋರಾಟ ನಡೆಸುತ್ತಿರುವ ಕುಸ್ತಿಪಟುಗಳ ಜತೆಗೆ ನಿಲ್ಲುವುದು...' ಎಂಬ ಫಲಕವನ್ನು ಪ್ರತಿಭಟನಕಾರರು ಪ್ರದರ್ಶಿಸಿದರು. 'ಕುಸ್ತಿಪಟುಗಳ ಹೋರಾಟ ಜತೆಗೆ ನಾವಿದ್ದೇವೆ' ಎಂದು ಘೋಷಿಸಿದರು.

ಇತಿಹಾಸಕಾರ ರಾಮಚಂದ್ರ ಗುಹಾ, ನಿಶಾ ಮಿಲೆಟ್, ರೀತ್ ಅಬ್ರಹಾಂ ಇದ್ದರು.

ಕೆರೆಯಲ್ಲಿ ಮುಳುಗಿ ಇಬ್ಬರು ಯುವಕರು ಸಾವು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕುಂದಾಣ ಹೋಬಳಿಯ ರಾಮನಾಥಪುರ ಸಮೀಪದ ಕೆರೆಯಲ್ಲಿ ಭಾನುವಾರ ಮಧ್ಯಾಹ್ನ ಈಜಲು ತೆರಳಿದ್ದ ಬೆಂಗಳೂರಿನ ನಾಲ್ವರು ಯುವಕರ ಪೈಕಿ ಇಬ್ಬರು ಕರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಮತ್ತಿಬ್ಬರು ನಾಪತ್ತೆಯಾಗಿದ್ದಾರೆ.

ಬೆಂಗಳೂರಿನ ಆರ್.ಟಿ.ನಗರ ಹಾಗೂ ಚಾಮುಂಡಿ ನಗರದ ನಿವಾಸಿಗಳಾದ ಶೇಖ್ ತಾಹೀರ್, ತೌಹೀದ್, ಶಾಹೀದ್, ಫೈಜಲ್ ಖಾನ್ ಎಂಬ ಯುವಕರು ವಾರಾಂತ್ಯದ ಮೋಜಿಗೆ ದೇವನಹಳ್ಳಿ ಸಮೀಪದ ನಂದಿ ಬೆಟ್ಟಕ್ಕೆ ಬಂದಿದ್ದರು. ಅಲ್ಲಿಂದ ರಾಮನಾಥಪುರದ ಕೆರೆಗೆ ಈಜಲು ಬಂದಿದ್ದರು ಎಂದು ಹೇಳಲಾಗಿದೆ. ಈ ನಾಲ್ವರೂ 18–20 ವರ್ಷ ಆಸುಪಾಸಿನವರು.

ಭಾನುವಾರ ತಡರಾತ್ರಿವರೆಗೂ ನಡೆಯುತ್ತಿದ್ದ ಕಾರ್ಯಾಚರಣೆಯಲ್ಲಿ ಇಬ್ಬರು ಯುವಕರ ಶವಗಳು ಪತ್ತೆಯಾಗಿವೆ. ವಿಶ್ವನಾಥಪುರ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಇನ್ನಿಬ್ಬರಿಗಾಗಿ ಶೋಧ ಕಾರ್ಯಾಚರಣೆ ಮುಂದುವರಿಸಿದ್ದಾರೆ.

ಕೆರೆಯ ದಡದಲ್ಲಿ ಸಂಜೆ ದ್ವಿಚಕ್ರ ವಾಹನ ಹಾಗೂ ಚಪ್ಪಲಿ ಇರುವುದನ್ನು ಗಮನಿಸಿದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ಕರೆಸಿ ಕಾರ್ಯಾಚರಣೆ ಪ್ರಾರಂಭಿಸಿದ್ದಾರೆ.

'ಮೊದಲಿಗೆ ಇಬ್ಬರು ಯುವಕರು ಈಜಲು ತೆರಳಿರುವ ಸಾಧ್ಯತೆ ಇದೆ. ಅವರು ಮುಳುಗುತ್ತಿರುವುದನ್ನು ಗಮನಿಸಿ ಮತ್ತಿಬ್ಬರು ಸ್ನೇಹಿತರು ಅವರ ನೆರವಿಗೆ ಧಾವಿಸಿರಬಹುದು' ಎಂದು ಗ್ರಾಮಸ್ಥರು ಶಂಕಿಸಿದ್ದಾರೆ.

ಮುಖ್ಯಾಂಶಗಳು

- ರಾಮನಾಥಪುರ ಕೆರೆಗೆ ಇಳಿದಿದ್ದ ಯುವಕರು
- ನಾಲ್ವರು ಯುವಕರ ಪೈಕಿ ಇಬ್ಬರ ಶವ ಪತ್ತೆ
- ಕೆರೆ ದಡದಲ್ಲಿ ಚಪ್ಪಲಿ ಗಮನಿಸಿ ಪೊಲೀಸರಿಗೆ ಗ್ರಾಮಸ್ಥರಿಂದ ಮಾಹಿತಿ

ರೈಲಿನಿಂದ ಜಿಗಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ರೈಲು ನಿಲ್ದಾಣದಲ್ಲಿ ಶನಿವಾರ ಸಂಜೆ ಚಲಿಸುತ್ತಿದ್ದ ರೈಲಿನಿಂದ ಕೆಳಗೆ ಬಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಚಂದ್ರಮ್ಮ (40) ಎಂಬುವರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಭಾನುವಾರ ಸಾವನ್ನಪ್ಪಿದ್ದಾರೆ.

ದಾವಣಗೆರೆಯ ಚಂದ್ರಮ್ಮ ಬೆಂಗಳೂರಿನಿಂದ ಹುಬ್ಬಳ್ಳಿಗೆ ಜನಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಕುಟುಂಬದ ಸದಸ್ಯರ ಜತೆ ತೆರಳುತ್ತಿದ್ದರು. ನಗರದ ರೈಲು ನಿಲ್ದಾಣದಲ್ಲಿ ಮಕ್ಕಳಿಗೆ ಚಿಪ್ಸ್ ತೆಗೆದುಕೊಳ್ಳಲು ಇಳಿದಿದ್ದರು. ಈ ವೇಳೆ ರೈಲು ಮುಂದಕ್ಕೆ ಚಲಿಸುತ್ತಿರುವುದನ್ನು ಗಮನಿಸಿ ಆತುರದಲ್ಲಿ ರೈಲು ಹತ್ತಿದ್ದರು.

ರೈಲು ಮುಂದಕ್ಕೆ ಸಾಗಿದ ನಂತರ ಫ್ಲಾಟ್‌ಫಾರಂ ಮೇಲೆ ಇದ್ದ ಬೇರೆಯವರ ಮಕ್ಕಳನ್ನು ತಮ್ಮ ಮಕ್ಕಳು ಎಂದು ಭಾವಿಸಿ ವೇಗವಾಗಿ ಚಲಿಸುತ್ತಿದ್ದ ರೈಲಿನಿಂದ ಜಿಗಿದಿದ್ದಾರೆ. ನಂತರ ನಿಯಂತ್ರಣ ತಪ್ಪಿ ರೈಲು ಹಳಿ ಮೇಲೆ ಬಿದ್ದಿದ್ದಾರೆ. ಇದರಿಂದ ಅವರ ಎರಡು ಕಾಲುಗಳು ತುಂಡಾಗಿವೆ.

ಹಾವು ಕಚ್ಚಿ ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನ ಕುರುಬರ ಪಾಳ್ಯ ಗ್ರಾಮದ ತೋಟದಲ್ಲಿ ಭಾನುವಾರ ಬೆಳಗ್ಗೆ ಪಂಪ್‌ಸೆಟ್ ಸ್ವಿಚ್ ಶುರು ಮಾಡಲು ಹೋದ ಬಾಲಕ ಹಾವು ಕಚ್ಚಿ ಸಾವನ್ನಪ್ಪಿದ್ದಾನೆ. ಕುರುಬರ ಪಾಳ್ಯದ ರೈತ ಸುರೇಶ್ ಎಂಬುವರ ಪುತ್ರ ಹರೀಶ್ ಕೆ.ಎಸ್. (14) ಮೃತ ಬಾಲಕ.

ಮೋಟಾರ್ ಬಾಕ್ಸ್‌ನಲ್ಲಿದ್ದ ನಾಗರ ಹಾವು ಇರುವುದನ್ನು ಬಾಲಕ ಗಮನಿಸಿರಲಿಲ್ಲ.

ಶಾಲೆ ಶುಲ್ಕ ಭರಿಸಲು ಹಣ ಸಂಗ್ರಹಿಸಿಟ್ಟಿದ್ದ ಆಟೊ ಚಾಲಕ

ಮನೆಗೆ ನುಗ್ಗಿ ದರೋಡೆ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ ನಿವಾಸಿಗಳನ್ನು ಥಳಿಸಿ ದರೋಡೆ ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸಣ್ಣಕ್ಕಿಬೈಲು ತೋಟದ ರಸ್ತೆಯ ನಿವಾಸಿ ಬಿ. ಪ್ರೀತನ್ (21), ಸಿ. ರಜತ್ (22) ಹಾಗೂ ಎಚ್.ಬಿ. ವಿಜಯ್‌ಕುಮಾರ್ (19) ಬಂಧಿತರು. ಪ್ರಮುಖ ಆರೋಪಿಗಳಾದ ಪ್ರವೀಣ್, ಅಫ್ತಾಬ್, ಭರತ್ ಹಾಗೂ ಮನೋಜ್ ಎಂಬುವವರು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿಯಾದ ಆಟೊ ಚಾಲಕ ನಾಗೇಶ್ ಅವರ ಮನೆಗೆ ಮೇ 26ರಂದು ತಡರಾತ್ರಿ ಆರೋಪಿಗಳು ನುಗ್ಗಿದ್ದರು. ನಾಗೇಶ್ ಅವರಿಗೆ ಕಲ್ಲಿನಿಂದ ಹೊಡೆದಿದ್ದರು. ನಂತರ, ಕುತ್ತಿಗೆಗೆ ಚಾಕು ಹಿಡಿದು ಕೊಲೆ ಬೆದರಿಕೆಯೊಡ್ಡಿದ್ದರು. ಮನೆಯಲ್ಲಿದ್ದ ಎರಡು ಮೊಬೈಲ್, 30 ಗ್ರಾಂ ತೂಕದ ಚಿನ್ನಾಭರಣ ಹಾಗೂ ₹ 35 ಸಾವಿರ ನಗದು ದೋಚಿ ಪರಾರಿಯಾಗಿದ್ದರು.'

'ಕೃತ್ಯದ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ಅಕ್ರಮವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಗುಂಪು ಕಟ್ಟಿಕೊಂಡು ದರೋಡೆ ಮಾಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಶಾಲೆ ಶುಲ್ಕದ ಹಣ: 'ಆರೋಪಿ ಪ್ರೀತನ್, ನಾಗೇಶ್ ಅವರ ಪರಿಚಯಸ್ಥ. ಆಗಾಗ ಮನೆಗೆ ಬಂದು ಹೋಗುತ್ತಿದ್ದ. ನಾಗೇಶ್ ಅವರು ಮಗನ ಶಾಲೆ ಶುಲ್ಕ ಭರಿಸುವುದಕ್ಕಾಗಿ ಹಣ ಸಂಗ್ರಹಿಸಿ ಮನೆಯಲ್ಲಿ ಇರಿಸಿದ್ದರು. ಈ ಸಂಗತಿ ಪ್ರೀತನ್‌ಗೆ ಗೊತ್ತಾಗಿತ್ತು. ಸ್ನೇಹಿತನೇ ಆದ ಸಾಫ್ಟ್‌ವೇರ್ ಎಂಜಿನಿಯರ್ ಪ್ರವೀಣ್ ಹಾಗೂ ಇತರೆ ಸಹಚರರ ಜೊತೆ ಸೇರಿ ದರೋಡೆಗೆ ಸಂಚು ರೂಪಿಸಿದ್ದ' ಎಂದು ತಿಳಿಸಿದರು.

'ನಾಗೇಶ್ ಪತ್ನಿ ಮಗನ ಸಮೇತ ಇತ್ತೀಚೆಗೆ ಊರಿಗೆ ಹೋಗಿದ್ದರು. ನಾಗೇಶ್ ಮನೆಯಲ್ಲಿ ಒಬ್ಬರೇ ಇರುವುದನ್ನು ನೋಡಿ ಪ್ರೀತನ್ ಹಾಗೂ ಇತರರು ಕೃತ್ಯ ಎಸಗಿದ್ದರು' ಎಂದು ಪೊಲೀಸರು ತಿಳಿಸಿದರು.

ವೃದ್ಧೆ ಹತ್ಯೆ: ಚಿನ್ನದ ಸರ, ಬಳೆ ಕಳವು

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿರುವ ಕಮಲಮ್ಮ (82) ಹತ್ಯೆ ಪ್ರಕರಣದ ತನಿಖೆ ಆರಂಭಿಸಿರುವ ಪೊಲೀಸರು, ಕೆಲ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಪತ್ತೆ ಮಾಡುತ್ತಿದ್ದಾರೆ.

'ಸ್ಥಳೀಯ ನಾಗಪುರ ನಿವಾಸಿ ಕಮಲಮ್ಮ ಅವರನ್ನು ದುಷ್ಕರ್ಮಿಗಳು ಶನಿವಾರ ಸಂಜೆ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಜೊತೆಗೆ, ಎರಡು ಚಿನ್ನದ ಸರ ಹಾಗೂ ಬಳೆಗಳನ್ನು ಕಿತ್ತೊಯ್ದಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಮಲಮ್ಮ ಅವರ ಪತಿ ತೀರಿಕೊಂಡಿದ್ದಾರೆ. ಮಕ್ಕಳು ಪ್ರತ್ಯೇಕವಾಗಿ ಬೇರೆಡೆ ವಾಸವಿದ್ದಾರೆ. ಕಮಲಮ್ಮ ಒಂಟಿಯಾಗಿ ವಾಸವಿರುವುದನ್ನು ತಿಳಿದುಕೊಂಡು ಆರೋಪಿಗಳು ಕೃತ್ಯ ಎಸಗಿರುವ ಅನುಮಾನವಿದೆ. ಚಿನ್ನಾಭರಣ ಹಾಗೂ ಹಣಕ್ಕಾಗಿ ಕೊಲೆ ಮಾಡಿರುವ ಸಾಧ್ಯತೆ ಇದೆ. ಎಲ್ಲ ಆಯಾಮದಲ್ಲಿ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ತಿಳಿಸಿದರು.

ಕೆಲಸದ ವಿಚಾರಕ್ಕೆ ಗಲಾಟೆ: ಪೇಂಟರ್ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸಕ್ಕೆ ಗೈರಾದ ವಿಚಾರಕ್ಕೆ ಶುರುವಾದ ಗಲಾಟೆಯಲ್ಲಿ ವೀರೇಂದ್ರಕುಮಾರ್ (40) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಸ್ನೇಹಿತ ಮಹೇಂದ್ರ ವರ್ಮ (29) ಅವರನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಉತ್ತರಪ್ರದೇಶದ ವೀರೇಂದ್ರಕುಮಾರ್, ಕೆಲಸ ಹುಡುಕಿಕೊಂಡು ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಸ್ನೇಹಿತರ ಜೊತೆ ಶೆಡ್‌ನಲ್ಲಿ ವಾಸವಿದ್ದರು. ನಿರ್ಮಾಣ ಹಂತದ ಕಟ್ಟಡ ಹಾಗೂ ಇತರೆ ಕಟ್ಟಡಗಳಿಗೆ ಬಣ್ಣ ಬಳೆಯುವ ಪೇಂಟರ್ ಕೆಲಸ ಮಾಡಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಮದ್ಯವ್ಯಸನಿ ಆಗಿದ್ದ ವೀರೇಂದ್ರಕುಮಾರ್, ಕೆಲದಿನಗಳಿಂದ ಕೆಲಸಕ್ಕೆ ಹೋಗಿರಲಿಲ್ಲ. ಶೆಡ್‌ನಲ್ಲಿಯೇ ಉಳಿದುಕೊಂಡಿದ್ದರು. ಆರೋಪಿ ಮಹೇಂದ್ರ ಸಹ ಪೇಂಟರ್. ಶುಕ್ರವಾರ ರಾತ್ರಿ ಕೆಲಸ ಮುಗಿಸಿ ಶೆಡ್‌ಗೆ ಬಂದಿದ್ದ ಮಹೇಂದ್ರ, 'ಕೆಲಸಕ್ಕೆ ಏಕೆ ಬರುತ್ತಿಲ್ಲ' ಎಂದು ವೀರೇಂದ್ರಕುಮಾರ್ ಅವರನ್ನು ಪ್ರಶ್ನಿಸಿದ್ದರು. ನಂತರ, ಅದೇ ವಿಚಾರವಾಗಿ ಇಬ್ಬರ ನಡುವೆ ಜಗಳ ಶುರುವಾಗಿತ್ತು.'

'ಆರೋಪಿ ಮಹೇಂದ್ರ, ವೀರೇಂದ್ರಕುಮಾರ್ ಅವರ ಕುತ್ತಿಗೆ ಹಿಸುಕಿ ಕೆಳಗೆ ಬೀಳಿಸಿದ್ದ. ನಂತರ, ಒದ್ದಿದ್ದ. ತೀವ್ರ ಗಾಯಗೊಂಡ ವೀರೇಂದ್ರ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಶನಿವಾರ ಬೆಳಿಗ್ಗೆ ಸ್ನೇಹಿತರು ಶೆಡ್ ಬಳಿ ಹೋದಾಗ ಮೃತದೇಹ ಕಂಡಿತ್ತು. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಉತ್ತರ ಪ್ರದೇಶದಲ್ಲಿರುವ ಸಂಬಂಧಿಕರಿಗೆ ಮಾಹಿತಿ ನೀಡಲಾಗಿದ್ದು, ಅವರು ನಗರಕ್ಕೆ ಬಂದ ಬಳಿಕವೇ ಮರಣೋತ್ತರ ಪರೀಕ್ಷೆ ನಡೆಸಲಾಗುವುದು' ಎಂದು ತಿಳಿಸಿದರು.

'ಸ್ಥಳೀಯ ಶೆಡ್ ನಿವಾಸಿಗಳ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿ ಮಹೇಂದ್ರನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಮಳೆ ಹೆಚ್ಚಾದರೆ ಹಾನಿ, ತುರ್ತು ಸ್ಪಂದನೆಗೆ ಸಂಚಾರ ಪೊಲೀಸರು ಸಜ್ಜು

ಗುದ್ದಲಿ, ಸಲಾಕೆ ಜೊತೆ ಪೊಲೀಸರ ಸುತ್ತಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆ ಬಂದಾಗ ಸೃಷ್ಟಿಯಾಗುವ ಸಂಕಷ್ಟಗಳನ್ನು ನಿವಾರಿಸಲು ಸಂಚಾರ ಪೊಲೀಸರು, ಗುದ್ದಲಿ, ಸಲಾಕೆ ಹಾಗೂ ಇತರ ಸಲಕರಣೆ ಜೊತೆಯಲ್ಲಿಟ್ಟುಕೊಂಡು ಸುತ್ತಾಡುತ್ತಿದ್ದಾರೆ.

ಮಳೆ ಸಂದರ್ಭದಲ್ಲಿ ರಸ್ತೆಯಲ್ಲಿ ನೀರು ಹರಿಯುವುದು ಹಾಗೂ ಹಲವೆಡೆ ಮರಗಳು ಉರುಳಿಬಿದ್ದು ಜನರ ಓಡಾಟಕ್ಕೆ ತೊಂದರೆಯಾಗುವುದು ಸಾಮಾನ್ಯವಾಗಿದೆ. ಮಳೆಹಾನಿ ಸಂದರ್ಭದಲ್ಲಿ ತುರ್ತು ಸ್ಪಂದನೆಗೆ ಸಂಚಾರ ಪೊಲೀಸರು ಹೊಸ ಕ್ರಮ ಕಂಡುಕೊಂಡಿದ್ದಾರೆ.

ಕೆ.ಆರ್.ವೃತ್ತದ ಒಳಸೇತುವೆಯಲ್ಲಿ ಇತ್ತೀಚೆಗೆ ನಿಂತಿದ್ದ ನೀರಿನಲ್ಲಿ ಮುಳುಗಿ ಆಂಧ್ರಪ್ರದೇಶದ ಯುವತಿ ಭಾನುರೇಖಾ ಮೃತಪಟ್ಟಿದ್ದರು. ಈ ಅವಘಡ ಸಂದರ್ಭದಲ್ಲಿ ಕಾರಿನಲ್ಲಿ ಸಿಲುಕಿದ್ದವರನ್ನು ರಕ್ಷಣೆ ಮಾಡಲು ಸ್ಥಳದಲ್ಲಿದ್ದ ಪೊಲೀಸರು ಹರಸಾಹಸಪಟ್ಟಿದ್ದರು. ಯಾವುದೇ ಸಲಕರಣೆ ಸಹ ಪೊಲೀಸರ ಬಳಿ ಇರಲಿಲ್ಲ.

ರಸ್ತೆಯಲ್ಲಿ ಹೊರಟಿದ್ದ ಮಹಿಳೆಯೊಬ್ಬರು ತಮ್ಮ ಸೀರೆ ಬಿಚ್ಚಿಕೊಟ್ಟು, ನೀರಿನಲ್ಲಿ ಮುಳುಗುತ್ತಿದ್ದವರನ್ನು ಹೊರಗೆ ಕರೆತರಲು ನೆರವಾಗಿದ್ದರು.

ಸಂಚಾರ ಪೊಲೀಸ್ ಇನ್‌ಸ್ಪೆಕ್ಟರ್ ಜೀಪಿನಲ್ಲಿರುವ ಸಲಕರಣೆಗಳು

ಇಂಥ ಪರಿಸ್ಥಿತಿ ಮರುಕಳಿಸದಂತೆ ಎಚ್ಚರಿಕೆ ವಹಿಸಿರುವ ಸಂಚಾರ ಪೊಲೀಸರು, ಮಳೆ ಹಾನಿ ಕಾರ್ಯಾಚರಣೆ ಸಲಕರಣೆಗಳನ್ನು ತಮ್ಮ ಜೀಪಿನಲ್ಲಿ ಇಟ್ಟುಕೊಂಡು ಓಡಾಡುತ್ತಿದ್ದಾರೆ. ಸಂಚಾರ ಠಾಣೆಗಳಲ್ಲೂ ಸಲಕರಣೆಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದಾರೆ.

'ನಗರದಲ್ಲಿ ಮಳೆ ಬಂದರೆ ಹಾನಿ ಹೆಚ್ಚು. ಹಲವೆಡೆ ಮರಗಳು ಹಾಗೂ ಮರದ ಕೊಂಬೆಗಳು ಉರುಳಿ ಬೀಳುತ್ತವೆ. ಇದರಿಂದಾಗಿ ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿ, ದಟ್ಟಣೆ ಹೆಚ್ಚಾಗುತ್ತದೆ. ಇದೇ ಕಾರಣಕ್ಕೆ ತುರ್ತು ಕಾರ್ಯಾಚರಣೆ ನಡೆಸಲು ಪ್ರತಿಯೊಂದು ಠಾಣೆಯಲ್ಲಿ ಅಗತ್ಯ ಸಲಕರಣೆಗಳನ್ನು ಸಂಗ್ರಹಿಸಿಟ್ಟುಕೊಳ್ಳುವಂತೆ, ಜೀಪಿನಲ್ಲಿ ಅವುಗಳನ್ನು ಇಟ್ಟುಕೊಂಡು ಸುತ್ತಾಡುವಂತೆ ಪೊಲೀಸರಿಗೆ ನಿರ್ದೇಶನ ನೀಡಲಾಗಿದೆ. ಸಲಕರಣೆ ಖರೀದಿಗೂ ಅನುದಾನ ಒದಗಿಸಲಾಗಿದೆ' ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ 'ಪ್ರಜಾವಾಣಿ'ಗೆ ತಿಳಿಸಿದರು.

'ದಿಢೀರ್ ಮಳೆ ಬಂದರೆ, ದಟ್ಟಣೆ ಉಂಟಾಗುತ್ತದೆ. ಬಿಬಿಎಂಪಿ ಸಿಬ್ಬಂದಿ ಹಾಗೂ ಎನ್‌ಸಿಆರ್‌ಎಫ್ ಸಿಬ್ಬಂದಿ ದಟ್ಟಣೆಯಲ್ಲಿ ಸಿಲುಕಿ ಸ್ಥಳಕ್ಕೆ ಬರುವುದು ತಡವಾಗುತ್ತದೆ. ಹೀಗಾಗಿ, ನಮ್ಮ ಸಿಬ್ಬಂದಿಯೇ ತುರ್ತು ಕಾರ್ಯಾಚರಣೆ ನಡೆಸಿ ರಸ್ತೆಯಲ್ಲಿ ನೀರು ನಿಲ್ಲದಂತೆ ಹಾಗೂ ಮರವನ್ನು ತ್ವರಿತವಾಗಿ ತೆರವು ಮಾಡುವ ಕೆಲಸ ಮಾಡಲಿದ್ದಾರೆ. ದಟ್ಟಣೆ ಕಡಿಮೆಯಾಗಿ ಸುಗಮ ಸಂಚಾರಕ್ಕೆ ಅನುಕೂಲವಾದರೆ, ನಮ್ಮ ಕೆಲಸ ಸಾರ್ಥಕ' ಎಂದು ಹೇಳಿದರು.

'ಜೂನ್‌ನಿಂದ ಮುಂಗಾರು ಆರಂಭವಾಗಲಿದೆ. ಇನ್‌ಸ್ಪೆಕ್ಟರ್ ಅವರು ಯಾವಾಗಲೂ ಗಸ್ತಿನಲ್ಲಿರುತ್ತಾರೆ. ಜೊತೆಗೆ, ಪ್ರತಿಯೊಂದು ವೃತ್ತಗಳಲ್ಲಿ ಸಿಬ್ಬಂದಿ ಕರ್ತವ್ಯದಲ್ಲಿರುತ್ತಾರೆ. ಹೀಗಾಗಿ, ಜೀಪಿನಲ್ಲಿ ಸಲಕರಣೆ ಇಟ್ಟುಕೊಂಡು ಸುತ್ತಾಡುವಂತೆ ತಿಳಿಸಲಾಗಿದೆ. ಠಾಣೆಯಲ್ಲೂ ಸಲಕರಣೆ ಸಂಗ್ರಹವಿರಲಿದೆ. ಏನಾದರೂ ಅನಾಹುತವಾದರೆ, ಸ್ಥಳದಲ್ಲಿರುವ ಸಿಬ್ಬಂದಿಯೇ ಸ್ಪಂದಿಸಲಿದ್ದಾರೆ' ಎಂದರು.

'ಮರ–ಟೊಂಗೆ ಹಾಗೂ ರಸ್ತೆಯಲ್ಲಿ ನಿಂತ ನೀರು ತೆರವು ಮಾಡಲು ಅಗತ್ಯವಿರುವ ಎಲ್ಲ ಸಲಕರಣೆಗಳು ಪೊಲೀಸರ ಬಳಿ ಇವೆ. ಗುದ್ದಲಿ, ಸಲಾಕೆ, ಕುಡಗೋಲು, ಮಚ್ಚುಗಳು, ಮೋಟರ್ ಪಂಪ್, ಹಗ್ಗ, ಬಕೆಟ್‌ಗಳು, ಮರ ಕತ್ತರಿಸುವ ಯಂತ್ರ, ನೀರೆತ್ತುವ ಪೈಪ್‌ಗಳು ಹಾಗೂ ಇತರೆ ಸಲಕರಣೆಗಳು ಇನ್‌ಸ್ಪೆಕ್ಟರ್ ಜೀಪಿನಲ್ಲಿ ಇರಲಿವೆ' ಎಂದು ಸಲೀಂ ತಿಳಿಸಿದರು.

ಸಂಚಾರ ಪೊಲೀಸ್ ಠಾಣೆಗಳಲ್ಲಿರುವ ಸಲಕರಣೆಗಳ ಜೊತೆ ಇನ್‌ಸ್ಪೆಕ್ಟರ್‌ಗಳು

ಆಯುಷ್ಮಾನ್ ಭಾರತ ಯೋಜನೆ: ಇ–ಆಸ್ಪತ್ರೆಯ ಎಚ್‌ಎಂಐಎಸ್ ಪೋರ್ಟಲ್‌ಗೆ ಲಿಂಕ್

ಡಿಜಿಟಲೀಕರಣ: ಕೆ.ಸಿ.ಜನರಲ್ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಯುಷ್ಮಾನ್ ಭಾರತ' ಯೋಜನೆಯಡಿ ಆರೋಗ್ಯ ಖಾತೆಯನ್ನು ಇ-ಆಸ್ಪತ್ರೆಯ 'ಎಚ್‌ಎಂಐಎಸ್' ಪೋರ್ಟಲ್‌ಗೆ ಲಿಂಕ್ ಮಾಡುವಲ್ಲಿ ಇಲ್ಲಿನ ಕೆ.ಸಿ. ಜನರಲ್ ಆಸ್ಪತ್ರೆ ದೇಶದಲ್ಲಿಯೇ ಮುಂಚೂಣಿಯಲ್ಲಿದ್ದು, ಈವರೆಗೆ 45,580 ಆರೋಗ್ಯ ದಾಖಲಾತಿಯನ್ನು ಲಿಂಕ್ ಮಾಡಿದೆ.

ಈ ವ್ಯವಸ್ಥೆಯು ಆಸ್ಪತ್ರೆಗಳಲ್ಲಿ ರೋಗಿಗಳ ನೋಂದಣಿ, ಚಿಕಿತ್ಸೆಗೆ ಸಹಕಾರಿಯಾಗಿದೆ. ಕಾಗದರಹಿತ ಸೇವೆ ಇದರಿಂದ ಸಾಧ್ಯವಾಗಲಿದೆ.

ಆಯುಷ್ಮಾನ್ ಭಾರತ್ ಆರೋಗ್ಯ ಖಾತೆ (ಎಬಿಎಚ್‌ಎ) ಅಡಿ ವೈದ್ಯಕೀಯ ಇತಿಹಾಸ ಡಿಜಿಟಲೀಕರಣ ಮಾಡುವಲ್ಲಿಯೂ ಆಸ್ಪತ್ರೆ ದೇಶದಲ್ಲಿಯೇ ಮೊದಲ ಸ್ಥಾನ ದಲ್ಲಿದೆ. 87,400 ಮಂದಿಯ ಮಾಹಿತಿಯನ್ನು ಡಿಜಿಟಲೀಕರಣ ಮಾಡಲಾಗಿದೆ. ಎರಡನೇ ಸ್ಥಾನದಲ್ಲಿ ಧಾರವಾಡದ ಜಿಲ್ಲಾ ಆಸ್ಪತ್ರೆ ಹಾಗೂ ಮೂರನೇ ಸ್ಥಾನದಲ್ಲಿ ಜಯನಗರ ಸಾರ್ವಜನಿಕ ಆಸ್ಪತ್ರೆಯಿದ್ದು, ತಲಾ 70 ಸಾವಿರಕ್ಕೂ ಅಧಿಕ ಮಂದಿಯನ್ನು ಈ ವ್ಯವಸ್ಥೆ ಅಡಿ ತರಲಾಗಿದೆ.

'ಕೆ.ಸಿ. ಜನರಲ್ ಆಸ್ಪತ್ರೆಯು ಎಚ್‌ಎಂಐಎಸ್ ವ್ಯವಸ್ಥೆಯಡಿ ರೋಗಿಗಳ ವೈದ್ಯಕೀಯ ಇತಿಹಾಸ ದಾಖಲೀಕರಿಸುವಲ್ಲಿ ಮುಂಚೂಣಿಯಲ್ಲಿದೆ. ಈ ವ್ಯವಸ್ಥೆಯಿಂದ ಮೊಬೈಲ್ ಮೂಲಕವೇ ವೈದ್ಯಕೀಯ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳಬಹುದು. ಇದಕ್ಕಾಗಿ ಎಬಿಎಚ್‌ಎ ಆ್ಯಪ್ ಡೌನ್ಲೋಡ್ ಮಾಡಿಕೊಳ್ಳಬೇಕು' ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

'ಆರೋಗ್ಯ ದಾಖಲೆಗಳ ಡಿಜಿಟಲೀಕರಣದಿಂದ ದೇಶದ ಎಲ್ಲೆಡೆ ರೋಗಿಯ ಚಿಕಿತ್ಸಾ ಇತಿಹಾಸ ದೊರೆಯಲಿದೆ. ಇದರಿಂದ ವೈದ್ಯಕೀಯ ಸೇವೆಗಳನ್ನು ಸುಲಭವಾಗಿ ಒದಗಿಸಲು ಸಾಧ್ಯವಾಗುತ್ತದೆ. ಆಸ್ಪತ್ರೆಗಳು, ಔಷಧ ಮಳಿಗೆಗಳು ಹಾಗೂ ಪ್ರಯೋಗಾಲಯಗಳಿಗೂ ದತ್ತಾಂಶಗಳ ಡಿಜಿಟಲೀಕರಣ ನೆರವಾಗಲಿದೆ' ಎಂದು ಕೆ.ಸಿ. ಜನರಲ್ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ಮಲ್ಲೇಶ್ವರದಲ್ಲಿರುವ ಕೆ.ಸಿ. ಜನರಲ್ ಆಸ್ಪತ್ರೆ

ಮುಖ್ಯಾಂಶಗಳು

- ಈವರೆಗೆ 45,580 ಆರೋಗ್ಯ ದಾಖಲಾತಿ ಲಿಂಕ್
- 87,400 ಮಂದಿಯ ಮಾಹಿತಿ ಡಿಜಿಟಲೀಕರಣ
- ಎರಡನೇ ಸ್ಥಾನದಲ್ಲಿ ಧಾರವಾಡ ಜಿಲ್ಲಾ ಆಸ್ಪತ್ರೆ ಹಾಗೂ 3ನೇ ಸ್ಥಾನದಲ್ಲಿ ಜಯನಗರ ಆಸ್ಪತ್ರೆ

ಧರಣಿ ನಿರತ ರೈತ ಸಾವು

ಸೇಡಂ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಶ್ರೀಸಿಮೆಂಟ್ ಕಾರ್ಖಾನೆ ಮುಂಭಾಗ ಧರಣಿ ನಡೆಸುತ್ತಿದ್ದ ಬೆನಕನಹಳ್ಳಿಯ ರೈತ ದೇವಿಂದ್ರಪ್ಪ ಮಲ್ಲಣ್ಣಪ್ಪ ಜೋಗೇರ (55) ಭಾನುವಾರ ಮೃತಪಟ್ಟಿದ್ದಾರೆ.

ಕಾರ್ಖಾನೆ ನಿರ್ಮಾಣಕ್ಕಾಗಿ ತಾಲ್ಲೂಕಿನ ಹಲವು ರೈತರು ಜಮೀನು ನೀಡಿದ್ದರು. ಜಮೀನು ಖರೀದಿಯಲ್ಲಿ ಅನ್ಯಾಯವಾಗಿದೆ ಎಂದು ಆರೋಪಿಸಿ 2022ರ ಡಿಸೆಂಬರ್‌ನಿಂದ ಧರಣಿ ನಡೆಸುತ್ತಿದ್ದಾರೆ. ಕಾರ್ಖಾನೆಗಾಗಿ ದೇವಿಂದ್ರಪ್ಪ 2.20 ಎಕರೆ ಜಮೀನು ನೀಡಿದ್ದರು. ಆದರೆ, ಕಾರ್ಖಾನೆ ಅಧಿಕಾರಿಗಳು ಉದ್ಯೋಗ ನೀಡಿರಲಿಲ್ಲ. ದೇವಿಂದ್ರಪ್ಪ ಧರಣಿ ಸ್ಥಳದಲ್ಲಿ ರಾತ್ರಿ ಮಲಗಿದ್ದು, ಬೆಳಿಗ್ಗೆ 7.30ರ ಸುಮಾರಿಗೆ ನೋಡಿದಾಗ ಮೃತರಾಗಿದ್ದರು. ಮೃತರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ. ಈ ಕುರಿತ ಪ್ರತಿಕ್ರಿಯೆಗೆ ಶ್ರೀಸಿಮೆಂಟ್ ಕಾರ್ಖಾನೆಯ ಅಧಿಕಾರಿಗಳು ಲಭ್ಯವಾಗಲಿಲ್ಲ.

ಸುದ್ದಿ 2 ನಿಮಿಷ

ಮುರುಘಾ ಮಠಕ್ಕೆ ಬಸವಪ್ರಭು ಸ್ವಾಮೀಜಿ ಉಸ್ತುವಾರಿ

ಚಿತ್ರದುರ್ಗ: ಮುರುಘಾ ಮಠದ ಉಸ್ತುವಾರಿಯನ್ನು ಬಸವಪ್ರಭು ಸ್ವಾಮೀಜಿ ಅವರಿಗೆ ನೀಡಿ, ತಾತ್ಕಾಲಿಕ ಆಡಳಿತ ಸಮಿತಿ ರಚಿಸಲು ಭಾನುವಾರ ನಡೆದ ಭಕ್ತರ ಸಭೆಯು ಒಮ್ಮತದ ತೀರ್ಮಾನಕ್ಕೆ ಬಂದಿತು.

ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ್ದನ್ನು ರದ್ದುಪಡಿಸಿದ್ದ ಹೈಕೋರ್ಟ್, ಆಡಳಿತ ಸಮಿತಿ ರಚನೆಗೆ ಸೂಚನೆ ನೀಡಿತ್ತು. ಆಡಳಿತ ಸಮಿತಿಯ ಸ್ವರೂಪ ಹಾಗೂ ಪದಾಧಿಕಾರಿಗಳ ಹೆಸರನ್ನು ಶೀಘ್ರವೇ ಹೈಕೋರ್ಟ್‌ಗೆ ಸಲ್ಲಿಸಲು ಸಭೆ ನಿರ್ಧರಿಸಿತು.

ಪೋಕ್ಸೊ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಶಿವಮೂರ್ತಿ ಶರಣರು ಮಠದ ಉಸ್ತುವಾರಿಯನ್ನು ಕಾನೂನು ಬದ್ಧವಾಗಿ ಬಸವಪ್ರಭು ಸ್ವಾಮೀಜಿ ಅವರಿಗೆ ನೀಡಿದ್ದರು. ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ್ದರಿಂದ ಸ್ವಾಮೀಜಿ ಧಾರ್ಮಿಕ ಕೈಂಕರ್ಯಗಳಿಗೆ ಸೀಮಿತವಾಗಿದ್ದರು.

'ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದೆವು. ನ್ಯಾಯಾಲಯ ಐತಿಹಾಸಿಕ ತೀರ್ಪು ನೀಡಿದೆ. ಶಿವಮೂರ್ತಿ ಶರಣರು ನೀಡಿದ ಜವಾಬ್ದಾರಿಯನ್ನು ಉತ್ತಮವಾಗಿ ನಿಭಾಯಿಸುತ್ತೇನೆ. ಇದಕ್ಕೆ ಭಕ್ತರ ಸಹಕಾರ ಅಗತ್ಯವಿದೆ' ಎಂದು ಬಸವಪ್ರಭು ಸ್ವಾಮೀಜಿ ಕೋರಿದರು.

'ನ್ಯಾಯಾಲಯದ ಆದೇಶದಂತೆ ಸಭೆ ನಡೆಸಲಾಗಿದೆ. ತಾತ್ಕಾಲಿಕ ಆಡಳಿತ ಸಮಿತಿಯನ್ನು ಅಧಿಕೃತವಾಗಿ ಘೋಷಣೆ ಮಾಡಲಾಗುತ್ತದೆ. ಪೂಜಾ ಕೈಂಕರ್ಯ ಹಾಗೂ ಆಡಳಿತವನ್ನು ಬಸವಪ್ರಭು ಸ್ವಾಮೀಜಿ ಅವರೇ ನೋಡಿಕೊಳ್ಳುತ್ತಾರೆ' ಎಂದು ಶಾಸಕ ಕೆ.ಸಿ. ವೀರೇಂದ್ರ ತಿಳಿಸಿದರು.

ಮಾಜಿ ಶಾಸಕ ಎಚ್‌.ಎಸ್‌. ಶಿವಶಂಕರ್, ಕಾಂಗ್ರೆಸ್ ಮುಖಂಡ ಎಚ್‌.ಎ.ಷಣ್ಮುಖಪ್ಪ, ಜೆಡಿಎಸ್ ಮುಖಂಡ ಬಿ.ಕಾಂತರಾಜ್ ಇದ್ದರು.



ರೋಡ್ ರೋಲರ್ ಹರಿದು ಕಾರ್ಮಿಕ ಸ್ಥಳದಲ್ಲೇ ಸಾವು

ಲಕ್ಷ್ಮೇಶ್ವರ: ತಾಲ್ಲೂಕಿನ ಗೊಜನೂರು ಗ್ರಾಮದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ಕಾರ್ಮಿಕನ ಮೇಲೆ ರೋಡ್ ರೋಲರ್ ಹರಿದು ಭಾನುವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಅಕ್ಕಿಗುಂದ ಗ್ರಾಮದ ಸುರೇಶ ಮಲ್ಲಪ್ಪ ಹರಿಜನ (33) ಮೃತರು.

ಬೆಳಿಗ್ಗೆ ಗೊಜನೂರು ಗ್ರಾಮದಲ್ಲಿ ರಸ್ತೆ ಗುತ್ತಿಗೆದಾರರು ಹಾಕಿದ್ದ ಟೆಂಟ್‌ಗೆ ಸುರೇಶ ಬಂದಿದ್ದರು. ಕೆಲಸ ಆರಂಭಕ್ಕೆ ಇನ್ನೂ ಸಮಯವಿದೆ ಎಂದು, ಟೆಂಟ್ ಬಳಿಯ ಗಿಡದ ನೆರಳಲ್ಲಿ ಮಲಗಿದ್ದರು.

ಅವರು ಮಲಗಿರುವುದನ್ನು ಗಮನಿಸದ ಚಾಲಕ, ರೋಲರ್ ಅನ್ನು ಹಿಮ್ಮುಖವಾಗಿ ಚಲಾಯಿಸಿದ್ದು, ಸುರೇಶ ಅವರ ತಲೆಯ ಮೇಲೆಯೇ ರೋಲರ್ ಹರಿದು ಮೃತಪಟ್ಟಿದ್ದಾರೆ. 'ಬಿಹಾರ ಮೂಲದ ರೋಲರ್ ಚಾಲಕ ಕಿವಿಗೆ ಹೆಡ್‌ಫೋನ್ ಹಾಕಿಕೊಂಡಿದ್ದ. ಹೀಗಾಗಿ ಅಲ್ಲಿಯೇ ಇದ್ದ ಕೆಲವರು ಕೂಗಿ ಹೇಳಿದರೂ ಆತನಿಗೆ ಕೇಳಿಸದೇ ದುರ್ಘಟನೆ ನಡೆದಿದೆ' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಲಕ್ಷ್ಮೇಶ್ವರದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳೂರು: ₹1.69 ಕೋಟಿ ಮೌಲ್ಯದ ವಜ್ರ ವಶ

ಮಂಗಳೂರು: ಬಜಪೆ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಕಳ್ಳಸಾಗಣೆಯಾಗುತ್ತಿದ್ದ ₹1.69 ಕೋಟಿ ಮೌಲ್ಯದ ಒಟ್ಟು 306.21 ಕ್ಯಾರೆಟ್ ವಜ್ರಗಳನ್ನು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದು, ಇಲಾಖೆಯು ಈ ಕುರಿತು ಟ್ವೀಟ್ ಮಾಡಿದೆ.

ದುಬೈಗೆ ಇದೇ 25ರಂದು ತೆರಳಬೇಕಿದ್ದ ಕಾಸರಗೋಡಿನ ಪ್ರಯಾಣಿಕ ವಜ್ರಗಳನ್ನು ಅಕ್ರಮವಾಗಿ ಸಾಗಿಸಲು ಯತ್ನಿಸಿದ್ದು, ಆತನನ್ನು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಸಿಬ್ಬಂದಿ ವಶಕ್ಕೆ ಪಡೆದು ಕಸ್ಟಮ್ಸ್ ಅಧಿಕಾರಿಗಳ ಸುಪರ್ದಿಗೆ ಒಪ್ಪಿಸಿದ್ದರು. ಅಧಿಕಾರಿಗಳು ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

'ದುಬೈಗೆ ತೆರಳಲಿದ್ದ ಪ್ರಯಾಣಿಕನನ್ನು ಸಿಐಎಸ್‌ಎಫ್ ಸಿಬ್ಬಂದಿ ತಪಾಸಣೆ ನಡೆಸಿದಾಗ ಆತನ ಒಳಉಡುಪಿನಲ್ಲಿ ಬಚ್ಚಿಟ್ಟಿದ್ದ ಎರಡು ಪೊಟ್ಟಣಗಳಲ್ಲಿ ಹರಳುಗಳಿದ್ದುದು ಕಂಡುಬಂತು. ಆ ಎರಡು ಪೊಟ್ಟಣಗಳನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ ಅದರೊಳಗೆ 13 ಸಣ್ಣ ಪೊಟ್ಟಣಗಳಲ್ಲಿ ವಜ್ರದ ಹರಳುಗಳು ಪತ್ತೆಯಾಗಿದ್ದವು. ಆರೋಪಿಯನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದೇವೆ. ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪೊಲೀಸರ ವಿರುದ್ಧ ಕೊಲೆ ಆರೋಪ: ಪತ್ನಿ ದೂರು

ಆರ್‌ಟಿಐ ಕಾರ್ಯಕರ್ತ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಿವೇಶನಗಳನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲು ನಕಲಿ ದಾಖಲೆ ಸೃಷ್ಟಿಸಿದ ಆರೋಪ ಎದುರಿಸುತ್ತಿದ್ದ ಆರ್‌ಟಿಐ ಕಾರ್ಯಕರ್ತ ಹರೀಶ್ ಹಳ್ಳಿ (40) ಪೊಲೀಸರ ವಶದಲ್ಲಿದ್ದಾಗ ಭಾನುವಾರ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ಚನ್ನಗಿರಿ ತಾಲ್ಲೂಕಿನ ಕಬ್ಬಳ ಗ್ರಾಮದ ಹರೀಶ್ ಅವರು ನಕಲಿ ದಾಖಲೆ ಸೃಷ್ಟಿಸಿ ದಾವಣಗೆರೆಯಲ್ಲಿ ಮೂರು ನಿವೇಶನಗಳನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ಜಯಶ್ರೀ ಎಂಬುವರು ಗಾಂಧಿನಗರ ಠಾಣೆಗೆ ಈಚೆಗೆ ದೂರು ನೀಡಿದ್ದರು.

'ದೂರಿನ ಬಗ್ಗೆ ವಿಚಾರಣೆ ನಡೆಸಲು ಪತ್ನಿಯ ತವರೂರಾದ ಕಾಕನೂರಿನಲ್ಲಿದ್ದ ಹರೀಶ್‌ನನ್ನು ಪೊಲೀಸರು ಠಾಣೆಗೆ ಕಾರಿನಲ್ಲಿ ಕರೆ ತರುತ್ತಿದ್ದರು. ದಾವಣಗೆರೆ ಹೊರವಲಯದ ತೋಳಹುಣಸೆ ಸಮೀಪದ ಮೇಲ್ಸೇತುವೆ ಮೇಲೆ ಬರುತ್ತಿದ್ದಾಗ ಹರೀಶ್, ಹಿಂಬದಿ ಸೀಟಿನಲ್ಲಿ ಪಕ್ಕದಲ್ಲಿ ಕುಳಿತಿದ್ದ ಕಾನ್‌ಸ್ಟೆಬಲ್‌ನನ್ನು ಪಕ್ಕಕ್ಕೆ ತಳ್ಳಿ, ಕಾರಿನ ಬಾಗಿಲನ್ನು ತೆಗೆದಿದ್ದಾನೆ. ಈ ವೇಳೆ ಕಾರಿನ ವೇಗ ತಗ್ಗಿಸಿದಾಗ ಕೆಳಕ್ಕೆ ಇಳಿದ ಆತ ತಪ್ಪಿಸಿಕೊಂಡು ಹೋಗಲು ಮೇಲ್ಸೇತುವೆಯಿಂದ ಸರ್ವೀಸ್ ರಸ್ತೆಗೆ ಜಿಗಿದಿದ್ದಾನೆ. ತೀವ್ರವಾಗಿ ಗಾಯಗೊಂಡಿದ್ದ ಆತನನ್ನು ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ. ಅರುಣ್ ಮಾಹಿತಿ ನೀಡಿದ್ದಾರೆ.

ಹರೀಶ್ ಹಳ್ಳಿ

ತನಿಖೆಗೆ ಆಗ್ರಹ: ಹರೀಶ್ ಹಳ್ಳಿ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಆಸ್ಪತ್ರೆಯ ಮುಂದೆ ಜಮಾಯಿಸಿದ ಸಂಬಂಧಿಕರು, ಸಾವಿಗೆ ಕಾರಣರಾದ ಪೊಲೀಸರನ್ನು ಸ್ಥಳಕ್ಕೆ ಕರೆಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಳಿ ಪಟ್ಟು ಹಿಡಿದರು. ಸಮಗ್ರ ತನಿಖೆ ನಡೆಸುವುದಾಗಿ ಅವರು ಭರವಸೆ ನೀಡಿದ ಬಳಿಕ ವಾಪಸ್ಸಾದರು.

> **ಸಂಬಂಧಿಕರ ಎದುರಿನಲ್ಲೇ ಮರಣೋತ್ತರ ಪರೀಕ್ಷೆಯ ವಿಡಿಯೊ ಚಿತ್ರೀಕರಣ ಮಾಡಲಾಗಿದೆ. ಸಿಐಡಿ ತನಿಖೆಗೆ ಶಿಫಾರಸು ಮಾಡಲಾಗಿದೆ. ಸೋಮವಾರ ಈ ಬಗ್ಗೆ ಆದೇಶ ಬರುವ ನಿರೀಕ್ಷೆ ಇದೆ**
> **ಡಾ.ಕೆ. ಅರುಣ್,** ಎಸ್‌.ಪಿ, ದಾವಣಗೆರೆ

ಕೊಲೆ ಆರೋಪ–ದೂರು

'ಗಾಂಧಿನಗರ ಠಾಣೆಯ ಎಸ್‌.ಐ. ಕೃಷ್ಣಪ್ಪ, ಕಾನ್‌ಸ್ಟೆಬಲ್ ದೇವರಾಜ್, ಕಾರು ಚಾಲಕ ಇರ್ಷಾದ್ ಅವರು ನನ್ನ ಪತಿಯನ್ನು ಶನಿವಾರ ಮಧ್ಯರಾತ್ರಿ ಎಳೆದುಕೊಂಡು ಹೋಗಿ ದೌರ್ಜನ್ಯ ಎಸಗಿದ್ದರು. ಭಾನುವಾರ ಬೆಳಗಿನಜಾವ 4 ಗಂಟೆಗೆ ಪೊಲೀಸರು ಕರೆ ಮಾಡಿ ಪತಿ ಮೃತಪಟ್ಟಿರುವ ವಿಷಯ ತಿಳಿಸಿದ್ದಾರೆ. ಪತಿ ಆತ್ಮಹತ್ಯೆ ಮಾಡಿಕೊಂಡಿಲ್ಲ. ಪೊಲೀಸರೇ ಕೊಲೆ ಮಾಡಿದ್ದು, ಇದರ ಹಿಂದೆ ಕಣಿವೆಬಿಳಚಿಯ ಕೆ. ಬಾಬುರಾವ್ ಅವರ ಕೈವಾಡವಿದೆ' ಎಂದು ಹರೀಶ್ ಅವರ ಪತ್ನಿ ಕೆ.ಆರ್. ಲತಾ, ದಾವಣಗೆರೆ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಖಾತೆ ಗೊಂದಲ: ಹಂಚಿಕೆಗೆ ತಡೆ

ಒಂದನೇ ಪುಟದಿಂದ...

ಸಾರಿಗೆ ಜೊತೆಗೆ ಹೆಚ್ಚುವರಿಯಾಗಿ ಇನ್ನೊಂದು ಖಾತೆ ನೀಡುವ ಬಗ್ಗೆ ಶಿವಕುಮಾರ್ ಭರವಸೆ ನೀಡಿದ್ದಾರೆ. ಆದರೆ, ಈಗಾಗಲೇ ಬೇರೆಯವರಿಗೆ ಹಂಚಿಕೆ ಮಾಡಿರುವ ಖಾತೆಯನ್ನು ಕಿತ್ತುಕೊಂಡು ಪಡೆಯುವ ಬದಲು, ಸದ್ಯಕ್ಕೆ ಸಾರಿಗೆ ಖಾತೆಗೆ ತೃಪ್ತರಾಗಲು ರಾಮಲಿಂಗಾರೆಡ್ಡಿ ನಿರ್ಧರಿಸಿದ್ದಾರೆ ಎಂದು ಗೊತ್ತಾಗಿದೆ.

ನಗರದ ಲಕ್ಕಸಂದ್ರ ಬಡಾವಣೆಯಲ್ಲಿರುವ ರಾಮಲಿಂಗಾರೆಡ್ಡಿ ನಿವಾಸಕ್ಕೆ ಬೆಳಿಗ್ಗೆ 11 ಗಂಟೆಗೆ ತೆರಳಿ ಡಿ.ಕೆ. ಸುರೇಶ್ ಮನವೊಲಿಕೆಗೆ ಯತ್ನಿಸಿದರು. ಆದರೆ, ಅವರು ಸಾರಿಗೆ ಖಾತೆ ಒಪ್ಪಿಕೊಳ್ಳಲು ತಯಾರಾಗಲಿಲ್ಲ. ಹೀಗಾಗಿ, ರೆಡ್ಡಿ ನಿವಾಸಕ್ಕೆ ತೆರಳಿದ ಡಿ.ಕೆ. ಶಿವಕುಮಾರ್, ಸಾರಿಗೆ ಖಾತೆ ಒಪ್ಪಿಕೊಳ್ಳುವಂತೆ ಮನವೊಲಿಸಲು ಯತ್ನಿಸಿದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ಪಕ್ಷದ ತೀರ್ಮಾನಕ್ಕೆ ರಾಮಲಿಂಗಾರೆಡ್ಡಿ, ನಾವು ಬದ್ಧರಾಗಿರುತ್ತೇವೆ. ಯಾವುದೇ ಗೊಂದಲ ಇಲ್ಲ' ಎಂದರು.

'ಪಕ್ಷದ ಹಿತದೃಷ್ಟಿಯಿಂದ ಕೆಲ ವಿಚಾರಗಳನ್ನು ಚರ್ಚಿಸಿದ್ದೇವೆ. ರಾಮಲಿಂಗಾರೆಡ್ಡಿ ಸತತವಾಗಿ 8 ಬಾರಿ ಶಾಸಕರಾಗಿದ್ದಾರೆ. ಅವರು ಪಕ್ಷಕ್ಕೆ ಬದ್ಧರಾಗಿದ್ದಾರೆ. ನಾವು ಪಕ್ಷ ಕಟ್ಟಿದ್ದೇವೆ. ಬೆಳೆಸಿದ್ದೇವೆ. ನೋವು ತಿಂದಿದ್ದೇವೆ. ನನಗೂ ಕಳೆದ ಬಾರಿ ಏನೂ ಸಿಕ್ಕಿರಲಿಲ್ಲ, ಅವರಿಗೂ ಸಿಕ್ಕಿರಲಿಲ್ಲ' ಎಂದರು. ಶಿವಕುಮಾರ್ ಅವರು ಬಳಿಕ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಚರ್ಚಿಸಿದರು.

ಸಿದ್ಧಪಡಿಸಿದ ಪಟ್ಟಿಯ ಪ್ರಕಾರ, ಹಿರಿಯರಾದ ಎಚ್‌.ಕೆ.ಪಾಟೀಲ ಅವರಿಗೆ ಕಾನೂನು ಮತ್ತು ಸಂಸದೀಯ, ಕೆ.ಜೆ.ಜಾರ್ಜ್ ಅವರಿಗೆ ಇಂಧನ, ಎಂ.ಬಿ. ಪಾಟೀಲ ಅವರಿಗೆ ಬೃಹತ್ ಕೈಗಾರಿಕೆ, ಪ್ರಿಯಾಂಕ್ ಖರ್ಗೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐಟಿಬಿಟಿ ಖಾತೆ ಹಂಚಿಕೆ ಮಾಡಲಾಗಿದೆ.

ಮಗಳ ಜನ್ಮದಿನಕ್ಕೆ ಆಹ್ವಾನಿಸಿ ಕುವೆಂಪು ವಿ.ವಿ ಕುಲಪತಿ ಸುತ್ತೋಲೆ!

ಶಿವಮೊಗ್ಗ: ಮಗಳ ಜನ್ಮ ದಿನದ ಔತಣ ಕೂಟದಲ್ಲಿ ಪಾಲ್ಗೊಳ್ಳುವಂತೆ ಆಹ್ವಾನಿಸಲು ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಪಿ. ವೀರಭದ್ರಪ್ಪ ಹೊರಡಿಸಿರುವ ಸುತ್ತೋಲೆ ಚರ್ಚೆಗೆ ಗ್ರಾಸವಾಗಿದೆ.

ಮೇ 28ರಂದು ಹಮ್ಮಿಕೊಂಡಿದ್ದ ಪುತ್ರಿ ಬಿ.ವಿ. ಆಕಾಂಕ್ಷ ಜನ್ಮ ದಿನದ ಔತಣ ಕೂಟದಲ್ಲಿ ಪಾಲ್ಗೊಳ್ಳುವಂತೆ ವಿಶ್ವವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ಕುಲಪತಿ ಆಹ್ವಾನಿಸಿದ್ದಾರೆ. ಅದಕ್ಕಾಗಿ ವಿಶ್ವವಿದ್ಯಾಲಯದ ಅಧಿಕೃತ ಲೆಟರ್ ಹೆಡ್‌ನಲ್ಲಿ ಸುತ್ತೋಲೆ ಹೊರಡಿಸಿದ್ದಾರೆ. ಈ ಪ್ರತಿಯು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಕುಲಪತಿ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ವೈಯಕ್ತಿಕ ಕಾರ್ಯಕ್ರಮದ ಆಹ್ವಾನಕ್ಕೆ ವಿಶ್ವವಿದ್ಯಾಲಯದ ಲೆಟರ್ ಹೆಡ್ ದುರ್ಬಳಕೆ ಮಾಡಿಕೊಂಡಿರುವುದು ಎಷ್ಟು ಸರಿ' ಎಂದು ನೆಟ್ಟಿಗರು ಪ್ರಶ್ನಿಸಿದ್ದಾರೆ.

'ಅದು ಸುತ್ತೋಲೆಯಲ್ಲ. ಕರೆಯೋಲೆ ಮಾತ್ರ. ವಿಶ್ವವಿದ್ಯಾಲಯದ ಎಲ್ಲರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಗಳನ್ನು ಹರಸಲಿ ಎಂಬ ಉದ್ದೇಶದಿಂದ ಆತ್ಮೀಯವಾಗಿ ಕರೆದಿದ್ದೆ. ಹೀಗಾಗಿ ಅದನ್ನು ವಿವಾದವಾಗಿಸುವ ಅಗತ್ಯವಿಲ್ಲ' ಎಂದು ಕುಲಪತಿ ವೀರಭದ್ರಪ್ಪ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕುಲಪತಿಯ ಸುತ್ತೋಲೆ ಹಿನ್ನೆಲೆಯಲ್ಲಿ ಭಾನುವಾರ ಮಧ್ಯಾಹ್ನ ನಡೆದ ಜನ್ಮ ದಿನದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಹಲವು ನೌಕರರು ಪಾಲ್ಗೊಂಡಿದ್ದರು.

ಯುವ ಸಂಗಮ: ಜನ ಸಂಪರ್ಕ, ವೈವಿಧ್ಯತೆ ಪ್ರೋತ್ಸಾಹಕ್ಕೆ ಸಹಕಾರಿ

ನವದೆಹಲಿ (ಪಿಟಿಐ): 'ದೇಶದ ವೈವಿಧ್ಯ ಮತ್ತು ಜನರ ನಡುವಣ ಸಂಪರ್ಕವನ್ನು ಪ್ರೋತ್ಸಾಹಿಸಲು ಕೇಂದ್ರ ಶಿಕ್ಷಣ ಸಚಿವಾಲಯ ಅನುಷ್ಠಾನಗೊಳಿಸಿರುವ ಯುವ ಸಂಗಮ ಯೋಜನೆ ಮಹತ್ವದ ಹೆಜ್ಜೆಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಮನದ ಮಾತು ಮಾಸಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುವ ಸಂಗಮದ ಮೊದಲ ಹಂತದಡಿ ಈಗಾಗಲೇ 1,200ಕ್ಕೂ ಹೆಚ್ಚು ವಿದ್ಯಾರ್ಥಿಗಳು 22 ರಾಜ್ಯಗಳಿಗೆ ಭೇಟಿ ನೀಡಿದ್ದಾರೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಿದ್ಯಾರ್ಥಿಗಳು ಭೇಟಿ ನೀಡುವುದರಿಂದ ಅಲ್ಲಿನ ಸಂಸ್ಕೃತಿ ಮತ್ತು ಪರಂಪರೆ ಅರಿಯಲು ಸಹಕಾರಿಯಾಗುತ್ತದೆ ಎಂದಿದ್ದಾರೆ.

'ನಿಮ್ಮ ಅನುಭವಗಳನ್ನು ಬ್ಲಾಗ್‌ಗಳಲ್ಲಿ ಬರೆಯುವ ಮೂಲಕ ಇತರರಿಗೂ ಈ ಮಾಹಿತಿ ಹಂಚಿಕೊಳ್ಳಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

ಕಳೆದ ತಿಂಗಳು ಪೂರ್ಣಗೊಂಡ 100ನೇ ಸಂಚಿಕೆಯನ್ನು ಭಾರತ ಸೇರಿದಂತೆ ವಿಶ್ವದ ಹಲವು ಜನರು ಆಲಿಸಿದ್ದಾರೆ. ಜೊತೆಗೆ, ರಚನಾತ್ಮಕ ವಿಶ್ಲೇಷಣೆ ಕೂಡ ಮಾಡಿದ್ದಾರೆ. ಭಾನುವಾರದ 101ನೇ ಸಂಚಿಕೆಯ ಮೂಲಕ ಎರಡನೇ ಶತಕದ ಆರಂಭವಾಗಿದೆ' ಎಂದು ಮೋದಿ ತಿಳಿಸಿದ್ದಾರೆ.

ಸಾವರ್ಕರ್ ಬಲಿದಾನ ಇಂದಿಗೂ ಪ್ರೇರಣೆ: ವೀರ ಸಾವರ್ಕರ್ ಅವರ ಬದುಕು ಮತ್ತು ಸಾಧನೆಗಳನ್ನು ಮೋದಿ ಮೆಲುಕು ಹಾಕಿದರು.

'ಸ್ವಾತಂತ್ರ್ಯ ಸೇನಾನಿ ವೀರ ಸಾವರ್ಕರ್ ಅವರ ಬಲಿದಾನ, ಧೈರ್ಯ ಹಾಗೂ ದೃಢ ನಿರ್ಧಾರ ಇಂದಿಗೂ ನಮಗೆ ಪ್ರೇರಣೆಯಾಗಿವೆ' ಎಂದು ಬಣ್ಣಿಸಿದರು.

'ಮೇ 28 ಸಾವರ್ಕರ್ ಅವರ ಜನ್ಮ ದಿನ. ಅವರಲ್ಲಿದ್ದ ಧೈರ್ಯ ಹಾಗೂ ಆತ್ಮಗೌರವವು ದಾಸ್ಯದ ಮನಸ್ಥಿತಿಯನ್ನು ಸಹಿಸಲಿಲ್ಲ' ಎಂದರು.

ಸಾವರ್ಕರ್ ಹೋರಾಟ ಸ್ವಾತಂತ್ರ್ಯಕ್ಕಷ್ಟೇ ಸೀಮಿತಗೊಂಡಿರಲಿಲ್ಲ. ಸಾಮಾಜಿಕ ಸಮಾನತೆ ಮತ್ತು ನ್ಯಾಯಕ್ಕಾಗಿ ಅವರು ನಡೆಸಿದ್ದ ಹೋರಾಟವನ್ನು ಇಂದಿಗೂ ಸ್ಮರಿಸುತ್ತೇವೆ ಎಂದರು.

ಪ್ರಧಾನಿ ಮೋದಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಸೇರಿದಂತೆ ಹಲವು ಸಚಿವರು ಮತ್ತು ಸಂಸದರು ಸಂಸತ್‌ನ ಹಳೆಯ ಕಟ್ಟಡದ ಸೆಂಟ್ರಲ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾವರ್ಕರ್ ಅವರಿಗೆ ನಮನ ಸಲ್ಲಿಸಿದರು.

ಬಿಜೆಪಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಪ್ರಧಾನಿ ಸಭೆ

ನವದೆಹಲಿ (ಪಿಟಿಐ): ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಲ್ಲಿಯ ಪಕ್ಷದ ಮುಖ್ಯ ಕಚೇರಿಯಲ್ಲಿ ಭಾನುವಾರ ಸಭೆ ನಡೆಸಿದರು.

ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಅವರೂ ಸಭೆಯಲ್ಲಿ ಭಾಗಿಯಾಗಿದ್ದರು.

ಬಿಜೆಪಿಯ ಉತ್ತಮ ಆಡಳಿತದ ಕಾರ್ಯಸೂಚಿಯ ಭಾಗವಾಗಿ ಈ ಸಭೆ ನಡೆಯಿತು. ಆಡಳಿತದಲ್ಲಿಯ ತಮ್ಮ ಸಾಧನೆಗಳು ಮತ್ತು ಜಾರಿ ಮಾಡಿರುವ ಹಲವಾರು ಕಲ್ಯಾಣ ಕಾರ್ಯಕ್ರಮಗಳ ಕುರಿತು ಮುಖ್ಯಮಂತ್ರಿಗಳು ಸಭೆಯಲ್ಲಿ ಮಾಹಿತಿ ಹಂಚಿಕೊಂಡರು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್, ಅಸ್ಸಾಂನ ಹಿಮಂತ ಬಿಸ್ವಾ ಶರ್ಮ, ಮಧ್ಯಪ್ರದೇಶದ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಉತ್ತರಾಖಂಡದ ಪುಷ್ಕರ್ ಸಿಂಗ್ ಧಾಮಿ ಸೇರಿದಂತೆ ಹಲವು ಮುಖ್ಯಮಂತ್ರಿಗಳು ಸಭೆಯಲ್ಲಿ ಹಾಜರಿದ್ದರು. ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿಗಳಾದ ಕೇಶವ್ ಪ್ರಸಾದ್ ಮೌರ್ಯ ಮತ್ತು ಬ್ರಿಜೇಶ್ ಪಾಠಕ್ ಅವರು ಕೂಡಾ ಸಭೆಯಲ್ಲಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳ ಅನಿಸಿಕೆ

ಕಷ್ಟಕಾಲದಲ್ಲಿ ನೆರವು

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿವೇತನವನ್ನು ಪುಸ್ತಕ, ಸಮವಸ್ತ್ರ ಹಾಗೂ ಬ್ಯಾಗ್ ಖರೀದಿಸಲು ಪಾವತಿಸಿದೆ. ದ್ವಿತೀಯ ಪಿಯುಗೆ ಬಂದಾಗಲೂ ಸಹಾಯವಾಯಿತು. ನಮ್ಮದು ರೈತ ಕುಟುಂಬ. ಕಷ್ಟ ಕಾಲದಲ್ಲಿ ಹಣಕಾಸಿನ ನೆರವು ದೊರೆತ ಕಾರಣ ಯಾವುದೇ ಒತ್ತಡವಿಲ್ಲದೇ ವ್ಯಾಸಂಗ ಮುಂದುವರಿಸಲು ಸಾಧ್ಯವಾಗಿದೆ

ಗುಣಶ್ರೀ ಎಸ್., ಕೋಲಾರ

ಕಾಲೇಜಿನ ಶುಲ್ಕ ಭರಿಸಿದೆ

'ಪ್ರಜಾವಾಣಿ' ಪತ್ರಿಕೆಯ ವಿದ್ಯಾರ್ಥಿ ವೇತನ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸಲು ಸಹಕಾರಿಯಾಗುತ್ತಿದೆ. ಸಕಾಲಕ್ಕೆ ದೊರೆತ ವಿದ್ಯಾರ್ಥಿ ವೇತನದಿಂದ ಕಾಲೇಜಿನ ಶುಲ್ಕ ಭರಿಸಲು ನೆರವಾಯಿತು. ಇಂತಹ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿ. 'ಪ್ರಜಾವಾಣಿ' ಪತ್ರಿಕೆಗೆ ಧನ್ಯವಾದಗಳು.

ರೋಶಲ್, ಚಿಕ್ಕಮಗಳೂರು

₹ 2 ಸಾವಿರ ನೋಟು ಸ್ವೀಕಾರ

ಬೆಂಗಳೂರು: ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್‌ಗಳಲ್ಲಿ ₹ 2 ಸಾವಿರ ಮುಖಬೆಲೆಯ ನೋಟುಗಳನ್ನು ಸ್ವೀಕರಿಸಲಾಗುತ್ತಿದೆ. ಪ್ರಯಾಣಿಕರು ಆತಂಕಪಡುವ ಅಗತ್ಯ ಇಲ್ಲ ಎಂದು ಸಾರಿಗೆ ನಿಗಮಗಳ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಯಾಣಿಕರು ₹ 2 ಸಾವಿರ ಮುಖಬೆಲೆಯ ನೋಟು ನೀಡಿದರೆ ನಿರ್ವಾಹಕರು ತೆಗೆದುಕೊಳ್ಳಬಾರದೆಂದು ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಕಚೇರಿಯಿಂದ ಯಾವುದೇ ಆದೇಶ ಹೊರಡಿಸಿಲ್ಲ. ಹೊಸಕೋಟೆ ಘಟಕದಿಂದ ಮಾತ್ರ ತಪ್ಪಾದ ಆದೇಶ ಹೊರಡಿಸಲಾಗಿತ್ತು. ಅದನ್ನು ತಕ್ಷಣವೇ ವಾಪಸು ಪಡೆಯಲಾಗಿದೆ ಎಂದು ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.

ಮಣಿಪುರ: ಮತ್ತೆ ಹಿಂಸಾಚಾರ

ಇಂಫಾಲ್ (ಪಿಟಿಐ): ಮಣಿಪುರದ 12ಕ್ಕೂ ಹೆಚ್ಚು ಸ್ಥಳಗಳಲ್ಲಿ ಸೇನೆ ಮತ್ತು ಬಂಡುಕೋರರ ಗುಂಪುಗಳ ನಡುವೆ ಭಾನುವಾರ ನಡೆದ ಘರ್ಷಣೆ, ಹಿಂಸಾಚಾರದಲ್ಲಿ ಇಬ್ಬರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಲ್ಲಿ ಶಾಂತಿ ಸ್ಥಾಪಿಸುವ ಸಲುವಾಗಿ ಬಂಡುಕೋರರನ್ನು ನಿಶಸ್ತ್ರೀಕರಣಗೊಳಿಸುವ ನಿಟ್ಟಿನಲ್ಲಿ ಸೇನೆಯು ಕಾರ್ಯಾಚರಣೆ ಕೈಗೊಂಡ ಬೆನ್ನಲ್ಲೇ ಈ ಹಿಂಸಾಚಾರ ಭುಗಿಲೆದ್ದಿದೆ ಎನ್ನಲಾಗಿದೆ.

ಸದ್ಯ ನಡೆದಿರುವ ಘರ್ಷಣೆಯು ರಾಜ್ಯದಲ್ಲಿಯ ಸಮುದಾಯಗಳ ನಡುವೆ ನಡೆದಿಲ್ಲ. ಬದಲಾಗಿ, ಸೇನೆ ಮತ್ತು ಕುಕಿ ಬಂಡುಕೋರರ ನಡುವೆ ನಡೆದಿದೆ ಎಂದು ರಾಜ್ಯದ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ತಿಳಿಸಿದ್ದಾರೆ.

ಇಂಫಾಲ್ ಕಣಿವೆ ಸುತ್ತಲಿನ ಹಲವು ಜಿಲ್ಲೆಗಳಲ್ಲಿ ನಸುಕಿನಲ್ಲೇ ಘರ್ಷಣೆ ಆರಂಭವಾಯಿತು. ಬಿಜೆಪಿ ಶಾಸಕ ಖ್ವೈರಕ್ಪಮ್ ರಘುಮಣಿ ಸಿಂಗ್ ಅವರ ಉರಿಪೋಕ್‌ನಲ್ಲಿಯ ಮನೆಯನ್ನು ಧ್ವಂಸಗೊಳಿಸಲಾಗಿದೆ ಮತ್ತು ಅವರ ಎರಡು ವಾಹನಗಳಿಗೆ ಬೆಂಕಿ ಹಚ್ಚಲಾಗಿದೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮಣಿಪುರದಲ್ಲಿ ಸೇನೆ ಮತ್ತು ಬಂಡುಕೋರರ ಗುಂಪುಗಳ ನಡುವೆ ಭಾನುವಾರ ಘರ್ಷಣೆ ನಡೆದ ವೇಳೆ ದಟ್ಟ ಹೊಗೆ ಆವರಿಸಿದ್ದ ದೃಶ್ಯ –ಪಿಟಿಐ ಚಿತ್ರ

ಮುಖ್ಯಾಂಶಗಳು

- ಸೇನೆ ಮತ್ತು ಬಂಡುಕೋರರ ಗುಂಪುಗಳ ನಡುವೆ ಘರ್ಷಣೆ
- ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಮಾಹಿತಿ
- ಸಮುದಾಯದಿಂದ ಮೀಸಲಾತಿಗೆ ಆಗ್ರಹ

ಮಹಿಳಾ ಸಿಬ್ಬಂದಿಗಳ ನಿರ್ವಹಣೆಯಲ್ಲಿದ್ದ ಕೆಲ ಪ್ರದೇಶಗಳಲ್ಲಿ ಹೊಸದಾಗಿ ರಸ್ತೆತಡೆ ಸಮಸ್ಯೆ ತಲೆದೂರಿದ ಪ್ರಸಂಗಗಳೂ ನಡೆದಿವೆ ಎಂದು ಹೇಳಿದ್ದಾರೆ.

ಮೈತೇಯಿ ಸಮುದಾಯವು ಮೀಸಲಾತಿ ನೀಡುವಂತೆ ಸರ್ಕಾರವನ್ನು ಆಗ್ರಹಿಸಿತ್ತು. ಈ ಬೆನ್ನಲ್ಲೇ, ಮೈತೇಯಿ ಸಮುದಾಯ ಮತ್ತು ಇತರ ಬುಡಕಟ್ಟು ಸಮುದಾಯಗಳ ನಡುವೆ ಮೇ 3ರಿಂದ ಘರ್ಷಣೆ ಆರಂಭವಾಯಿತು. ಈ ವರೆಗೆ 75ಕ್ಕೂ ಹೆಚ್ಚು ಜನರು ಹಿಂಸಾಚಾರದಲ್ಲಿ ಮೃತಪಟ್ಟಿದ್ದಾರೆ.

ಭಾರತ ಮೂಲದ ಪರ್ವತಾರೋಹಿಗೆ ಮುಂದುವರಿದ ಶೋಧ

ಸಿಂಗಪುರ (ಪಿಟಿಐ): ಮೌಂಟ್ ಎವರೆಸ್ಟ್ ಪರ್ವತಾರೋಹಣಕ್ಕೆ ಮೇ 19ರಂದು ತೆರಳಿ ನಾಪತ್ತೆಯಾಗಿರುವ ಭಾರತ ಮೂಲದ ಪರ್ವತಾರೋಹಿಯ ಪತ್ತೆ ಇನ್ನೂ ಆಗಿಲ್ಲ. ಪರ್ವತಾರೋಹಿಯ ಪತ್ನಿ ಈ ಬಗ್ಗೆ ಇನ್‌ಸ್ಟಾಗ್ರಾಂನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಪರ್ವತಾರೋಹಿಯ ಪತ್ತೆಗೆ ರಕ್ಷಣಾ ತಂಡ ಹೆಚ್ಚಿನ ಶ್ರಮದ ನಡುವೆಯೂ ನೆಲೆ ಪತ್ತೆಯಾಗಿಲ್ಲ ಎಂದು ಪತಿ ಶ್ರೀನಿವಾಸ್ ಸೈನಿಸ್ ದತ್ತಾತ್ರೇಯ ಅವರ ವಿವಿಧ ಚಿತ್ರಗಳನ್ನು ಹಂಚಿಕೊಂಡಿರುವ ಸುಷ್ಮಾ ಸೋಮ ಅವರು ತಿಳಿಸಿದ್ದಾರೆ.

ಪಾಕ್‌ನಲ್ಲಿ ಭೂಕಂಪನ, 6 ರಷ್ಟು ತೀವ್ರತೆ ದಾಖಲು

ಇಸ್ಲಾಮಾಬಾದ್ (ಪಿಟಿಐ): ರಾಜಧಾನಿ ಇಸ್ಲಾಮಾಬಾದ್, ಪೆಶಾವರ ಸೇರಿದಂತೆ ಪಾಕಿಸ್ತಾನದ ವಿವಿಧೆಡೆ ಭಾನುವಾರ ಬೆಳಿಗ್ಗೆ ಭೂಕಂಪನ ಸಂಭವಿಸಿದೆ. ಇದರ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 6.0 ರಷ್ಟು ದಾಖಲಾಗಿದೆ.

ಅಫ್ಗಾನಿಸ್ತಾನ ಮತ್ತು ತಜಕಿಸ್ತಾನದ ಗಡಿ ಪ್ರದೇಶದಲ್ಲಿ 223 ಕಿ.ಮೀ ಆಳದಲ್ಲಿ ಭೂಕಂಪದ ಕೇಂದ್ರಬಿಂದುವಿದೆ ಎಂದು ಗುರುತಿಸಲಾಗಿದೆ.

ಉಪಗ್ರಹ ಉಡಾವಣೆ ಇಂದು

ಶ್ರೀಹರಿಕೋಟ (ಆಂಧ್ರಪ್ರದೇಶ) (ಪಿಟಿಐ): ನೌಕೆಗಳ ಸಂಚಾರ ನಿರ್ಧರಿಸಲು ನೆರವಾಗುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) 'ಎನ್‌ವಿಎಸ್‌–01' ನ್ಯಾವಿಗೇಷನ್ ಉಪಗ್ರಹ ಉಡಾವಣೆಗೆ ಕ್ಷಣಗಣನೆ ಆರಂಭವಾಗಿದೆ.

ಸೋಮವಾರ (ಮೇ 29) ಬೆಳಿಗ್ಗೆ 10.42ಕ್ಕೆ ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಉಡ್ಡಯನ ನೆಲೆಯಿಂದ 2,232 ಕೆ.ಜಿ ತೂಕದ ಈ ಉಪಗ್ರಹ (ಎನ್‌ವಿಎಸ್ -01) ಹೊತ್ತ ರಾಕೆಟ್ 'ಜಿಎಸ್‌ಎಲ್‌ವಿ–ಎಫ್‌12' ನಭಕ್ಕೆ ಚಿಮ್ಮಲಿದೆ.

ಭಾನುವಾರ ಬೆಳಿಗ್ಗೆ 7.12ಕ್ಕೆ ಉಪಗ್ರಹ ಹೊತ್ತ ರಾಕೆಟ್‌ನ ಲಿಫ್ಟ್ ಆಫ್ ಪ್ರಕ್ರಿಯೆ ಶುರು ಮಾಡುವ ಮೂಲಕ ಇಸ್ರೊ ವಿಜ್ಞಾನಿಗಳು ಉಡಾವಣೆಗೆ ಕ್ಷಣಗಣನೆ ಆರಂಭಿಸಿದರು. ರಾಕೆಟ್ ಉಡಾವಣೆಯಾದ 20 ನಿಮಿಷಗಳ ಅವಧಿಯಲ್ಲಿ, 251 ಕಿಲೋ ಮೀಟರ್ ಎತ್ತರದ ಭೂಕಕ್ಷೆಗೆ ಉಪಗ್ರಹವನ್ನು ಸೇರಿಸುವಂತೆ ಯೋಜನೆ ರೂಪಿಸಲಾಗಿದೆ ಎಂದು ಇಸ್ರೊ ತಿಳಿಸಿದೆ.

ಈ ಉಪಗ್ರಹವು, ಭಾರತ ಮತ್ತು ಮುಖ್ಯ ಭೂಭಾಗದ ಸುತ್ತಲಿನ ಸುಮಾರು 1,500 ಕಿ.ಮೀ.ವರೆಗಿನ ಪ್ರದೇಶದ ನಿಖರ ಸ್ಥಳ ಮತ್ತು ನೈಜ ಸಮಯದ ಸೇವೆಗಳನ್ನು ಒದಗಿಸಲಿದೆ ಎಂದು ಹೇಳಿದೆ.

ರಾಹುಲ್‌ಗೆ ಹೊಸ ಪಾಸ್‌ಪೋರ್ಟ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ಹೊಸ ಸಾಮಾನ್ಯ ಪಾಸ್‌ಪೋರ್ಟ್ ಪಡೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಹುಲ್ ಅವರಿಗೆ ಪಾಸ್‌ಪೋರ್ಟ್ ಪಡೆಯಲು ದೆಹಲಿಯ ನ್ಯಾಯಾಲಯವು ನಿರಾಕ್ಷೇಪಣಾ ಪತ್ರವನ್ನು (ಎನ್‌ಒಸಿ) ಮಂಜೂರು ಮಾಡಿದ ಎರಡು ದಿನಗಳ ಬಳಿಕ ಅವರಿಗೆ ಹೊಸ ಪಾಸ್‌ಪೋರ್ಟ್ ಲಭಿಸಿದೆ ಎಂದೂ ಹೇಳಿವೆ.

ರಾಹುಲ್ ಅವರು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊಗೆ ಸೋಮವಾರ ಸಂಜೆ ತೆರಳಲಿದ್ದಾರೆ.

ಮಾನನಷ್ಟ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾಗಿ, ಲೋಕಸಭೆಯ ಸದಸ್ಯತ್ವ ಕಳೆದುಕೊಂಡ ನಂತರ ರಾಹುಲ್ ಅವರು ತಮ್ಮ ರಾಜತಾಂತ್ರಿಕ ಪಾಸ್‌ಪೋರ್ಟ್ ಅನ್ನು ಹಿಂದಿರುಗಿಸಿ, ಸಾಮಾನ್ಯ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ರಾಹುಲ್ ಗಾಂಧಿ

edgeverve
An Infosys company

ಎಡ್ಜ್‌ವರ್ವ್ ಸಿಸ್ಟಮ್ಸ್ ಲಿಮಿಟೆಡ್
CIN: U72200KA2014PLC073660
ನೋಂದಾಯಿತ ಕಛೇರಿ: ಪ್ಲಾಟ್ ನಂ. 44, ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು – 560 100.
ದೂರವಾಣಿ: 91 80 3952 2222 ಫ್ಯಾಕ್ಸ್: 91 80 2852 1300
www.edgeverve.com

ಪ್ರಕಟಣೆ
[2013ರ ಕಂಪನಿ ಕಾಯಿದೆಯ ಸೆಕ್ಷನ್ 201 ಅನುಸಾರವಾಗಿ]

ಶ್ರೀಯುತರಾದ ಸನತ್ ರಾವ್ (DIN:07657698) ಅವರನ್ನು ಕಾರ್ಯನಿರ್ವಾಹಕ ನಿರ್ದೇಶಕರಾಗಿ ದಿನಾಂಕ ಏಪ್ರಿಲ್ 11, 2023 ರಿಂದ ಏಪ್ರಿಲ್ 11, 2024 ರವರೆಗೆ ಮರು ನೇಮಕಾತಿ ಮಾಡಲು 2013ರ ಕಂಪನಿ ಕಾಯಿದೆಯ ಸೆಕ್ಷನ್ 196 ಅನುಸೂಚಿ ಐದು, ಭಾಗ–1 (ಇ) ಅಂತೆ ಹಾಗೂ ಇತರ ಸಂಬಂಧಿತ ನಿಬಂಧನೆಗಳ ಅನುಸಾರವಾಗಿ ಅನುಮತಿ ಪಡೆಯಲು ಕೇಂದ್ರ ಸರ್ಕಾರಕ್ಕೆ (ಮಿನಿಸ್ಟ್ರಿ ಆಫ್ ಕಾರ್ಪೊರೇಟ್ ಅಫೇರ್ಸ್, 5ನೇ ಮಹಡಿ, 'ಎ' ಶಾಖೆ, ಶಾಸ್ತ್ರಿ ಭವನ, ನವ ದೆಹಲಿ – 110 001) ಅರ್ಜಿಯನ್ನು ಕಳುಹಿಸಲಾಗುತ್ತಿದೆ ಎಂದು ಈ ಪ್ರಕಟಣೆ ನೀಡಲಾಗಿದೆ.

ಎಡ್ಜ್‌ವರ್ವ್ ಸಿಸ್ಟಮ್ಸ್ ಲಿಮಿಟೆಡ್‌ಗೆ
ಸಹಿ/–
ಪ್ರಕಾಶ್ ಭಾರದ್ವಾಜ್
ಕಂಪನಿ ಕಾರ್ಯದರ್ಶಿ

ಮೇ 27, 2023
ಬೆಂಗಳೂರು, ಭಾರತ

ತೆರೆಮರೆಯಲ್ಲಿ ‘ಬಿಟ್ ಕಾಯಿನ್’ ಸದ್ದು

ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದ್ದ ಪ್ರಕರಣ • ದೊಡ್ಡವರಲ್ಲಿ ನಡುಕ

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದ್ದ ‘ಬಿಟ್ ಕಾಯಿನ್ (ಬಿಟಿಸಿ)’ ಪ್ರಕರಣದ ಮರು ತನಿಖೆಗೆ ಕಾಂಗ್ರೆಸ್ ನೇತೃತ್ವದ ಹೊಸ ಸರ್ಕಾರ ಆಸಕ್ತಿ ತೋರಿದ್ದು, ಪೊಲೀಸ್ ಅಧಿಕಾರಿ ನೇತೃತ್ವದ ತಂಡವೊಂದು ತೆರೆಮರೆಯಲ್ಲಿ ಮಾಹಿತಿ ಸಂಗ್ರಹಿಸುತ್ತಿದೆ.

ಬೆಂಗಳೂರಿನ ಕೆಂಪೇಗೌಡ ನಗರ ಠಾಣೆಯಲ್ಲಿ 2020ರಲ್ಲಿ ದಾಖಲಾಗಿದ್ದ ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26), ಬಿಟ್ ಕಾಯಿನ್ ಜಾಲದ ಸಂಪೂರ್ಣ ಮಾಹಿತಿ ಬಿಚ್ಚಿಟ್ಟಿದ್ದ. ಈತ, ಅಂತರರಾಷ್ಟ್ರೀಯ ಮಟ್ಟದ ಹ್ಯಾಕರ್ ಎಂಬ ಸಂಗತಿಯೂ ಪತ್ತೆಯಾಗಿತ್ತು. ಇದಾದ ನಂತರ, ಕಾಟನ್‌ಪೇಟೆ ಠಾಣೆಯಲ್ಲಿ ಬಿಟ್ ಕಾಯಿನ್ ಸಂಬಂಧ ಪ್ರತ್ಯೇಕ ಪ್ರಕರಣ ದಾಖಲಾಗಿತ್ತು. ಇದರ ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಹ ಸಲ್ಲಿಸಿದ್ದಾರೆ.

ಇದರ ನಡುವೆಯೇ, ರಾಜ್ಯ ಸರ್ಕಾರದ ಇ–ಸಂಗ್ರಹಣಾ ಪೋರ್ಟಲ್ (https://eproc.karnataka.gov.in) ಜಾಲತಾಣವನ್ನೂ ಶ್ರೀಕಿ ಹ್ಯಾಕ್ ಮಾಡಿದ್ದ ಹಾಗೂ ₹ 46 ಕೋಟಿ ದೋಚಿದ್ದ ಸಂಗತಿ ಹೊರಬಿದ್ದಿತ್ತು.

ಹ್ಯಾಕ್ ಮಾಡಿ ಗಳಿಸಿದ್ದ ಹಣ, ಬಿಟ್ ಕಾಯಿನ್ ರೂಪದಲ್ಲಿ ಹೂಡಿಕೆಯಾಗಿದ್ದ ಮಾಹಿತಿ ತನಿಖಾ ತಂಡಕ್ಕೆ ಲಭ್ಯವಾಗಿತ್ತು. ಆದರೆ, ಆ ಬಗ್ಗೆ ಹೆಚ್ಚಿನ ತನಿಖೆ ನಡೆದಿರಲಿಲ್ಲ. ಇದೀಗ, ಬಿಟ್ ಕಾಯಿನ್ ಪ್ರಕರಣದ ಮರು ತನಿಖೆಗೆ ಕಾಂಗ್ರೆಸ್ ಸರ್ಕಾರ ಚಿಂತನೆ ನಡೆಸುತ್ತಿದೆ. ಈ ಸಂಬಂಧ ಪೊಲೀಸ್ ಅಧಿಕಾರಿಗಳಿಗೆ ಮೌಖಿಕ ನಿರ್ದೇಶನ ಸಹ ನೀಡಿದ್ದು, ಅದರನ್ವಯ ಮಾಹಿತಿ ಸಂಗ್ರಹಿಸುವ ಕೆಲಸ ತೆರೆಮರೆಯಲ್ಲಿ ಆರಂಭವಾಗಿದೆ.

ಹೊರ ರಾಜ್ಯದಲ್ಲಿ ಆರೋಪಿ: ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಜಾಮೀನು ಪಡೆದುಕೊಂಡು ಹೊರ ರಾಜ್ಯದಲ್ಲಿ ನೆಲೆಸಿದ್ದಾನೆ. ಡ್ರಗ್ಸ್ ವ್ಯಸನಿ ಆಗಿರುವ ಶ್ರೀಕಿ, ಮಾನಸಿಕ ಅಸ್ವಸ್ಥನಂತೆ ವರ್ತಿಸುತ್ತಿದ್ದಾನೆ. ಹೀಗಾಗಿ, ಆತನಿಗೆ ಪೋಷಕರು ಕೆಲ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದಾರೆ.

‘ಬೆಂಗಳೂರಿನಲ್ಲಿ ಪಿಯುಸಿ ಮುಗಿಸಿದ್ದ ಶ್ರೀಕಿ, ನೆದರ್ಲೆಂಡ್‌ನಲ್ಲಿ ಬಿ.ಎಸ್ಸಿ ಪದವಿ ಪೂರ್ಣಗೊಳಿಸಿದ್ದ. ಕಾಲೇಜು ದಿನಗಳಲ್ಲಿ ಹ್ಯಾಕರ್‌ಗಳಾದ ಟಿಮ್ ಕಮೇರ್ ಹಾಗೂ ಇಡು ಡ್ರೈಸ್ಸೆನ್ ಸ್ನೇಹ ಬೆಳೆಸಿದ್ದ. ನಂತರ, ಅಂತರರಾಷ್ಟ್ರೀಯ ಹ್ಯಾಕರ್ ಆಗಿ ಬದಲಾಗಿದ್ದ. ಬಿಟ್ ಕಾಯಿನ್ ವ್ಯವಹಾರದ ಬಗ್ಗೆ ತಿಳಿದುಕೊಂಡಿದ್ದ. ಬಳಿಕ, ಹಲವು ಕಂಪನಿಗಳ ಒಡೆತನದಲ್ಲಿದ್ದ ಬಿಟ್ ಕಾಯಿನ್‌ಗಳನ್ನು ಸರ್ವರ್ ಹ್ಯಾಕ್ ಮೂಲಕ ತನ್ನದಾಗಿಸಿಕೊಂಡಿದ್ದ. ಅದೇ ಕಾಯಿನ್‌ಗಳನ್ನು ಬೇರೊಂದು ಕಂಪನಿಯಲ್ಲಿ ಸಂಗ್ರಹಿಸಿ, ಪಾಸ್‌ವರ್ಡ್ ಹಾಗೂ ಇತರೆ ಮಾಹಿತಿ ಗೌಪ್ಯವಾಗಿರಿಸಿದ್ದ’ ಎಂದು ಪೊಲೀಸ್ ಮೂಲಗಳು ‘ಪ್ರಜಾವಾಣಿ’ಗೆ ಹೇಳಿವೆ.

ರಾಜ್ಯದಲ್ಲಿ 77 ಪ್ರಕರಣಗಳು: ‘ಕ್ರಿಪ್ಟೊ’ ಕರೆನ್ಸಿಯ ಪ್ರಕಾರಗಳಲ್ಲಿ ಒಂದಾದ ಬಿಟ್ ಕಾಯಿನ್ ಹೂಡಿಕೆ ನೆಪದಲ್ಲಿ ಜನರನ್ನು ವಂಚಿಸಿರುವ ಬಗ್ಗೆ ರಾಜ್ಯದಾದ್ಯಂತ 77 ಪ್ರಕರಣಗಳು ದಾಖಲಾಗಿವೆ. ಕೆಲ ಪ್ರಕರಣಗಳನ್ನು ಸಿಐಡಿ ತನಿಖೆ ನಡೆಸುತ್ತಿದೆ. ಇದೀಗ, ಎಲ್ಲ ಪ್ರಕರಣಗಳ ಬಗ್ಗೆ ಪೊಲೀಸರ ತಂಡ ಮಾಹಿತಿ ಕಲೆಹಾಕುತ್ತಿದೆ.

ಅಕ್ರಮ ದಂಧೆಗೆ ಬಳಕೆ: ಅಕ್ರಮ ವಸ್ತುಗಳ ಮಾರಾಟ ಹಾಗೂ ಇತರೆ ದಂಧೆಕೋರರು ಹಣಕ್ಕೆ ಪರ್ಯಾಯವಾಗಿ ಬಿಟ್ ಕಾಯಿನ್ ಬಳಸುತ್ತಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಒಂದು ಬಿಟ್ ಕಾಯಿನ್‌ಗೆ ₹ 22.05 ಲಕ್ಷ (ಮೇ 28ರ ಮಾಹಿತಿ) ಮೌಲ್ಯವಿದೆ. ಕೆಲವರು, ಬಿಟ್ ಕಾಯಿನ್‌ಗಳ ರೂಪದಲ್ಲಿ ಹೂಡಿಕೆ ಮಾಡಿ ಲಾಭ ಗಳಿಸುತ್ತಿದ್ದಾರೆ.

ರೂಪಾಯಿ ಹಾಗೂ ಡಾಲರ್‌ಗಳ ಪರ್ಯಾಯ ರೂಪವಾಗಿರುವ ಬಿಟ್ ಕಾಯಿನ್ (ಬಿಟಿಸಿ), ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಅಂಕಿಗಳ ರೂಪದಲ್ಲಿ ಲಭ್ಯವಿದೆ. ಇಂಥ ಬಿಟ್ ಕಾಯಿನ್‌ಗಳನ್ನು ಮೈನಿಂಗ್ (ಗಣಿತದ ಸಮಸ್ಯೆಗಳನ್ನು ಬಗೆಹರಿಸಿ ಕಾಯಿನ್ ಸೃಷ್ಟಿಸುವ ಪ್ರಕ್ರಿಯೆ) ಮೂಲಕ ಗ್ರಾಹಕರು ಸೃಷ್ಟಿಸಬಹುದಾಗಿದೆ. ಇಂಥ ಬಿಟ್ ಕಾಯಿನ್‌ಗಳ ನಿರ್ವಹಣೆ ಹಾಗೂ ಮೈನಿಂಗ್‌ಗಾಗಿ ಹಲವು ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ.

‘ಕೆಲ ರಾಜಕಾರಣಿ, ಅಧಿಕಾರಿ ಮಕ್ಕಳಿಗೆ ಬಿಟ್‌ಕಾಯಿನ್ ಪಾಲು’

‘ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿಟ್ ಕಾಯಿನ್ ಜಾಲ ಹರಡಿದೆ. ಶ್ರೀಕಿ ಹಾಗೂ ಇತರರು, ಹ್ಯಾಕ್ ಮಾಡಿ ಸಂಪಾದಿಸಿದ್ದ ಬಿಟ್ ಕಾಯಿನ್ ಹಣವನ್ನು ಕೆಲ ಪ್ರಭಾವಿಗಳು ತಮ್ಮದಾಗಿಸಿಕೊಂಡಿರುವ ಮಾಹಿತಿ ಲಭ್ಯವಿತ್ತು. ಆದರೆ, ಹಲವರನ್ನು ವಿಚಾರಣೆ ನಡೆಸಿರಲಿಲ್ಲ. ಇದೇ ಅಂಶವನ್ನು ಮುಂದಿಟ್ಟುಕೊಂಡು ಹೊಸ ಸರ್ಕಾರ ಮರು ತನಿಖೆಗೆ ಆಸಕ್ತಿ ತೋರುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕೆಲ ರಾಜಕೀಯ ಮುಖಂಡರ ಮಕ್ಕಳು, ಸರ್ಕಾರಿ ಅಧಿಕಾರಿಗಳ ಮಕ್ಕಳು ಹಾಗೂ ಇತರರು, ಶ್ರೀಕಿ ಸ್ನೇಹಿತರಾಗಿದ್ದರು. ಶ್ರೀಕಿಗೆ ಡ್ರಗ್ಸ್ ಪೂರೈಕೆ ಮಾಡಿ, ಆತನಿಂದ ಜಾಲತಾಣ–ಸರ್ವರ್ ಹ್ಯಾಕ್ ಮಾಡಿಸಿ ಹಣ ಸಂಪಾದಿಸುತ್ತಿದ್ದರು. ಕೆಲವರು, ಪೊಲೀಸರನ್ನು ಬಳಸಿಕೊಂಡು ಶ್ರೀಕಿಯನ್ನು ಬೆದರಿಸಿ ಬಿಟ್ ಕಾಯಿನ್ ಹಣ ವರ್ಗಾವಣೆ ಮಾಡಿಕೊಂಡಿರುವ ಅನುಮಾನ ಇದೆ. ಪುರಾವೆ ಸಂಗ್ರಹಿಸಲು ಸಮಗ್ರ ತನಿಖೆ ಅಗತ್ಯವಿದೆ’ ಎಂದು ತಿಳಿಸಿವೆ.

ದೂರು ಕೊಟ್ಟಿದ್ದವರನ್ನು ಬಂಧಿಸಿದ್ದ ಸಿಸಿಬಿ

ಬಿಟ್ ಕಾಯಿನ್ ಪ್ರಕರಣದ ಬಗ್ಗೆ ಕೇಂದ್ರ ಸರ್ಕಾರಕ್ಕೆ ದೂರು ನೀಡಿದ್ದ ಆರ್‌ಟಿಐ ಕಾರ್ಯಕರ್ತ ಎ.ಆರ್. ಅಶೋಕ್ ಕುಮಾರ್ ಅಡಿಗ ಅವರನ್ನು ಸಿಸಿಬಿ ಪೊಲೀಸರು, ಕ್ಲಬ್‌ಗಳಿಂದ ಹಣ ವಸೂಲಿ ಮಾಡಿದ್ದ ಪ್ರಕರಣದಲ್ಲಿ ಬಂಧಿಸಿದ್ದರು. ಇದೀಗ, ಅಡಿಗ ಬಳಿ ಇರುವ ದಾಖಲೆಗಳನ್ನೂ ಪೊಲೀಸರು ಪಡೆದುಕೊಳ್ಳುವ ಸಾಧ್ಯತೆ ಇದೆ.

ರಸ್ತೆಬದಿ ಕಸದ ರಾಶಿ: ಜನರಿಗೆ ತೊಂದರೆ

ಪ್ರಜಾವಾಣಿ ವಾರ್ತೆ

ಕಿತ್ತಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಖ್ಯರಸ್ತೆಯಲ್ಲಿರುವ ಕಸದ ರಾಶಿ.

ಕೆ.ಆರ್.ಪುರ: ಕಿತ್ತಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಿತ್ತಗನೂರು, ಮರಗೊಂಡನಹಳ್ಳಿ, ಹಳೆಹಳ್ಳಿಯ ಮುಖ್ಯರಸ್ತೆ ಪಕ್ಕದಲ್ಲಿ ಕಸ ಎಸೆಯಲಾಗುತ್ತಿದ್ದು, ನಾಗರಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದೆ. ಲೋಡ್ ಗಟ್ಟಲೆ ಕಸದ ರಾಶಿಯು ರಸ್ತೆಯ ಪಕ್ಕದಲ್ಲೇ ಬಿದ್ದಿದೆ.

ಮರಗೊಂಡನಹಳ್ಳಿ ಆಂಜನೇಯ ಸ್ವಾಮಿ ದೇವಸ್ಥಾನ ರಸ್ತೆ, ಡೈಮಂಡ್ ಕಾಲೇಜು ರಸ್ತೆ, ಕಿತ್ತಗನೂರು ಗ್ರಾಮ ಪಂಚಾಯಿತಿ ರಸ್ತೆ, ಹಳೆಹಳ್ಳಿ ರಸ್ತೆ, ಪದ್ಮಾವತಿನಗರ ಮುಂತಾದ ಕಡೆಗಳಲ್ಲಿ ಸಾರ್ವಜನಿಕರು ಬೇಕಾಬಿಟ್ಟಿಯಾಗಿ ಎಸೆದಿರುವ ಕಸದ ರಾಶಿಯೇ ಬಿದ್ದಿದೆ.

ರಸ್ತೆಗಳಲ್ಲಿ ಕಸದ ರಾಶಿ ಉಲ್ಬಣಗೊಂಡು ರಸ್ತೆಯ ಮೇಲೆ ಹರಡಿ ವಾಹನ ಸವಾರರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮುಖ್ಯರಸ್ತೆಯ ಮಾರ್ಗದಲ್ಲಿ ನಿತ್ಯ ಸಾವಿರಾರು ವಾಹನಗಳ ಸಂಚಾರ ಇದೆ. ರಸ್ತೆಯ ಎರಡೂ ಬದಿಯಲ್ಲಿ ಅಂಗಡಿಗಳಿವೆ. ಕಟ್ಟಡಗಳಿಂದ ಸಂಗ್ರಹಗೊಳ್ಳುವ ತ್ಯಾಜ್ಯ, ಮಾಲ್ ಹಾಗೂ ಅಪಾರ್ಟ್‌ಮೆಂಟ್ ನಿವಾಸಿಗಳು ಎಸೆಯುವ ಪ್ಲಾಸ್ಟಿಕ್, ಮಾಂಸದ ತ್ಯಾಜ್ಯವನ್ನು ತಂದು ರಸ್ತೆ ಪಕ್ಕಕ್ಕೇ ಎಸೆಯಲಾಗುತ್ತಿದೆ. ಸಂಗ್ರಹಗೊಂಡ ಕಸದ ತ್ಯಾಜ್ಯವನ್ನು ಗ್ರಾಮ ಪಂಚಾಯಿತಿ ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡುತ್ತಿಲ್ಲ ಎಂದು ಹಳೆಹಳ್ಳಿ ನಿವಾಸಿ ಮಂಜುನಾಥ್ ದೂರಿದರು.

ಮುಖ್ಯರಸ್ತೆಗಳಲ್ಲಿ ಕಸ ಸುರಿಯುವ ಬಗ್ಗೆ ಗ್ರಾಮ ಪಂಚಾಯತಿ ಜನರಿಗೆ ತಿಳಿವಳಿಕೆ ಮೂಡಿಸುತ್ತಿಲ್ಲ. ಕಸದ ರಾಶಿಯಿಂದ ಪ್ರತಿ ಸಾರಿ ಮಳೆ ಬಂದಾಗಲೆಲ್ಲ ವಾಸನೆ ಬೀರುತ್ತದೆ. ಸೊಳ್ಳೆಗಳು ಹೆಚ್ಚಿವೆ. ರೋಗರುಜಿನಗಳಿಗೆ ತುತ್ತಾಗುವ ಭಯ ಸಾರ್ವಜನಿಕರಿಗೆ ಕಾಡುತ್ತಿದೆ. ಕಸ ಹಾಕುವವರಿಗೆ ದಂಡ ವಿಧಿಸಬೇಕು ಎಂದು ಮರಗೊಂಡನಹಳ್ಳಿ ಗ್ರಾಮದ ನಿವಾಸಿ ಸುರೇಶ್ ಹೇಳಿದರು.

ಕೃತಜ್ಞತಾ ಸಮಾರಂಭ: ಹತ್ತು ಸಾವಿರ ಮಂದಿಗೆ ಮಾಂಸದೂಟ

ಬೊಮ್ಮನಹಳ್ಳಿ ಪ್ರದೇಶ ನೆರೆಯಿಂದ ಮುಕ್ತ: ಸತೀಶ್ ರೆಡ್ಡಿ

ಪ್ರಜಾವಾಣಿ ವಾರ್ತೆ

ಬಿಜೆಪಿ ಕಾರ್ಯಕರ್ತರು ಶಾಸಕ ಸತೀಶ್ ರೆಡ್ಡಿ ಅವರಿಗೆ ಬುದ್ಧನ ವಿಗ್ರಹ ನೀಡಿ ಅಭಿನಂದಿಸಿದರು. ಮುಖಂಡರಾದ ಮುರಳೀಧರ್, ಮಂಜುನಾಥ್ ಇದ್ದರು.

ಬೊಮ್ಮನಹಳ್ಳಿ: ‘ನಾಲ್ಕನೇ ಬಾರಿ ಶಾಸಕನಾಗಿ ಜನರ ಸೇವೆ ಮಾಡಲು ಅವಕಾಶ ಕಲ್ಪಿಸಿದ ಬೊಮ್ಮನಹಳ್ಳಿ ಮಹಾ ಜನತೆಯ ಋಣವನ್ನು ಎಂದಿಗೂ ಮರೆಯಲಾರೆ’ ಎಂದು ಶಾಸಕ ಸತೀಶ್ ರೆಡ್ಡಿ ಹೇಳಿದರು.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಭಾನುವಾರ ಆಯೋಜಿಸಿದ್ದ ‘ಕೃತಜ್ಞತಾ ಸಮಾರಂಭ’ದಲ್ಲಿ ಅವರು ಮಾತನಾಡಿದರು.

‘ಎಚ್‌ಎಸ್‌ಆರ್ ಬಡಾವಣೆಯಿಂದ ಸಾರಕ್ಕಿ ಕೆರೆ ತನಕ ಸುಮಾರು 48 ಕಡೆಗಳಲ್ಲಿ ನೆರೆ ಸಂಭವಿಸುತ್ತಿತ್ತು. ಇದೀಗ ಬೊಮ್ಮನಹಳ್ಳಿ ಪ್ರದೇಶ ನೆರೆಯಿಂದ ಮುಕ್ತವಾಗಿದೆ. ಐದು ವರ್ಷಗಳ ಸಮಯವನ್ನು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮೀಸಲಿಡುತ್ತೇನೆ’ ಎಂದು ಭರವಸೆ ನೀಡಿದರು.

‘ಸೋತ ಕಾಂಗ್ರೆಸ್ ಅಭ್ಯರ್ಥಿ ಅಭಿವೃದ್ಧಿಗೆ ಅಡ್ಡಿಪಡಿಸುವ ಹತಾಶೆಯ ಮಾತುಗಳನ್ನಾಡಿದ್ದಾರೆ. ಇದಕ್ಕೆ ಜನರೇ ಪಾಠ ಕಲಿಸುತ್ತಾರೆ’ ಎಂದರು.

‘ಶಾಸಕನಾಗಿ ಶಾಸನ ಸಭೆಯಲ್ಲಿ ಕ್ಷೇತ್ರ ಮತ್ತು ರಾಜ್ಯದ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಹಾಗೆಯೇ ರಾಜ್ಯದ ಜನರಿಗೆ ‘ಗ್ಯಾರಂಟಿ’ ಆಶ್ವಾಸನೆ ನೀಡಿರುವ ಕಾಂಗ್ರೆಸ್ ನುಡಿದಂತೆ ನಡೆಯಬೇಕು’ ಎಂದು ಒತ್ತಾಯಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಸುಮಾರು 10 ಸಾವಿರ ಜನರಿಗೆ ಮಾಂಸದೂಟ ವ್ಯವಸ್ಥೆ ಮಾಡಲಾಗಿತ್ತು. ಶಾಸಕ ಆರ್.ಅಶೋಕ್, ವಿಧಾನ ಪರಿಷತ್ ಸದಸ್ಯ ಗೋಪಿನಾಥ ರೆಡ್ಡಿ, ಬಿಜೆಪಿ ಅರಕೆರೆ ಬ್ಲಾಕ್ ಅಧ್ಯಕ್ಷ ಮಂಜುನಾಥ್, ಸೋಮಸಂದ್ರಪಾಳ್ಯ ಶ್ರೀನಿವಾಸರೆಡ್ಡಿ, ಮಾಜಿ ಪಾಲಿಕೆ ಸದಸ್ಯೆ ಭಾಗ್ಯಲಕ್ಷ್ಮಿ ಮುರಳಿ ಭಾಗವಹಿಸಿದ್ದರು.

ಮಂಗಳೂರು: ವಿಮಾನ ಹಾರಾಟ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಜಪೆಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇಯ ಲೈಟಿಂಗ್ ವ್ಯವಸ್ಥೆಯಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಕೆಲವು ವಿಮಾನ ಹಾರಾಟದಲ್ಲಿ ಭಾನುವಾರ ವ್ಯತ್ಯಾಸ ಉಂಟಾಯಿತು.

ಲೈಟಿಂಗ್ ವ್ಯವಸ್ಥೆಯಲ್ಲಿ ಭಾನುವಾರ ರಾತ್ರಿ 7.45ಕ್ಕೆ ದೋಷ ಕಾಣಿಸಿಕೊಂಡಿತ್ತು. ಇದರಿಂದಾಗಿ ಕೆಲವು ವಿಮಾನಗಳ ಹಾರಾಟ ತಡವಾಯಿತು. ರಾತ್ರಿ 9.30ಕ್ಕೆ ಎಂಜಿನಿಯರ್‌ಗಳ ತಂಡವು ದೋಷವನ್ನು ದುರಸ್ತಿಗೊಳಿಸಿತು.

ಮುಂಬೈನಿಂದ ಬಂದು ಇಳಿಯಬೇಕಿದ್ದ ಇಂಡಿಗೊ ಕಂಪನಿಯ ವಿಮಾನವನ್ನು ಕಣ್ಣೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಸಲಾಗಿದೆ. ಬಹರೇನ್‌ಗೆ ಭಾನುವಾರ ರಾತ್ರಿ 8.05ಕ್ಕೆ ತೆರಳಬೇಕಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ (ಐಎಕ್ಸ್ 789) ತಾತ್ಕಾಲಿಕವಾಗಿ ತಡೆಹಿಡಿಯಲಾಗಿತ್ತು. ಚೆನ್ನೈ ಮತ್ತು ಬೆಂಗಳೂರಿನಿಂದ ಬಂದಿಳಿಯಬೇಕಾದ ವಿಮಾನಗಳ ಹಾರಾಟ ವಿಳಂಬವಾಗಿದೆ ಎಂದು ವಿಮಾನ ನಿಲ್ದಾಣದ ಪ್ರಕಟಣೆ ತಿಳಿಸಿದೆ.

ಈಜುಕೊಳದಲ್ಲಿ ಬಾಲಕಿ ಸಾವು

ಬೇಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಬಿಕ್ಕೋಡು ಸಮೀಪ ಗ್ರೀನ್ ಪ್ಲಾಸ್ಟರ್ ರೆಸಾರ್ಟ್‌ನಲ್ಲಿ ಖುಷಿ(12) ಎಂಬ ಬಾಲಕಿ ಈಜುಕೊಳದಲ್ಲಿ ಮುಳುಗಿ ಮೃತಪಟ್ಟಿದ್ದಾಳೆ.

ಬೆಂಗಳೂರು ಮೂಲದ ಧನರಾಜ್ ತಮ್ಮ ಕುಟುಂಬದವರೊಂದಿಗೆ ರೆಸಾರ್ಟ್‌ಗೆ ಭಾನುವಾರ ಬಂದಿದ್ದರು. ಮಧ್ಯಾಹ್ನ ಊಟ ಮಾಡುವ ಸಂದರ್ಭದಲ್ಲಿ ರಿಷಿ ಮತ್ತು ಖುಷಿ ಈಜುಕೊಳಕ್ಕೆ ಆಟವಾಡಲು ಇಳಿದಿದ್ದರು. ಖುಷಿ ಮುಳುಗಿ ಸಾವಿಗೀಡಾಗಿದ್ದಾಳೆ ಎಂದು ಪೊಲೀಸರು ಮಾಹಿತಿ ನೀಡಿದರು. ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಂಚಣಿ ಪರಿಷ್ಕರಣೆಗೆ ಸಂಘಟಿತ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆದ ರಾಜ್ಯ ಬ್ಯಾಂಕ್ ನಿವೃತ್ತರ ಒಕ್ಕೂಟದ ಸಭೆಯಲ್ಲಿ ಬ್ಯಾಂಕ್‌ನ ನಿವೃತ್ತ ನೌಕರರ ಪಿಂಚಣಿ ಪರಿಷ್ಕರಣೆಗಾಗಿ ಸಂಘಟಿತ ಹೋರಾಟಕ್ಕೆ ನಿರ್ಣಯ ಕೈಗೊಳ್ಳುವ ಜತೆಗೆ ಬೇಡಿಕೆ ಈಡೇರಿಕೆಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ತೀರ್ಮಾನ ಕೈಗೊಳ್ಳಲಾಗಿದೆ.

ವಿಜಯಾ ಕಾಲೇಜು ಸಭಾಂಗಣದಲ್ಲಿ ಒಕ್ಕೂಟದ ಅಧ್ಯಕ್ಷ ಬಿ.ದೇವದಾಸ ರಾವ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಪಿಂಚಣಿ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಸರ್ಕಾರ, ಭಾರತೀಯ ಬ್ಯಾಂಕುಗಳ ಸಂಘ, ಕೇಂದ್ರ ಹಣಕಾಸು ಸಚಿವರು ಒಪ್ಪಿಗೆ ಸೂಚಿಸಿದ್ದರೂ ಬೇಡಿಕೆ ಈಡೇರಿಸುತ್ತಿಲ್ಲ. ಹೀಗಾಗಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಹೋರಾಟ ತೀವ್ರಗೊಳಿಸಲು ಪದಾಧಿಕಾರಿಗಳು ನಿರ್ಣಯ ಕೈಗೊಂಡರು.

ಅಖಿಲ ಭಾರತ ಬ್ಯಾಂಕ್ ನಿವೃತ್ತರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಸ್.ಸಿ. ಜೈನ್ ಮಾತನಾಡಿ, ‘30 ವರ್ಷಗಳಿಂದ ನಿವೃತ್ತರಿಗೆ ಪಿಂಚಣಿ ಪರಿಷ್ಕರಿಸಿಲ್ಲ. ಎರಡು ದಶಕಗಳಿಂದ ಹೋರಾಟ ಮಾಡುತ್ತಿದ್ದರೂ ಕೊಟ್ಟ ಭರವಸೆ ಕೇಂದ್ರ ಸರ್ಕಾರ ಈಡೇರಿಸುತ್ತಿಲ್ಲ’ ಎಂದು ಆಕ್ರೋಶ ಹೊರಹಾಕಿದರು.

‘ನಿವೃತ್ತರ ಬೇಡಿಕೆಗಳು ನ್ಯಾಯಯುತವಾಗಿದ್ದು, ಬ್ಯಾಂಕ್ ಸಂಘಟಗಳ ಸಂಯುಕ್ತ ವೇದಿಕೆ ಪಿಂಚಣಿ ಪರಿಷ್ಕರಣೆ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಹೋರಾಟ ತೀವ್ರಗೊಳಿಸಲಿದೆ’ ಎಂದು ಕರ್ನಾಟಕ ರಾಜ್ಯ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆಯ ಸಂಚಾಲಕ ಕೆ.ಎನ್. ಗಿರಿರಾಜ್ ಹೇಳಿದರು.

ಅಖಿಲ ಭಾರತ ಬ್ಯಾಂಕ್ ಪೆನ್ಷನರ್ಸ್ ಅಂಡ್ ರಿಟೈರೀಸ್ ಕಾನ್ಫಡೆರೇಷನ್ ಕಾರ್ಯಾಧ್ಯಕ್ಷ ಎ.ಎನ್.ಕೃಷ್ಣಮೂರ್ತಿ ಮಾತನಾಡಿ, ಬ್ಯಾಂಕ್ ನಿವೃತ್ತರೆಲ್ಲರೂ ಒಟ್ಟಾಗಿ ಹೋರಾಟ ಮಾಡಿದರೆ ಬೇಡಿಕೆ ಈಡೇರಲಿದೆ ಎಂದರು.

ಕರ್ನಾಟಕ ಬ್ಯಾಂಕ್ ನೌಕರರ ಸಂಘದ ಪ್ರಮುಖ ಕೆ. ಚಂದ್ರಶೇಖರ್, ಕೇಂದ್ರ ಸರ್ಕಾರವು ತಾರತಮ್ಯ ನೀತಿಯನ್ನು ಕೈಬಿಟ್ಟು ರಿಸರ್ವ್ ಬ್ಯಾಂಕ್ ಮಾದರಿಯಲ್ಲಿ ಬ್ಯಾಂಕ್ ನಿವೃತ್ತರ ಪಿಂಚಣಿಯನ್ನು ಕೂಡಲೇ ಪರಿಷ್ಕರಿಸಬೇಕು. ಹೋರಾಟವನ್ನು ನಿರ್ಣಾಯಕ ಹಂತಕ್ಕೆ ಕೊಂಡಯ್ಯಲಾಗುವುದು ಎಂದು ಎಚ್ಚರಿಸಿದರು.

ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಸಂಘದ ಅಧ್ಯಕ್ಷ ಎ.ಎನ್.ಸುರೇಶ್, ಅಖಿಲ ಭಾರತ ಬ್ಯಾಂಕ್ ನಿವೃತ್ತರ ಒಕ್ಕೂಟದ ಪದಾಧಿಕಾರಿಗಳಾದ ಎನ್.ಟಿ. ಹೆಗ್ಡೆ, ಯು.ಅಬ್ದುಲ್ ಜಲೀಲ್, ರತ್ನಾ ಉತ್ತಪ್ಪ, ಸುಧಾಕರ ಶೆಟ್ಟಿ, ವಿಶ್ವನಾಥ ನಾಯ್ಕ್, ವೆಂಕಟರಾವ್, ರಾಜ್ಯ ಬ್ಯಾಂಕ್ ನಿವೃತ್ತರ ಒಕ್ಕೂಟದ ಉಪ ಪ್ರಧಾನ ಕಾರ್ಯದರ್ಶಿ ಎಂ.ಎಸ್. ಭಟ್ ಇದ್ದರು.

ಚುನಾವಣೆ ಬಳಿಕ ನಗರದಲ್ಲಿ ಗರಿಗೆದರಿದ ಸಾಂಸ್ಕೃತಿಕ ಚಟುವಟಿಕೆಗಳು

ರಂಗಮಂದಿರಗಳಿಗೆ ಮರಳಿ ಬೇಡಿಕೆ

• ವರುಣ ಹೆಗಡೆ

ಬೆಂಗಳೂರು: ವಿಧಾನಸಭೆ ಚುನಾವಣೆಯಿಂದಾಗಿ ನಗರದಲ್ಲಿ ಕುಂಠಿತಗೊಂಡಿದ್ದ ಸಾಂಸ್ಕೃತಿಕ ಚಟುವಟಿಕೆಗಳು ಈಗ ಗರಿಗೆದರಿದ್ದು, ರವೀಂದ್ರ ಕಲಾಕ್ಷೇತ್ರ ಸೇರಿ ವಿವಿಧ ಸರ್ಕಾರಿ ರಂಗಮಂದಿರಗಳಿಗೆ ಬೇಡಿಕೆ ಹೆಚ್ಚಿದೆ.

ಚುನಾವಣಾ ಆಯೋಗವು ಮಾರ್ಚ್ 29ರಿಂದ ಮೇ 15ರವರೆಗೆ ಚುನಾವಣೆ ನೀತಿ ಸಂಹಿತೆಯನ್ನು ಜಾರಿ ಮಾಡಿತ್ತು. ಇದರಿಂದಾಗಿ ಪೂರ್ವನಿಯೋಜಿತ ಕೆಲ ಕಾರ್ಯಕ್ರಮಗಳನ್ನು ಮುಂದೂಡಲಾಗಿತ್ತು. ಚುನಾವಣಾ ಆಯೋಗದಿಂದ ಅನುಮತಿ ಪತ್ರ ಪಡೆಯಬೇಕೆಂಬ ಕಾರಣಕ್ಕೆ ಕೆಲ ಸಂಘ–ಸಂಸ್ಥೆಗಳು ಕಾರ್ಯಕ್ರಮಗಳನ್ನು ನಡೆಸಿರಲಿಲ್ಲ. ಈಗ ಸಂಘ–ಸಂಸ್ಥೆಗಳು ಕಾರ್ಯಕ್ರಮ ನಡೆಸಲು ಆಸಕ್ತಿ ತಾಳಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2022–23ನೇ ಸಾಲಿನ ಧನಸಹಾಯಕ್ಕೆ ಸಂಬಂಧಿಸಿದಂತೆ ಮಾರ್ಚ್ ತಿಂಗಳಲ್ಲಿ ಆದೇಶ ಹೊರಡಿಸಿ, ಹಣ ಬಿಡುಗಡೆ ಮಾಡಿತ್ತು. ಇದರಿಂದಾಗಿಯೂ ಸಂಘ–ಸಂಸ್ಥೆಗಳು ಕಾರ್ಯಕ್ರಮ ನಡೆಸಲು ಉತ್ಸಾಹ ತೋರಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಂಗಮಂದಿರಗಳ ಕಾಯ್ದಿರಿಸುವಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಪೋರ್ಟಲ್ ರೂಪಿಸಿ, ಅವಕಾಶ ಕಲ್ಪಿಸಿದೆ. ಮೂರು ತಿಂಗಳು ಮುಂಚಿತವಾಗಿ ಕಾಯ್ದಿರಿಸಬಹುದಾಗಿದೆ. ಎಲ್ಲಾ ಪ್ರಕ್ರಿಯೆಗಳು ಆನ್‌ಲೈನ್ ಮೂಲಕ ನಡೆಯಲಿದೆ. ರವೀಂದ್ರ ಕಲಾಕ್ಷೇತ್ರ ಈಗಾಗಲೇ ಜೂನ್ ತಿಂಗಳಲ್ಲಿ 24 ಹಾಗೂ ಜುಲೈ ತಿಂಗಳಲ್ಲಿ 17 ದಿನಗಳು ಕಾಯ್ದಿರಿಸಲಾಗಿದೆ. ಇದೇ ರೀತಿ ನಯನ ಸಭಾಂಗಣ 16 ಹಾಗೂ 9, ಕಲಾಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯ 12 ಹಾಗೂ 9 ದಿನ ಕಾಯ್ದಿರಿಸಲ್ಪಟ್ಟಿವೆ. ಕೆಲ ದಿನ ಬೆಳಿಗ್ಗೆ ಮತ್ತು ಸಂಜೆ ಕಾರ್ಯಕ್ರಮವಿದೆ.

ಠೇವಣಿ ಹಣ ವಾಪಸ್: ಸರ್ಕಾರಿ ರಂಗಮಂದಿರಗಳ ಕಾಯ್ದಿರಿಸುವಿಕೆಯಲ್ಲಿ ಪಾರದರ್ಶಕತೆ ತರಲು 2022ರ ಏ.1ರಿಂದ ಆನ್‌ಲೈನ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಸರ್ಕಾರಿ ನಿಯಮಗಳ ಅನುಸಾರ ನಿಗದಿಯಾದ ಕಾರ್ಯಕ್ರಮ ನಿಂತಲ್ಲಿ, ಹಣ ಹಿಂತಿರುಗಿಸುವ ಬದಲು, ಮತ್ತೊಂದು ದಿನಾಂಕ ಆಯ್ಕೆಗೆ ಅವಕಾಶ ನೀಡಲಾಗುತ್ತಿದೆ. ಮೂರು ದಿನಗಳಿಗಿಂತಲೂ ಹೆಚ್ಚಿನ ಅವಧಿ ಸತತವಾಗಿ ಸಭಾಂಗಣ ಕಾಯ್ದಿರಿಸಲು ಅವಕಾಶವಿಲ್ಲ.

ರವೀಂದ್ರ ಕಲಾಕ್ಷೇತ್ರದಲ್ಲಿ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ತಲಾ 28 ದಿನಗಳು ಕಾಯ್ದಿರಿಸಲಾಗಿದೆ. ಅದೇ ರೀತಿ, ನಯನ ಸಭಾಂಗಣ 26 ಹಾಗೂ 17 ದಿನಗಳು, ಕಲಾಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯ 18 ಹಾಗೂ 22 ದಿನಗಳು ಮುಂಚಿತವಾಗಿ ಬುಕ್ಕಿಂಗ್ ಆಗಿದ್ದವು. ಚುನಾವಣೆ ನೀತಿ ಸಂಹಿತೆ ಕಾರಣ ಕೆಲ ಸಂಸ್ಥೆಗಳು ಕಾರ್ಯಕ್ರಮ ರದ್ದು ಮಾಡಿದ್ದವು. ಆ ಸಂಸ್ಥೆಗಳಿಗೆ ಠೇವಣಿ ಹಣ ಮಾತ್ರ ವಾಪಸ್ ನೀಡಲಾಗಿದೆ. ಇಲಾಖೆ ವತಿಯಿಂದಲೇ ಕಾರ್ಯಕ್ರಮ ರದ್ದುಗೊಳಿಸಿದರೆ ಠೇವಣಿ ಜತೆಗೆ ಬಾಡಿಗೆ ಹಣ, ಜಿಎಸ್‌ಟಿ ಮೊತ್ತವನ್ನೂ ಮರಳಿಸಲಾಗುತ್ತದೆ.

‘ಬಾಡಿಗೆ ಹಣದಿಂದ ನಿರ್ವಹಣೆ ಅಸಾಧ್ಯ’

‘ಸರ್ಕಾರಿ ರಂಗಮಂದಿರಗಳಿಗೆ ರಾಜ್ಯದಲ್ಲಿ ಅತೀ ಕಡಿಮೆ ಬಾಡಿಗೆ ನಿಗದಿ ಪಡಿಸಲಾಗಿದೆ. ಇದರಿಂದಾಗಿಯೇ ಸಂಘ–ಸಂಸ್ಥೆಗಳು ರವೀಂದ್ರ ಕಲಾಕ್ಷೇತ್ರ ಸೇರಿ ವಿವಿಧ ರಂಗಮಂದಿರಗಳನ್ನು ಮುಂಚಿತವಾಗಿ ಕಾಯ್ದಿರಿಸಲು ಹೆಚ್ಚಿನ ಆಸಕ್ತಿ ತೋರುತ್ತಿವೆ. ವಿದ್ಯುತ್ ಬಿಲ್, ಸಿಬ್ಬಂದಿ ವೇತನ, ನಿರ್ವಹಣೆ ಸೇರಿ ವಿವಿಧ ವೆಚ್ಚಗಳು ಹೆಚ್ಚುತ್ತಿವೆ. ಇಲಾಖೆಯೇ ಈ ಹಣವನ್ನು ಭರಿಸುತ್ತದೆ. ಬಾಡಿಗೆ ಹಣದಿಂದಲೇ ಸರ್ಕಾರಿ ರಂಗಮಂದಿರಗಳ ನಿರ್ವಹಣೆ ಸಾಧ್ಯವಿಲ್ಲ’ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಬಾಡಿಗೆ ಶೇ 5ರಷ್ಟು ಹೆಚ್ಚಳ

ಸರ್ಕಾರಿ ಆದೇಶದ ಅನ್ವಯ ರವೀಂದ್ರ ಕಲಾಕ್ಷೇತ್ರದ ಬಾಡಿಗೆಯನ್ನು ಶೇ 5ರಷ್ಟು ಹೆಚ್ಚಳ ಮಾಡಲಾಗಿದೆ. 2022ರಲ್ಲಿ ರಂಗಮಂದಿರಗಳ ಬಾಡಿಗೆಯನ್ನು ಪರಿಷ್ಕರಿಸಿ ಆದೇಶ ಹೊರಡಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರತಿ ವರ್ಷ ಬಾಡಿಗೆ ದರವನ್ನು ಶೇ 5ರಷ್ಟು ಏರಿಕೆ ಮಾಡಬೇಕೆಂದು ತಿಳಿಸಿತ್ತು. ಅದರಂತೆ ಈಗ ರವೀಂದ್ರ ಕಲಾಕ್ಷೇತ್ರದ ಬಾಡಿಗೆಯನ್ನು ಹೆಚ್ಚಳ ಮಾಡಲಾಗಿದೆ. ಒಂದು ಪಾಳಿಗೆ ₹5 ಸಾವಿರ ಠೇವಣಿ ಹಾಗೂ ಜಿಎಸ್‌ಟಿ ಸಹಿತ ₹ 12,080 ಇದ್ದ ಬಾಡಿಗೆ ದರ, ಈಗ ₹ 12,434ಕ್ಕೆ ಏರಿಕೆಯಾಗಿದೆ. ಠೇವಣಿ ಹಣವನ್ನು ಮರಳಿಸಲಾಗುತ್ತದೆ. ನಗರದಲ್ಲಿ ಇಲಾಖೆಯಡಿ ಏಳು ರಂಗಮಂದಿರ ಬರಲಿದ್ದು, ಉಳಿದ ರಂಗಮಂದಿರದ ಬಾಡಿಗೆ ಹೆಚ್ಚಿಸಿಲ್ಲ.

ಉದ್ಯಮಿ ಪುತ್ರನ ಶವ ಸಂಪ್‌ನಲ್ಲಿ ಪತ್ತೆ

ಮೈಸೂರು: ಇಲ್ಲಿನ ವಿಜಯನಗರ ವಾಟರ್ ಟ್ಯಾಂಕ್ ಬಳಿಯ ನಿರ್ಮಾಣ ಹಂತದ ಕಟ್ಟಡದ ಸಂಪ್‌ನಲ್ಲಿ ವ್ಯಕ್ತಿಯ ಶವ ಭಾನುವಾರ ಪತ್ತೆಯಾಗಿದೆ.

ಮೃತರನ್ನು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಸೆನ್ ಇಂಜಿನಿಯರಿಂಗ್ ವರ್ಕ್ಸ್ ಮಾಲೀಕ ಕೆ.ಎಂ. ಚೆರಿಯನ್ ಅವರ ಪುತ್ರ ಕ್ರಿಸ್ಟೋ ಚೆರಿಯನ್ (35) ಎಂದು ಗುರುತಿಸಲಾಗಿದೆ.

ವಿಜಯನಗರ ಮೊದಲನೇ ಹಂತದ ನಿವಾಸಿ ಕ್ರಿಸ್ಟೋ ಶನಿವಾರ ರಾತ್ರಿ ಮನೆಯಿಂದ ತೆರಳಿದ್ದರು. ತಡರಾತ್ರಿಯಾದರೂ ಬಂದಿರಲಿಲ್ಲ. ಕುಟುಂಬದವರು ಹುಡುಕುವ ಪ್ರಯತ್ನ ಮಾಡಿದ್ದರು. ನಿರ್ಮಾಣ ಹಂತದ ಕಟ್ಟಡದಲ್ಲಿನ ನೀರಿನ ಸಂಪ್‌ನಲ್ಲಿ ಭಾನುವಾರ ಬೆಳಿಗ್ಗೆ ಶವ ಸಿಕ್ಕಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ರಥೋತ್ಸವ... ನಗರದ ಕೆ ಆರ್ ರಸ್ತೆಯಲ್ಲಿರುವ ಕೋಟೆ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ 2023ನೇ ಸಾಲಿನ ರಥೋತ್ಸವ ಕಾರ್ಯಕ್ರಮದಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ನೇಮಕಾತಿಯಲ್ಲಿ ಅಕ್ರಮ ಆರೋಪ

ಜಾನಪದ ವಿವಿ: ಅಧಿಕಾರಿಗಳಿಂದ ಸರ್ಕಾರಕ್ಕೆ ತಪ್ಪು ಮಾಹಿತಿ– ಸರ್ಕಾರಕ್ಕೆ ಪತ್ರ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ: ‘ತಾಲ್ಲೂಕಿನ ಗೊಟಗೋಡಿಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ ಬೋಧಕ, ಬೋಧಕೇತರ ಸಿಬ್ಬಂದಿ ನೇಮಕಾತಿಯಲ್ಲಿ ಅಕ್ರಮ ನಡೆದಿದೆ’ ಎಂದು ಆರೋಪಿಸಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸರ್ವಾಂಗೀಣ ಹಿತರಕ್ಷಣಾ ಟ್ರಸ್ಟ್ ಅಧ್ಯಕ್ಷ ಬಸವರಾಜ ಗೊಬ್ಬಿ, ‘ತಕ್ಷಣ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸಬೇಕು’ ಎಂದು ಒತ್ತಾಯಿಸಿ ರಾಜ್ಯಪಾಲರಿಗೆ ಮತ್ತು ಉನ್ನತ ಶಿಕ್ಷಣ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮತ್ತು ಅವರಿಗೆ ಪತ್ರ ಬರೆದಿದ್ದಾರೆ.

‘ವಿಶ್ವದ್ಯಾಲಯದ ಬೋಧಕ, ಬೋಧಕೇತರ ನೇರ ನೇಮಕಾತಿ ರದ್ದುಪಡಿಸಿ ಆದೇಶ ಹೊರಡಿಸಿ ಐದು ತಿಂಗಳು ಕಳೆದಿಲ್ಲ. ಇಲ್ಲಿನ ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿ ನೇಮಕಾತಿ ಪ್ರಕ್ರಿಯೆ ಮುಂದುವರಿಸಿದ್ದಾರೆ. ಸರ್ಕಾರದ ನಿಯಮಾವಳಿ ಉಲ್ಲಂಘಿಸಿ ನೇಮಕಾತಿ ಪ್ರಕ್ರಿಯೆ ನಡೆಸಿದ್ದಾರೆ. ಅಧಿಕಾರಿಗಳ ಬೇಜವಾಬ್ದಾರಿ ಮತ್ತು ಅಭ್ಯರ್ಥಿ ಜತೆಗೆ ಒಳಒಪ್ಪಂದ ಮಾಡಿಕೊಂಡು ಈ ಕಾರ್ಯ ನಡೆಸಿದ್ದಾರೆ’ ಎಂದು ಮನವಿಯಲ್ಲಿ ದೂರಿದ್ದಾರೆ.

> **ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬುವುದರಲ್ಲಿ ಹುರುಳಿಲ್ಲ. ಸರ್ಕಾರದ ನಿಯಮಾವಳಿ ಪ್ರಕಾಶ ನೇಮಕಾತಿ ಪ್ರಕ್ರಿಯೆ ಹಮ್ಮಿಕೊಂಡಿದೆ**
> **ಪ್ರೊ.ಟಿ.ಎಂ.ಭಾಸ್ಕರ್** , ಕುಲಪತಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

> **ಸರ್ಕಾರದ ಅನುಮತಿ ಪಡೆದುಕೊಂಡು ಬೋಧಕ, ಬೋಧಕೇತರರ ನೇಮಕಾತಿ ಪ್ರಕ್ರಿಯೆ ನಡೆಸಲಾಗಿದೆ. ಈಗಾಗಲೆ ಬೇರೆ ವಿವಿಗಳು ನೇಮಕಾತಿ ಪರೀಕ್ಷೆ ಪ್ರಕ್ರಿಯೆ ನಡೆಸಿವೆ**
> **ಪ್ರೊ.ಸಿ.ಟಿ.ಗುರುಪ್ರಸಾದ,** ಕುಲಸಚಿವ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

‘ಕಳೆದ 2018ರಲ್ಲಿನ ನೇಮಕಾತಿ ಪ್ರಕ್ರಿಯೆ ರದ್ದು ಪಡಿಸಿ ಸರ್ಕಾರ ಆದೇಶ ನೀಡಿದೆ. ಆದರೆ ಅದೇ ನೇಮಕಾತಿ ಜಾಹಿರಾತಿನಂತೆ ಈಗ ನೇಮಕಾತಿ ಮಾಡಿಕೊಳ್ಳುವುದು ಕಾನೂನು ಬಾಹಿರವಾಗಿದೆ. ಏ.27ರಂದು ನೇಮಕಾತಿ ಪ್ರಕ್ರಿಯೆ ನಡೆಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅನುಮತಿ ನೀಡಿರುವುದು ಹೇಗೆ ಸಾಧ್ಯ’ ಎಂದು ಮನವಿಲ್ಲಿ ಪ್ರಶ್ನಿಸಿದ್ದಾರೆ.

‘ಒಓಡಿ ಮೇಲೆ ಈಗ ಸೇವೆಯಲ್ಲಿರುವ ಸಹಾಯಕ ಕುಲಸಚಿವ ಶಹಜಾನ್ ಮುದಕವಿ ಮುಂದಾಳತ್ವದಲ್ಲಿ ಪ್ರಶ್ನೆ ಪತ್ರಿಕೆ ತಯಾರಿಸಿ, ತಾವೇ ಪರೀಕ್ಷೆ ಬರೆದಿರುವುದು ನೇಮಕಾತಿ ಅಕ್ರಮಕ್ಕೆ ಕೈಗನ್ನಡಿಯಾಗಿದೆ. ಅಲ್ಲದೆ ತಮ್ಮ ಆಪ್ತರನ್ನೇ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ’ ಎಂದು ಆರೋಪಿಸಿದ್ದಾರೆ.

‘ನೂತನ ಸರ್ಕಾರ ವಿಶ್ವವಿದ್ಯಾಲಯಗಳಲ್ಲಿನ ನೇಮಕಾತಿ ಪ್ರಕ್ರಿಯೆ ರದ್ದುಗೊಳಿಸಿ ಆದೇಶ ನೀಡಿದೆ. ಆದರೂ ಜಾನಪದ ವಿಶ್ವವಿದ್ಯಾಲಯದಲ್ಲಿ ತರಾತುರಿಯಲ್ಲಿ ನೇಮಕಾತಿ ನಡೆಸಿರುವುದು ಅಕ್ರಮ ನಡೆದಿರುವ ಸಂಶಯ ಮೂಡಿಸಿದೆ. ಹೊಸ ನೇಮಕಾತಿ ಆದೇಶ ಹೊರಡಿಸಬೇಕು. ಅಭ್ಯರ್ಥಿಗಳಿಗೆ ನ್ಯಾಯ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

ರೈತನ ಶ್ರಮಕ್ಕೆ ತಕ್ಕಷ್ಟು ಸಿಗದ ಪ್ರತಿಫಲ

ಕೃಷಿ, ಸಹಕಾರ ಪ್ರಶಸ್ತಿ ಪ್ರದಾನ; ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ವಿಷಾದ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ದೇಶದ ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯ ದೊರೆಯುತ್ತಿಲ್ಲ, ಅನ್ನದಾತನ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಈ ಕಾರಣದಿಂದಾಗಿ ರೈತರು ಆತ್ಮಹತ್ಯೆ ಹಾದಿ ಹಿಡಿಯುತ್ತಿದ್ದಾರೆ’ ಎಂದು ಕೃಷಿ ಆರ್ಥಿಕ ತಜ್ಞ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ ವಿಷಾದಿಸಿದರು.

ನಗರದ ಕರ್ನಾಟಕ ಸಂಘದ ಕೆವಿಎಸ್ ಸಭಾಂಗಣದಲ್ಲಿ ಭಾನುವಾರ ನಡೆದ ‘ವೈ.ಕೆ.ರಾಮಯ್ಯ ಕೃಷಿ ತಜ್ಞ, ಎನ್.ಆರ್.ರಂಗಯ್ಯ ಸಹಕಾರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಯೋಜನೆಗಳು ಸರಿಯಾದ ಪರಿಣಾಮ ಬೀರಿದ್ದರೆ ಅದರ ಫಲಿತಾಂಶ ಬೇರೆಯೇ ಆಗಿರುತ್ತಿತ್ತು. ಯುವ ಜನರು ಗೌರವಯುತವಾದ, ಲಾಭದಾಯಕವಾದ ವ್ಯವಸಾಯ ಮಾಡಲು ಮುಂದಾಗದಿದ್ದರೆ ಸಾಮಾಜಿಕ ಸ್ಥಿತಿ ಅಧೋಗತಿಗೆ ಇಳಿಯಲಿದೆ ಎಂಬುದನ್ನು ಮನಗಾಣಬೇಕು. ದೇಶದಲ್ಲಿ ಆಹಾರ, ಹಣ್ಣು, ಹಾಲಿನ ಉತ್ಪಾದನೆ ಹೆಚ್ಚುತ್ತಿದ್ದರೂ ರೈತರ ಪರಿಸ್ಥಿತಿ ಸುಧಾರಿಸದೇ ಇರುವುದು ದುರದೃಷ್ಟಕರ’ ಎಂದರು.

‘ಮಲೆನಾಡು ಸೇರಿದಂತೆ ರಾಜ್ಯದಲ್ಲಿ ರೈತನ ಮಕ್ಕಳಿಗೆ ರೈತರ್ನೇ ಹೆಣ್ಣು ಕೊಡದ ಸ್ಥಿತಿ ಬಂದೊದಗಿದೆ, ಇದು ತಮಾಷೆಯ ಸಂಗತಿಯಲ್ಲ. ಇದೊಂದು ಗಂಭೀರ ಸಮಸ್ಯೆಯಾಗಿ ಮಾರ್ಪಟ್ಟಿದೆ. ರೈತರು ಅಪಾರ ಶ್ರಮ ಹಾಕಿ ಆಹಾರವನ್ನು ಸಮೃದ್ಧಿಯಾಗಿ ಬೆಳೆದರೂ ಸೂಕ್ತ ಮಾರುಕಟ್ಟೆ, ಮೌಲ್ಯ ದೊರೆಯುತ್ತಿಲ್ಲ. ಇದಕ್ಕೆ ಮೂಲ ಕಾರಣ ಏನು ಎಂಬ ಬಗ್ಗೆ ಆಡಳಿತ ವ್ಯವಸ್ಥೆ ಇನ್ನೂ ಗಮನ ಹರಿಸಿಲ್ಲ’ ಎಂದು ವಿಷಾದಿಸಿದರು.

‘ಇಂದು ರಾಜಕೀಯ ಪಕ್ಷಗಳು ಅಹಿಂದ, ಒಕ್ಕಲಿಗ, ವೀರಶೈವ, ಬ್ರಾಹ್ಮಣ ಎಂದು ವರ್ಗೀಕರಣ ರಾಜಕಾರಣ ಮಾಡುತ್ತಿವೆ. ಆದರೆ, ರೈತನಿಗೆ ಯಾವ ಜಾತಿ? ಒಕ್ಕಲುತನ ಮಾಡುವಾತನೇ ರೈತ ಎಂಬ ಅರಿವು ರಾಜಕೀಯ ಪಕ್ಷಗಳಿಗೆ ಇಲ್ಲವಾಗಿದೆ. ಆದ್ದರಿಂದ ರೈತನನ್ನು ನೋಡಿ, ಆತನ ಜಾತಿ ಯಾವುದೆಂದು ನೋಡುವ ಅವಶ್ಯಕತೆ ಇಲ್ಲ’ ಎಂದರು.

ವೈ.ಕೆ.ರಾಮಯ್ಯ ಕೃಷಿತಜ್ಞ ಪ್ರಶಸ್ತಿಯನ್ನು ಬೆಂಗಳೂರು ಲಾಲ್‌ಬಾಗ್ ಉದ್ಯಾನದ ಜಂಟಿ ನಿರ್ದೇಶಕ ಡಾ.ಎಂ. ಜಗದೀಶ್, ವೈ.ಕೆ.ರಾಮಯ್ಯ ಕೃಷಿ ಪ್ರಶಸ್ತಿಯನ್ನು ಪ್ರಗತಿಪರ ರೈತ ದೇವಯ್ಯ, ಎನ್.ರಂಗಯ್ಯ ಸಹಕಾರ ಪ್ರಶಸ್ತಿಯನ್ನು ಹಿರಿಯ ಸಹಕಾರಿ ಜಿ.ಟಿ.ಪುಟ್ಟಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು.

ಸಂಘದ ಅಧ್ಯಕ್ಷ ಪ್ರೊ.ಬಿ.ಜಯ ಪ್ರಕಾಶಗೌಡ, ಕಾನೂನು ಸಲಹೆಗಾರ ಎ.ಇಮ್ಯಾನ್ಯುಯೆಲ್, ನಿರ್ದೇಶಕ ಜಯ ರಾಮ್ ಕೋಣನಹಳ್ಳಿ, ವೈ.ಆರ್. ಚೇತನಾ, ಜಯಶ್ರೀ, ಲೋಕೇಶ್ ಚಂದಗಾಲು, ಎಂ.ಕೆ.ಹರೀಶ್ ಕುಮಾರ್ ಇದ್ದರು.

ಕರ್ನಾಟಕ ಸಂಘದ ಕೆವಿಎಸ್ ಸಭಾಂಗಣದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಎನ್‌.ರಂಗಯ್ಯ ಸಹಕಾರ ಪ್ರಶಸ್ತಿಯನ್ನು ಹಿರಿಯ ಸಹಕಾರಿ ಜಿ.ಟಿ.ಪುಟ್ಟಸ್ವಾಮಿ, ವೈ.ಕೆ.ರಾಮಯ್ಯ ಕೃಷಿತಜ್ಞ ಪ್ರಶಸ್ತಿಯನ್ನು ಬೆಂಗಳೂರು ಲಾಲ್‌ಬಾಗ್ ಉದ್ಯಾನದ ಜಂಟಿ ನಿರ್ದೇಶಕ ಡಾ.ಎಂ.ಜಗದೀಶ್ ಹಾಗೂ ರಾಮಯ್ಯ ಕೃಷಿ ಪ್ರಶಸ್ತಿಯನ್ನು ಪ್ರಗತಿಪರ ರೈತ ದೇವೇಗೌಡನದೊಡ್ಡಿ ದೇವಯ್ಯ ಅವರಿಗೆ ಪ್ರದಾನ ಮಾಡಲಾಯಿತು. ಡಾ.ಟಿ.ಎನ್‌. ಪ್ರಕಾಶ್ ಕಮ್ಮರಡಿ, ಪ್ರೊ.ಜಯಪ್ರಕಾಶಗೌಡ, ಎ.ಇಮ್ಯಾನ್ಯುಯೆಲ್, ಕೋಣನಹಳ್ಳಿ, ವೈ.ಆರ್‌.ಚೇತತಾ, ಜಯಶ್ರೀ, ಎಂ.ಕೆ.ಹರೀಶ್ ಕುಮಾರ್ ಇದ್ದರು

ಮುಖ್ಯಾಂಶಗಳು

- ರೈತರ ಮಕ್ಕಳಿಗೆ ಹೆಣ್ಣು ದೊರೆಯದ ಪರಿಸ್ಥಿತಿ
- ‘ಕೃಷಿ ಮಾಡುವವರಿಗೆ ಬೇರೆ ಯಾವ ಜಾತಿ?’

‘ರೈತ ಉತ್ಪಾದನಾ ಕೇಂದ್ರ ಬರಲಿ’

‘ರೈತರು ತಾವು ಬೆಳೆದ ಬೆಳೆಯನ್ನು ಮಾರುಕಟ್ಟೆಯಲ್ಲಿ ಮಧ್ಯವರ್ತಿಯ ಮುಂದೆ ನಿಂತು ಅವರು ಹೇಳುವ ದರಕ್ಕೆ ಮಾರಾಟ ಮಾಡುವ ಪರಿಸ್ಥಿತಿ ಬಂದಿದೆ. ರೈತ ಉತ್ಪಾದನಾ ಕೇಂದ್ರ ಬಂದರೆ ಅಲ್ಲಿ ಮಧ್ಯವರ್ತಿಯಾಗಲೀ, ವರ್ತಕರಾಗಲೀ ರೈತರ ಮುಂದೆ ಬಂದು ನಿಲ್ಲುತ್ತಾರೆ. ಆಗ ರೈತರ ಶ್ರಮಕ್ಕೆ ಸರದೂಗುವ ಪ್ರತಿಫಲ ಸಿಗುತ್ತದೆ. ಕೃಷಿ ವಲಯಕ್ಕೆ ಸಹಕಾರಿ ಸಿದ್ಧಾಂತವೇ ಮೋಕ್ಷದಾಯಕವಾದುದು ಎಂಬುದನ್ನು ಮರೆಯಬಾರದು. ಹಾಗಾಗಿ, ರೈತರಲ್ಲಿ ಒಗ್ಗಟ್ಟಿನ ಮನೋಧರ್ಮ ಅಗತ್ಯವಾಗಿದೆ’ ಎಂದು ಡಾ.ಪ್ರಕಾಶ್ ಕಮ್ಮರಡಿ ಹೇಳಿದರು.

ವೈಭವ್ ಫೆಲೊಷಿಪ್ 2023

ಫೆಲೊಷಿಪ್

- **ವಿವರ:** ಪಿಎಚ್.ಡಿ/ಎಂ.ಡಿ/ಎಂ.ಎಸ್ ಪದವೀಧರರಿಗಾಗಿ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ 'ವೈಭವ್ ಫೆಲೊಷಿಪ್ 2023' ಕಾರ್ಯಕ್ರಮವನ್ನು ರೂಪಿಸಿದೆ.
- **ಅರ್ಹತೆ:** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪಿಎಚ್.ಡಿ/ಎಂ.ಡಿ/ಎಂ.ಎಸ್ ಪದವಿ ಪಡೆದು, ವಿದೇಶದಲ್ಲಿ ವಾಸಿಸುವ ಎನ್‌ಆರ್‌ಐಗಳು, ಪಿಐಒಗಳು ಮತ್ತು ಒಸಿಐಗಳು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು.
- ಅರ್ಜಿದಾರರು ಟಾಪ್ 500 ಕ್ಯೂಎಸ್ ವರ್ಲ್ಡ್ ಯೂನಿವರ್ಸಿಟಿ ಶ್ರೇಯಾಂಕದ ಶೈಕ್ಷಣಿಕ/ಸಂಶೋಧನೆ/ಕೈಗಾರಿಕಾ ಸಂಸ್ಥೆಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯ ಸಮರ್ಥ ಟ್ರ್ಯಾಕ್ ರೆಕಾರ್ಡ್ ಹೊಂದಿರುವ ಸಂಶೋಧಕರಾಗಿರಬೇಕು. ಭಾರತೀಯ ಸಂಶೋಧನಾ ಸಂಸ್ಥೆಗಳಲ್ಲಿ ಪ್ರತಿ ವರ್ಷ 1 ರಿಂದ 2 ತಿಂಗಳವರೆಗೆ ಮೂರು ವರ್ಷಗಳ ಕಾಲ ಸಂಶೋಧನೆ ನಡೆಸಲು ಸಿದ್ಧರಿರಬೇಕು.
- **ಆರ್ಥಿಕ ನೆರವು:** ₹ 4,08,727.50 (5 ಸಾವಿರ ಅಮೆರಿಕನ್ ಡಾಲರ್) ಮತ್ತು ಇತರೆ ಸೌಲಭ್ಯಗಳು
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** ಜುಲೈ 31, 2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ
- **ಹೆಚ್ಚಿನ ಮಾಹಿತಿಗೆ:** www.b4s.in/praja/VAIB6

(ಕೃಪೆ: **www.buddy4study.com**)

'ಎಂಜಿನಿಯರಿಂಗ್' ಸಿಗದಿದ್ದರೆ ಮುಂದೇನು ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

- **ನಾನು ಇತ್ತೀಚೆಗೆ ನಡೆದ ಸಿಇಟಿ ಪರೀಕ್ಷೆಯನ್ನು ಸರಿಯಾಗಿ ಬರೆಯಲಾಗಲಿಲ್ಲ. ಏನಾಗುತ್ತದೋ ಗೊತ್ತಿಲ್ಲ. ಎಂಜಿನಿಯರಿಂಗ್ ಸಿಗದಿದ್ದರೆ, ಏನು ಮಾಡಬಹುದು ?**

ಹೆಸರು, ಊರು ತಿಳಿಸಿಲ್ಲ.

ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಜ್ಯದ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳು ಸಂಪೂರ್ಣವಾಗಿ ಭರ್ತಿಯಾಗುತ್ತಿಲ್ಲ. ಹಾಗಾಗಿ, ಎಂಜಿನಿಯರಿಂಗ್ ಮಾಡುವುದೇ ನಿಮ್ಮ ಅಪೇಕ್ಷೆಯಾಗಿದ್ದರೆ, ಚಿಂತಿಸುವುದು ಬೇಡ. ಇದಲ್ಲದೆ, ಎಂಜಿನಿಯರಿಂಗ್ ಕೋರ್ಸಿಗೆ ಪರ್ಯಾಯವೆನ್ನಬಹುದಾದ ಬಿ.ಎಸ್ಸಿ, ಬಿಸಿಎ ಮುಂತಾದ ಕೋರ್ಸ್‌ಗಳಿವೆ. ನಿಮಗಿಷ್ಟವಿರುವ ವಿಷಯದಲ್ಲಿ ಈ ಕೋರ್ಸ್‌ಗಳನ್ನು ಮಾಡಿ, ಅರೆಕಾಲಿಕ ಕೌಶಲಾಭಿವೃದ್ಧಿ ಕೋರ್ಸ್‌ಗಳನ್ನು ಮಾಡಿ ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=ABkhf_hiHfw

- **ನಾನು ಇನ್ನೆರಡು ತಿಂಗಳಲ್ಲಿ ಎಂ.ಎಸ್ಸಿ (ರಸಾಯನ ವಿಜ್ಞಾನ) ಪದವಿ ಮುಗಿಸುತ್ತಿದ್ದೇನೆ. ಸಂಸ್ಥೆಗಳಲ್ಲಿ ಕೆಲಸ ಮಾಡುವುದೇ, ಎನ್‌ಇಟಿ ಮಾಡಿ ಉಪನ್ಯಾಸಕರಾಗುವುದೇ ಅಥವಾ ಕೆಎಎಸ್ ಮಾಡುವುದೇ ಎಂಬ ಗೊಂದಲವಿದೆ. ಏನು ಮಾಡಿದರೆ ಮುಂದಿನ ಭವಿಷ್ಯ ಚೆನ್ನಾಗಿರಬಹುದು?**

ಹೆಸರು, ಊರು ತಿಳಿಸಿಲ್ಲ.

ಖಚಿತವಾದ ವೃತ್ತಿಯೋಜನೆಯಿಲ್ಲದೆ ಕೋರ್ಸ್‌ಗಳನ್ನು ಮಾಡಿದರೆ ಇಂತಹ ಗೊಂದಲಗಳು ಸಾಮಾನ್ಯ. ಜೀವನದಲ್ಲಿ ನಿರ್ದಿಷ್ಟವಾದ, ಸ್ಪಷ್ಟವಾದ, ಸಾಧಿಸಬಹುದಾದ, ಮತ್ತು ಅಳೆಯಬಹುದಾದ ಗುರಿಯಿರಬೇಕು. ಬಾಳಿಗೊಂದು ಗುರಿ ಇದ್ದರೆ, ನಮ್ಮಲ್ಲಿರುವ ಸುಪ್ತ ಶಕ್ತಿಗಳನ್ನು ಆ ಗುರಿಯೆಡೆಗೆ ಕೇಂದ್ರೀಕರಿಸಿ, ವೃತ್ತಿಯಲ್ಲಿ ಯಶಸ್ಸು ಮತ್ತು ಜೀವನದಲ್ಲಿ ಸಂತೃಪ್ತಿಯನ್ನು ಪಡೆಯಬಹುದು.

ಈಗ ನೀವು ಪರಿಶೀಲಿಸುತ್ತಿರುವ ವೃತ್ತಿಗಳ ಯಶಸ್ಸಿಗೆ ಬೇಕಾಗುವ ಜ್ಞಾನ, ಆಸಕ್ತಿ, ಅಭಿರುಚಿ, ಸಾಮರ್ಥ್ಯ ಮತ್ತು ಕೌಶಲಗಳು ವಿಭಿನ್ನ. ಹಾಗಾಗಿ, ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ನಿಮಗೊಪ್ಪುವ ಮತ್ತು ಆತ್ಮಸಂತೃಪ್ತಿಯನ್ನು ತಂದುಕೊಡುವ ವೃತ್ತಿಯನ್ನು ಆಯ್ಕೆ ಮಾಡಿ, ಅದರಂತೆ ಮುಂದಿನ ನಿರ್ಧಾರವನ್ನು ಮಾಡುವುದು ನಿಮ್ಮ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು. ವೃತ್ತಿಯೋಜನೆಯನ್ನು ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:https://www.youtube.com/watch?v=MHnPg_sp6E0

ಮತ್ತಷ್ಟು ಪ್ರಶ್ನೋತ್ತರಕ್ಕೆ www.prajavani.net/education-career/education ಜಾಲತಾಣ ನೋಡಿ.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

- **ನಾನು ಎಂಎ (ಪತ್ರಿಕೋದ್ಯಮ) ಮಾಡಿ, ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಪಿಎಚ್.ಡಿ ಮಾಡುವ ಆಸೆಯಿದೆ. ಕೆಲಸದಲ್ಲಿದ್ದುಕೊಂಡು ಪಿಎಚ್.ಡಿ ಮಾಡಬಹುದೇ? ಪಿಎಚ್.ಡಿಗೆ ಬೇಕಾದ ಅರ್ಹತೆಗಳೇನು? ಇದನ್ನು ಬಿಟ್ಟು ಸ್ನಾತಕೋತ್ತರ ಪದವೀಧರರು ಬೇರೆ ಯಾವ ಉನ್ನತ ಶಿಕ್ಷಣ ಪಡೆಯಬಹುದು?**

ಹೆಸರು, ಊರು ತಿಳಿಸಿಲ್ಲ.

ವಿಶ್ವವಿದ್ಯಾಲಯ ಅನುದಾನ ಆಯೋಗದ 2022ರ ಕರಡು ನಿಯಮಾವಳಿಗಳಂತೆ ಉದ್ಯೋಗದಲ್ಲಿರುವ ಅಭ್ಯರ್ಥಿಗಳು ಪಿಎಚ್.ಡಿ ಮಾಡಬಹುದು. ಆದರೆ, ಪೂರ್ಣಾವಧಿ ಪಿಎಚ್.ಡಿ ಮಾಡಲು ಅನ್ವಯವಾಗುವ ಎಲ್ಲಾ ನಿಯಮಾವಳಿಗಳು ಉದ್ಯೋಗದಲ್ಲಿರುವ ಅಭ್ಯರ್ಥಿಗಳಿಗೂ ಅನ್ವಯವಾಗುತ್ತದೆ. ನೀವು ಕೆಲಸ ಮಾಡುತ್ತಿರುವ ಸಂಸ್ಥೆಯ ಅನುಮತಿಯ ಜೊತೆಗೆ, ಕನಿಷ್ಠ 6 ತಿಂಗಳು ಪಿಎಚ್.ಡಿ ಸಂಶೋಧನೆಯ ಪೂರ್ಣಾವಧಿ ಕೋರ್ಸ್ ಮಾಡಬೇಕಾಗುತ್ತದೆ. ಇನ್ನಿತರ ನಿಯಮಾವಳಿಗಳು ನೀವು ಸೇರಬಯಸುವ ವಿಶ್ವವಿದ್ಯಾಲಯವನ್ನು ಅವಲಂಬಿಸಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://www.ugc.gov.in/pdfnews/4405511_Draft-UGC-PhD-regulations-2022.pdf

ಪಿಎಚ್.ಡಿ ಮಾಡಲಾಗದಿದ್ದರೆ, ಸಂಬಂಧಪಟ್ಟ ಇನ್ನೊಂದು ವಿಷಯದಲ್ಲಿ ಸ್ನಾತಕೋತ್ತರ ಕೋರ್ಸ್ (ಉದಾಹರಣೆಗೆ ಭಾಷೆ, ಸಾಹಿತ್ಯ, ಮಾಧ್ಯಮ ಇತ್ಯಾದಿ) ಅಥವಾ ಅರೆಕಾಲಿಕ/ದೂರಶಿಕ್ಷಣದ ಮೂಲಕ ವೃತ್ತಿಪರ ಸರ್ಟಿಫಿಕೆಟ್/ಡಿಪ್ಲೊಮಾ ಕೋರ್ಸ್‌ಗಳನ್ನು ಮಾಡಬಹುದು. ಪಿಎಚ್.ಡಿ ಮಾಡುವ ಪ್ರಕ್ರಿಯೆ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=Mb4PKUb35_Q

ವಿದ್ಯಾರ್ಥಿ ವೇತನ ಕೈಪಿಡಿ

ಮೇಧಾವಿ ಎಂಜಿನಿಯರಿಂಗ್ ಸ್ಕಾಲರ್‌ಷಿಪ್

ದೇಶದಾದ್ಯಂತವಿರುವ ನಿಗದಿತ 20 ಎನ್‌ಐಟಿ ಸಂಸ್ಥೆಗಳಲ್ಲಿ ಎಂಜಿನಿಯರಿಂಗ್ ಪದವಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸ ಮುಂದುವರಿಸಿ, ಆತ್ಮವಿಶ್ವಾಸ ಹೆಚ್ಚಿಸಿಕೊಂಡು, ಸ್ವಾವಲಂಬಿಗಳಾಗಿ ಬದುಕು ರೂಪಿಸಿಕೊಳ್ಳುವುದಕ್ಕಾಗಿ ಆರ್ಥಿಕ ನೆರವು ನೀಡಲು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್(ಬಿಪಿಸಿಐಎಲ್) 'ಮೇಧಾವಿ ಎಂಜಿನಿಯರಿಂಗ್ ಸ್ಕಾಲರ್‌ಷಿಪ್ ಪ್ರೋಗ್ರಾಂ 2023-24' ರೂಪಿಸಿದೆ.

ಅರ್ಹತೆ : ನಿಗದಿತ 20 ಎನ್‌ಐಟಿಗಳಲ್ಲಿ 2023-24ನೇ ಸಾಲಿನಲ್ಲಿ ಯಾವುದೇ ವರ್ಷಕ್ಕಾದರೂ ಎಂಜಿನಿಯರಿಂಗ್ ಪದವಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು 12ನೇ ತರಗತಿಯಲ್ಲಿ ಶೇ 55ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಹಾಗೆಯೇ ಕುಟುಂಬದವರ ವಾರ್ಷಿಕ ವರಮಾನ ₹8 ಲಕ್ಷ ಮೀರಿರಬಾರದು.

- **ಆರ್ಥಿಕ ನೆರವು:** ₹50 ಸಾವಿರ (ಒನ್ ಟೈಮ್ ಫಿಕ್ಸ್ಡ್ ಸ್ಕಾಲರ್‌ಷಿಪ್)
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** ಜೂನ್ 7, 2023
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/BPCLS1

ಗ್ಯಾನ್‌ಧನ್ ಸ್ಕಾಲರ್‌ಷಿಪ್ 2023

ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಗ್ಯಾನ್‌ಧನ್ ಸ್ಕಾಲರ್‌ಷಿಪ್ 2023 ಅನ್ನು ರೂಪಿಸಲಾಗಿದೆ (ಇದುಭಾರತದ ಮೊದಲ ಶಿಕ್ಷಣ ಹಣಕಾಸು ಮಾರುಕಟ್ಟೆ) . ಶೈಕ್ಷಣಿಕ ಸಾಲ ತೆಗೆದುಕೊಳ್ಳುವ ಮತ್ತು ವಿದ್ಯಾರ್ಥಿಗಳ ಮೇಲಿನ ಆರ್ಥಿಕ ಹೊರೆ ತಗ್ಗಿಸಲು ಹಣಕಾಸಿನ ನೆರವು ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳಿಂದ ಪದವಿ ಪಡೆದಿರುವ ಭಾರತೀಯ ಅರ್ಜಿದಾರರು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಅಮೆರಿಕ, ಕೆನಡಾ, ಬ್ರಿಟನ್, ಆಸ್ಟ್ರೇಲಿಯಾ, ಐರ್ಲೆಂಡ್, ನ್ಯೂಜಿಲೆಂಡ್ ಮತ್ತು ಜರ್ಮನಿಯಲ್ಲಿ ಎರಡು ವರ್ಷಗಳ ಸ್ನಾತಕೋತ್ತರ ಪದವಿ ಕೋರ್ಸ್ ಮುಂದುವರಿಸಲು ಸಿದ್ಧರಿರಬೇಕು.

- **ಆರ್ಥಿಕ ನೆರವು:** ₹ 1 ಲಕ್ಷ (ಒಂದು ಬಾರಿ)
- **ಅರ್ಜಿ ಸಲ್ಲಿಕೆಗೆ ಕೊನೆ ದಿನ:** ಆಗಸ್ಟ್ 31, 2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** www.b4s.in/praja/GDSA6

(ಕೃಪೆ: **www.buddy4study.com**)

ಗ್ರಾಫಿಕ್ ಡಿಸೈನಿಂಗ್ ಕೋರ್ಸ್

ಸಿಬಂತಿ ಪದ್ಮನಾಭ ಕೆ.ವಿ.

ಒಳ್ಳೆಯ ಪ್ಯಾಕೇಜಿಂಗ್ ಇಲ್ಲದೆ ಹೋದರೆ ಎಷ್ಟೇ ಉತ್ತಮ ಉತ್ಪನ್ನವಾದರೂ ಮಾರುಕಟ್ಟೆಯಲ್ಲಿ ಗ್ರಾಹಕರನ್ನು ಆಕರ್ಷಿಸುವುದಿಲ್ಲ. ಆಕರ್ಷಕ ಪೋಸ್ಟರ್‌ಗಳಿಲ್ಲದೆ ಎಷ್ಟೇ ಒಳ್ಳೆಯ ಸಿನಿಮಾ ಆದರೂ ಪ್ರೇಕ್ಷಕರನ್ನು ಸೆಳೆಯುವುದಿಲ್ಲ. ಜಾಹೀರಾತುಗಳಿಲ್ಲದೆ ಎಷ್ಟೇ ಒಳ್ಳೆಯ ವಸ್ತುವಾದರೂ ಜನರನ್ನು ತಲುಪುವುದಿಲ್ಲ.

ಯಾವ ವಿಚಾರವನ್ನಾದರೂ ವೈಶಿಷ್ಟ್ಯಪೂರ್ಣವಾಗಿ ಮರುಮಂಡಿಸುವ ವಿಧಾನ ಇಂದು ಎಲ್ಲ ಕ್ಷೇತ್ರಗಳಿಗೂ ಬೇಕು. ಈ ಪ್ರಕ್ರಿಯೆಯಲ್ಲಿ ಗ್ರಾಫಿಕ್ ಕಲೆಯ ಪಾತ್ರ ತುಂಬ ದೊಡ್ಡದು. ಪ್ಯಾಕೇಜಿಂಗ್, ಪೋಸ್ಟರ್, ಜಾಹೀರಾತು, ಮಾಧ್ಯಮ- ಎಲ್ಲರ ಆದ್ಯತೆಯ ಈ ವಿಷಯಗಳಿಗೆ ಗ್ರಾಫಿಕ್ ವಿನ್ಯಾಸವೇ ಆಧಾರ. ಬಣ್ಣ-ಚಿತ್ರ-ಪದಗಳನ್ನು ಹೊಸಹೊಸ ರೀತಿಯಲ್ಲಿ ಪ್ರಸ್ತುತಪಡಿಸುವುದೇ ಗ್ರಾಫಿಕ್ ಕಲೆಯ ಜೀವಾಳ.

ಹೀಗಾಗಿ ಗ್ರಾಫಿಕ್ ಡಿಸೈನಿಂಗ್ ಇಂದು ಎಲ್ಲಿಲ್ಲದ ಬೇಡಿಕೆಯನ್ನು ಪಡೆದುಕೊಂಡಿದೆ. ಆಧುನಿಕ ವ್ಯವಹಾರ ಪ್ರಪಂಚದಲ್ಲಿ ಮಾರ್ಕೆಟಿಂಗ್ ಅನಿವಾರ್ಯವಾಗಿರುವುದೇ ಈ ಬೇಡಿಕೆ ಇಷ್ಟೊಂದು ತೀವ್ರವಾಗಿರಲು ಕಾರಣ. ಕ್ರಿಯಾಶೀಲ ಗ್ರಾಫಿಕ್ ವಿನ್ಯಾಸಕಾರರಿಗೆ ಇದು ಸುಗ್ಗಿಯ ಕಾಲ. ಈ ಕೌಶಲದಲ್ಲಿ ಪಳಗಿದವರಿಗೆ ಇಂದು ಎಲ್ಲೆಲ್ಲೂ ಅವಕಾಶ, ಕೈತುಂಬ ಆದಾಯ. ಪರಿಣಾಮವಾಗಿ ಇದನ್ನು ಕಲಿಸಿಕೊಡುವ ಸಂಸ್ಥೆಗಳು, ಕೋರ್ಸ್‌ಗಳು ಹುಟ್ಟಿಕೊಂಡಿವೆ.

ಏನಿದು ಕೋರ್ಸ್?

ವಿನ್ಯಾಸದ ಮೂಲ ತತ್ವಗಳನ್ನು ಪರಿಚಯಿಸುವುದರ ಜೊತೆಗೆ ಇದಕ್ಕೆ ಅಗತ್ಯವಿರುವ ಕಂಪ್ಯೂಟರ್ ತಂತ್ರಾಂಶಗಳನ್ನು ನಿರ್ವಹಿಸುವ ಕೌಶಲಗಳನ್ನು ಕಲಿಸಿಕೊಡುವುದೇ ಗ್ರಾಫಿಕ್ ಡಿಸೈನಿಂಗ್ ಕೋರ್ಸ್‌ಗಳ ಉದ್ದೇಶ. ವಿನ್ಯಾಸಕಾರರಿಗೆ ನೆರವಾಗುವ ಫೋಟೊಶಾಪ್, ಇನ್‌ಡಿಸೈನ್, ಇಲಸ್ಟ್ರೇಟರ್, ಕೋರೆಲ್‌ಡ್ರಾ ಮೊದಲಾದ ಪುಟ ವಿನ್ಯಾಸದ ಪರಿಕರಗಳನ್ನು ಅಭ್ಯಾಸಮಾಡುವುದು ಇದರ ಪ್ರಮುಖ ಭಾಗ. ಸ್ಕೈಬಸ್, ಕ್ರಿಟಾ, ಇಂಕ್‌ಸ್ಕೇಪ್, ಜಿಂಪ್ ಇತ್ಯಾದಿ ಉಚಿತ ವಿನ್ಯಾಸ ತಂತ್ರಾಂಶಗಳೂ ಇಂದು ಲಭ್ಯವಿವೆ. ಆದರೆ ಇವುಗಳನ್ನು ಬಳಸುವುದನ್ನು ಕಲಿಯಲೇಬೇಕು. ಪದವಿ ಹಂತದಲ್ಲಿ ಡಿಸೈನಿಂಗ್ ಕೋರ್ಸ್‌ಗಳು ಜನಪ್ರಿಯವಾಗಿವೆ. ಆದರೆ ಸಾಂಪ್ರದಾಯಿಕ ಪದವಿಗಳನ್ನು ಓದುತ್ತಲೇ ಬಿಡುವಿನ ವೇಳೆಯಲ್ಲಿ ಗ್ರಾಫಿಕ್ ವಿನ್ಯಾಸ ಅಭ್ಯಾಸ ಮಾಡಿಕೊಂಡರೆ ಅದೇ ಮುಂದೆ ಬದುಕಿನ ದಾರಿಯಾದೀತು. ಇದಕ್ಕಾಗಿ ಲಭ್ಯವಿರುವ ಆನ್‌ಲೈನ್ ಸಂಪನ್ಮೂಲಗಳ ಸದ್ಬಳಕೆ ಮಾಡಿಕೊಳ್ಳಬಹುದು.

ಯಾರು ಮಾಡಬಹುದು?

ಪಿಯುಸಿ ಅಥವಾ ಅದರ ನಂತರದ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಗ್ರಾಫಿಕ್ ಡಿಸೈನಿಂಗ್ ಕಡೆ ಗಮನ ಹರಿಸಬಹುದು. ಕಂಪ್ಯೂಟರ್ ಬಳಕೆಯ ಸಾಮಾನ್ಯ ಜ್ಞಾನ ಅಗತ್ಯ. ಡ್ರಾಯಿಂಗ್, ಪೇಂಟಿಂಗ್, ಬರವಣಿಗೆ ಇತ್ಯಾದಿಗಳಲ್ಲಿ ನಿಮಗೆ ಆಸಕ್ತಿಯಿದ್ದರೆ, ಯಾವುದೇ ವಿಷಯವನ್ನೂ ಹೊಸ ರೀತಿಯಲ್ಲಿ ಯೋಚಿಸುವ ಮನಸ್ಥಿತಿ ಇದ್ದರೆ, ಸೃಜನಶೀಲ ಮನಸ್ಸು ನಿಮ್ಮದಾಗಿದ್ದರೆ ಗ್ರಾಫಿಕ್ ಡಿಸೈನಿಂಗ್ ನಿಮಗೆ ಹೇಳಿಮಾಡಿಸಿದ ಕ್ಷೇತ್ರ. ಕಂಪನಿಗಳಲ್ಲಿ ಉದ್ಯೋಗಿಯಾಗಿಯಲ್ಲದೆ ಸ್ವತಂತ್ರವಾಗಿ ದುಡಿಯುವವರಿಗೂ ಈ ಕ್ಷೇತ್ರದಲ್ಲಿ ಅಪಾರ ಅವಕಾಶವಿದೆ. ಒಂದು ಕಂಪ್ಯೂಟರ್, ಅಗತ್ಯ ಸಾಫ್ಟ್‌ವೇರ್, ಅವುಗಳನ್ನು ಬಳಸುವ ಕೌಶಲ- ಇವಿಷ್ಟು ಇರುವವರಿಗೆ ಇಂದು ಮಾಡಿದಷ್ಟೂ ಮುಗಿಯದ ಗ್ರಾಫಿಕ್ ಡಿಸೈನಿಂಗ್ ಕೆಲಸ ಇದೆ.

(ಮುಂದಿನ ವಾರ: ಈವೆಂಟ್ ಮ್ಯಾನೇಜ್ಮೆಂಟ್)

(ಲೇಖಕರು: ಸಹಾಯಕ ಪ್ರಾಧ್ಯಾಪಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು)

6 ಇ-ಕೋರ್ಸ್

ಕೋರ್ಸ್ ಎಲ್ಲಿ ಲಭ್ಯ?

ಗ್ರಾಫಿಕ್ ಡಿಸೈನಿಂಗ್ ಸಂಬಂಧ ಸಾಫ್ಟ್‌ವೇರ್‌ಗಳನ್ನು ಪ್ರತ್ಯೇಕವಾಗಿಯೂ ಒಟ್ಟಾಗಿಯೂ ಕಲಿಸುವ ಅನೇಕ ಆನ್‌ಲೈನ್ ವೇದಿಕೆಗಳಿವೆ. ಇವುಗಳಲ್ಲಿ ಉಚಿತವಾದವೂ ಇವೆ, ನಿರ್ದಿಷ್ಟ ಶುಲ್ಕ ಅಪೇಕ್ಷಿಸುವ ಕೋರ್ಸ್‌ಗಳೂ ಇವೆ.

- ಯುಡೆಮಿ ಅನೇಕ ಉಚಿತ ಹಾಗೂ ಪಾವತಿ ಕೋರ್ಸ್‌ಗಳನ್ನು ಒದಗಿಸುತ್ತಿದೆ. ಅವುಗಳನ್ನು ಈ ಲಿಂಕ್‌ನಲ್ಲಿ ಗಮನಿಸಬಹುದು: https://www.udemy.com/topic/ graphic-design/free/
- ಗೂಗಲ್ ಕಂಪನಿಯು 'ಫಂಡಮೆಂಟಲ್ಸ್ ಆಫ್ ಗ್ರಾಫಿಕ್ ಡಿಸೈನ್' ಎಂಬ ಕೋರ್ಸನ್ನು ಕೋರ್ಸ್‌ಇರಾ ಸಹಯೋಗದಲ್ಲಿ ಒದಗಿಸುತ್ತಿದೆ. 14 ಗಂಟೆಗಳ ಈ ಕೋರ್ಸ್‌ಗೆ ಶುಲ್ಕವಿದೆ. ಲಿಂಕ್ ಇಲ್ಲಿದೆ: https://learndigital.withgoogle.com/digitalgarage/ course/fundamentals-graphic-design
- ಸರ್ಕಾರದ 'ಸ್ವಯಂ' ವೇದಿಕೆಯಲ್ಲಿ 'ಗ್ರಾಫಿಕ್ಸ್ & ಅನಿಮೇಶನ್ ಡೆವಲಪ್‌ಮೆಂಟ್' ಎಂಬ ಉಚಿತ ಕೋರ್ಸ್ ಲಭ್ಯವಿದೆ. ಇದು 8 ವಾರಗಳಲ್ಲಿ ಕಲಿಯಬಹುದಾದ ಪ್ರಾಥಮಿಕ ಕೋರ್ಸ್. ಈ ಕೊಂಡಿ ನೋಡಿ: https://onlinecourses.swayam2. ac.in/ ntr20_ed15/preview
- ಆನ್‌ಲೈನ್ ಜಾಹೀರಾತು, ಲೆಟರ್‌ಹೆಡ್, ಲೋಗೊ, ಪೋಸ್ಟರ್, ಸುದ್ದಿಪತ್ರ ಮುಂತಾದವುಗಳ ವಿನ್ಯಾಸಕಲೆ ಪರಿಚಯಿಸುವ ಹಲವು ಉಚಿತ ಕೋರ್ಸ್‌ಗಳನ್ನು ಇನ್‌ಫೋಸಿಸ್ ಸ್ಪ್ರಿಂಗ್ ಬೋರ್ಡ್ ಒದಗಿಸುತ್ತದೆ. ಇಲ್ಲಿ ನೋಡಿ:https://infyspringboard. onwingspan.com/web/
- ಯೂಟ್ಯೂಬ್‌ನಲ್ಲಿಯೂ ಗ್ರಾಫಿಕ್ ಡಿಸೈನ್‌ನ ಸಾಧ್ಯತೆಗಳನ್ನು ಪರಿಚಯಿಸುವ ನೂರಾರು ವಿಡಿಯೊಗಳು, ಟ್ಯುಟೋರಿಯಲ್‌ಗಳಿವೆ.

WHAT AFTER SSLC / PUC?



ALL COURSES RECOGNIZED BY GOVERNMENT
FOREIGN JOB ORIENTED COURSES
GOOD COURSES FOR BETTER FUTURE!
(Approved by Government of Karnataka & Affiliated to Para Medical Board, Rajiv Gandhi University of Health Sciences, Indian Nursing Council & Karnataka Nursing Council)

JOB OPPORTUNITIES
• Self -Employments, Government Jobs, Private Jobs, Hospitals, Medical Institutes, Diagnostic Centers, Dialysis Centers, Optical Shops, Laboratories
• More Chances for Foreign Jobs • All Courses Eligible for Education Loan & Scholarships*

ADMISSION OPEN 2023 – 24
GOOD COURSES FOR BETTER FUTURE!

ALLIED SCIENCE COURSES
Eligibility : PUC – PCMB.
Duration : 4 years
• B.Sc. Renal Dialysis Technology
• B.Sc. Optometry Technology
• B.Sc. Medical Imaging Technology
• B.Sc. Medical Lab Technology
• B.Sc. Anaesthesia & Operation Theatre Technology
• B.Sc. Respiratory Care Technology
• B.Sc. Emergency & Trauma Care Technology
• BASLP Audiology & Speech Language Pathology

GENERAL NURSING & MIDWIFERY
Eligibility : PUC (Any), Duration : 3 years

BACHELOR OF PHYSIOTHERAPY
Eligibility : PUC (PCMB). Duration : 4.6 years

B.Sc. NURSING
Eligibility : PUC – PCMB.
Duration : 4 years

BACHELOR HOSPITAL ADMINISTRATION
Eligibility : PUC (any) Duration : 3 years

MASTER OF SCIENCE
• M.Sc. in Medical Lab Technology
(1. Haematolgy 2. Microbiology & 3. Biochemistry)
Eligibility : B.Sc. – MLT)
• M.Sc. Renal Dialysis Technology – (Eligibility : B.Sc. – RDT)
• Optometry Technology (Eligibility : B.Sc.–Opt.)
• M.Sc. Nursing (OBG) – Eligibility : B.Sc. (N) / PCBSc. (N)

DIPLOMA IN PARA MEDICAL SCIENCES
• DMIT : Diploma in Imaging Technology
• DMLT : Diploma in Medical Laboratory Technology
• DOT & AT : Diploma in Operation Theatre & Anaesthesia Technology
• DOT : Diploma in Ophthalmic Technology
• DDT : Diploma in Dialysis Technology
• DHI : Diploma in Health Inspector
• DMRT : Diploma in Medical Records Technology
Eligibility : SSLC (Duration : 3 Years + 3 Months
+2 /PUC Science (PCMB)
Duration : 2 years + 3 months

PIONEER IN PARA MEDICAL EDUCATION
• Best College in & around Mangalore
• Excellent academic performance in Board & University Level
• 250 Bedded Multi Speciality Parent Hospital
• Clinical Training in Government Wenlock Hospital & other affiliated Hospitals
• Qualified & experienced Teaching faculties
• Only Allied Health College with NCC Unit
• Support to cultural & sports activities
• Campus Placement Facility
• Transportation & Separate Boys and Girls Hostel Facility with food
• Overall holistic approach by providing Career Guidance, communication skill and professional Ethics *IELTS Training facility and guidance for education at foreign Universities.
• First College under RGUHS for Msc. Optometry & MSc. Renal Dialysis Technology
• Excellent Library Facility
• State of the art Laboratories for Practical Training
• Lush Greenery Campus with food court & Sports Ground (Artificial Turf Ground)

MANGALA GROUP OF EDUCATIONAL INSTITUTIONS
Mangala Campus, Vidyanagara, Neermarga Road, Pedamale Post, Mangaluru – 575 029.
Ph : 0824 – 2272277 / 2272276 / 2272232 (Office), www.mangalacollege.org
Toll Free No.: 18008899345 Ph : 9449599233 / 9632124717 / 9019734885
e-mail : mangalacollege@gmail.com / mangalamgei@gmail.com

ಸುಭಾಷಿತ
ಸುಖದಲ್ಲೂ ಭಯ, ಅಪಾಯ ಇದೆ. ಕಷ್ಟದಲ್ಲೂ ಹಿತ, ಭರವಸೆ ಇದೆ.
– ಫ್ರಾನ್ಸಿಸ್ ಬೇಕನ್

ಹೊಸ ಸಂಸತ್ ಭವನ ಉದ್ಘಾಟನೆ ಸರ್ಕಾರದ ಪಕ್ಷಪಾತಿ ನಡೆ ದುರದೃಷ್ಟಕರ

ಭಾರತದ ಹೊಸ ಸಂಸತ್ ಭವನದ ಉದ್ಘಾಟನೆಯ ಸುತ್ತ ಹಲವು ವಿವಾದಗಳು ಸುತ್ತಿಕೊಂಡಿರುವುದು ದುರದೃಷ್ಟಕರ. ಹಲವು ಪ್ರಮುಖ ವಿರೋಧ ಪಕ್ಷಗಳಿಂದ ಸಮಾರಂಭ ಬಹಿಷ್ಕಾರ, ಅಸಹಕಾರ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಸ್ವೇಚ್ಛೆಯಿಂದ ಕೈಗೊಂಡ ನಿರ್ಧಾರಗಳು ಉದ್ಘಾಟನಾ ಸಮಾರಂಭಕ್ಕೆ ಸಂಬಂಧಿಸಿ ಎದ್ದು ಕಂಡ ಅಂಶಗಳು. ಮೋದಿ ಅವರು ಹೊಸ ಕಟ್ಟಡವನ್ನು ಭಾನುವಾರ ಉದ್ಘಾಟಿಸಿ, ಸ್ಪೀಕರ್ ಪೀಠದ ಬಳಿ ಸೆಂಗೋಲ್ (ರಾಜದಂಡ) ಸ್ಥಾಪಿಸಿದರು. ಬ್ರಿಟಿಷರಿಂದ ಭಾರತಕ್ಕೆ ಅಧಿಕಾರ ಹಸ್ತಾಂತರ ಆದುದರ ಸಂಕೇತ ಈ ರಾಜದಂಡ ಎಂದು ಹೇಳಲಾಗುತ್ತಿದೆ. ಹಲವು ವಿಧಿವಿಧಾನಗಳು, ಮಂತ್ರಘೋಷ ಮತ್ತು ಪ್ರಧಾನಿಯವರಿಂದ ಸಾಷ್ಟಾಂಗ ನಮಸ್ಕಾರ ಮುಂತಾದ ಕ್ರಿಯೆಗಳೊಂದಿಗೆ ಉದ್ಘಾಟನೆಯು ಧಾರ್ಮಿಕ ಕಾರ್ಯಕ್ರಮವೊಂದರ ಸ್ವರೂಪ ಪಡೆದುಕೊಂಡಿತು. ಕಾರ್ಯಕ್ರಮಕ್ಕೆ ಸಂಬಂಧಿಸಿ ಇದು ಕೂಡ ಪ್ರಶ್ನಾರ್ಹವೇ ಆಗಿದೆ. ಪ್ರಧಾನಿ ಮೋದಿ ಅವರು ಎಲ್ಲ ವಿಧಿವಿಧಾನಗಳ ಕೇಂದ್ರ ಬಿಂದುವಾಗಿದ್ದರು. ಪ್ರಜಾಸತ್ತೆಯ ಅತ್ಯುನ್ನತ ವೇದಿಕೆಯಾದ ಸಂಸತ್ ಭವನವನ್ನು ಉದ್ಘಾಟಿಸುವ ಹಕ್ಕು ನಿಜವಾಗಿಯೂ ಇರುವುದು ದೇಶದ ಮುಖ್ಯಸ್ಥೆಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ. ಆದರೆ, ರಾಷ್ಟ್ರಪತಿಯ ಹಕ್ಕನ್ನು ನಿರ್ಲಕ್ಷಿಸಲಾಯಿತು.

ರಾಜದಂಡವನ್ನು ಸಂಸತ್ತಿನಲ್ಲಿ ಸ್ಥಾಪಿಸುವುದರೊಂದಿಗೆ ವಿವಾದಾತ್ಮಕವಾದ ಹೊಸ ಸಂಕೇತವೊಂದನ್ನು ಸೃಷ್ಟಿಸಲಾಗಿದೆ. ಚೋಳ ವಂಶದ ದೊರೆಗಳು ಬಳಸುತ್ತಿದ್ದ ರಾಜದಂಡವನ್ನು ತಮಿಳುನಾಡಿನ ಹಿಂದೂ ಮಠವೊಂದರ ಸ್ವಾಮೀಜಿಗಳು ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ಉಡುಗೊರೆಯಾಗಿ ನೀಡಿದ್ದರು. ಈ ರಾಜದಂಡವು ಅಧಿಕಾರ ಹಸ್ತಾಂತರದ ಸಂಕೇತ ಎಂದು ಸರ್ಕಾರ ಹೇಳುತ್ತಿರುವುದಕ್ಕೆ ಚಾರಿತ್ರಿಕ ಪುರಾವೆಯೇನೂ ಇಲ್ಲ. ರಾಜದಂಡವು ಒಂದು ತಟಸ್ಥ ಸಂಕೇತ. ಆದರೆ, ಈಗ ಅದಕ್ಕೆ ಸಂಬಂಧಿಸಿ ನಡೆದ ಚಟುವಟಿಕೆಗಳು ಅದನ್ನೊಂದು ಧಾರ್ಮಿಕ ಸಂಕೇತವನ್ನಾಗಿ ಮಾರ್ಪಡಿಸಿವೆ. ಜೊತೆಗೆ, ಈ ರಾಜದಂಡವು ಪ್ರಜಾಪ್ರಭುತ್ವದಲ್ಲಿ ರಾಜಸತ್ತೆಯ ಸಂಕೇತವಾಗಿ ಸಂಸತ್ತಿನಲ್ಲಿ ಉಳಿಯಲಿದೆ. ವಸಾಹತುಶಾಹಿ ಕಾಲದ ಜೊತೆಗೆ ದೇಶದ ಭವಿಷ್ಯವನ್ನು ಈ ರಾಜದಂಡವು ಬೆಸೆಯಲಿದೆ ಎಂದು ಮೋದಿ ಅವರು ಹೇಳುವ ಮೂಲಕ, ರಾಜದಂಡವು ಸಂಕೇತವಾಗಿ ಉಳಿಯಲಿದೆ ಎಂಬ ಸುಳಿವು ಕೊಟ್ಟಿದ್ದಾರೆ. ಭಾರತದ ಭೂತಕಾಲ, ವರ್ತಮಾನ ಮತ್ತು ಭವಿಷ್ಯವನ್ನು ಬೆಸೆಯುವ ಹೊಸದೊಂದು ಸಂಕೇತವನ್ನು ಸೃಷ್ಟಿಸಿಕೊಳ್ಳುವ ಅಗತ್ಯ ಇರಲಿಲ್ಲ. ಜೊತೆಗೆ, ವಿಚಾರಗಳು ಮತ್ತು ಘಟನೆಗಳನ್ನು ತಪ್ಪಾಗಿ ಬಿಂಬಿಸಿ ಸಂಕೇತವೊಂದನ್ನು ಸೃಷ್ಟಿಸಿದ್ದು ದುರದೃಷ್ಟಕರವೇ ಆಗಿದೆ. ಇದು ಮಿಥ್ಯ ಸೃಷ್ಟಿ ಹಾಗೂ ಇತ್ತೀಚಿನ ವರ್ಷಗಳಲ್ಲಿ ಆರಂಭಿಸಲಾದ ಇತಿಹಾಸ ಮರುರೂಪಿಸುವಿಕೆಯ ಭಾಗ. ಸತ್ಯಮೇವ ಜಯತೇ ಎಂಬ ಧ್ಯೇಯವನ್ನು ಹೊಂದಿರುವ ನಮ್ಮ ಸಂಸತ್ತಿನ ಪಡಸಾಲೆಯೊಳಕ್ಕೆ ಇದು ಈಗ ಪ್ರವೇಶ ಪಡೆದಿದೆ.

> ಸಂಸತ್ ಭವನವು ಎಲ್ಲ ವರ್ಗದ ಜನ ಮತ್ತು ಎಲ್ಲ ಪಕ್ಷಗಳಿಗೆ ಸೇರಿದ್ದು. ಅದಕ್ಕೆ ಅನುಗುಣವಾಗಿಯೇ ರಾಜಕೀಯ ಮತ್ತು ಪಕ್ಷಪಾತಕ್ಕೆ ಎಡೆ ಇಲ್ಲದ ರೀತಿಯಲ್ಲಿ, ರಾಷ್ಟ್ರೀಯ ಏಕತೆಯ ಸಂಕೇತದ ರೂಪದಲ್ಲಿ ಕಾರ್ಯಕ್ರಮ ನಡೆಯಬೇಕಿತ್ತು

ಸಂಸತ್ ಭವನದ ಉದ್ಘಾಟನಾ ಸಮಾರಂಭದಲ್ಲಿ ಸರ್ಕಾರ, ಆಡಳಿತಾರೂಢ ಪಕ್ಷ ಮತ್ತು ಈ ಪಕ್ಷದ ಜೊತೆಗೆ ಉತ್ತಮ ಸಂಬಂಧ ಹೊಂದಿರುವ ಪಕ್ಷಗಳು ಮಾತ್ರ ಭಾಗಿಯಾದವು. ಹಲವು ವಿರೋಧ ಪಕ್ಷಗಳ ಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಬಂದಿಲ್ಲ. ದೇಶದ ಮುಖ್ಯಸ್ಥೆ ಎಂದೇ ಪರಿಗಣಿಸಲಾಗುವ ರಾಷ್ಟ್ರಪತಿಯವರು ಸಮಾರಂಭದಲ್ಲಿ ಇರಲಿಲ್ಲ. ಒಟ್ಟಾರೆಯಾಗಿ 20 ಪಕ್ಷಗಳು ಸಮಾರಂಭವನ್ನು ಬಹಿಷ್ಕರಿಸಿದ್ದು ನ್ಯಾಯಸಮ್ಮತವಾಗಿಯೇ ಇದೆ. ವಿರೋಧ ಪಕ್ಷಗಳ ಈ ಬೇಡಿಕೆಗೆ ಸರ್ಕಾರವು ಮಣಿಯಬೇಕಿತ್ತು. ಅದರ ಬದಲಿಗೆ, ಇಡೀ ಕಾರ್ಯಕ್ರಮವು ಮೋದಿ ಅವರ ಸುತ್ತಲೇ ನಡೆಯಿತು. ಸಂಸತ್ ಭವನವು ಎಲ್ಲ ವರ್ಗದ ಜನ ಮತ್ತು ಎಲ್ಲ ಪಕ್ಷಗಳಿಗೆ ಸೇರಿದ್ದು. ಅದಕ್ಕೆ ಅನುಗುಣವಾಗಿಯೇ ರಾಜಕೀಯ ಮತ್ತು ಪಕ್ಷಪಾತಕ್ಕೆ ಎಡೆ ಇಲ್ಲದ ರೀತಿಯಲ್ಲಿ, ರಾಷ್ಟ್ರೀಯ ಏಕತೆಯ ಸಂಕೇತದ ರೂಪದಲ್ಲಿ ಕಾರ್ಯಕ್ರಮ ನಡೆಯಬೇಕಿತ್ತು. ಆದರೆ, ಸರ್ಕಾರವು ಪಕ್ಷಪಾತಿಯಾಗಿ ವರ್ತಿಸಿ, ಈ ಸಂದರ್ಭದ ಘನತೆಯು ಮುಕ್ಕಾಗುವಂತೆ ಮಾಡಿತು.

ದಿನದ ಟ್ವೀಟ್

ಸೂಕ್ತ ವ್ಯಕ್ತಿ ಯಾರು?

ಒಳ್ಳೆಯ ವಿರೋಧ ಪಕ್ಷದ ನಾಯಕ ಸರ್ಕಾರ ಅತ್ಯುತ್ತಮವಾಗಿ ನಡೆಯುವಂತೆ ಮಾಡುತ್ತಾನೆ. ಭಾವನಾತ್ಮಕ ಸಂಗತಿಗಳು ಕರ್ನಾಟಕದ ಜನರನ್ನು ಹೆಚ್ಚು ತಟ್ಟುವುದಿಲ್ಲ ಎಂಬುದು ಗೊತ್ತಾಗಿರುವಾಗ, ಬಿಜೆಪಿಯು ಒಳ್ಳೆಯ ವಾಗ್ಮಿಯೂ ಜ್ಞಾನವಂತನೂ ಆಗಿರುವವರನ್ನು ನಾಯಕನನ್ನಾಗಿ ಆಯ್ಕೆ ಮಾಡಬೇಕು. ಆ ಸ್ಥಾನಕ್ಕೆ ಸೂಕ್ತ ವ್ಯಕ್ತಿ ಯಾರು?

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ

ಜನರಿಗೆ ವಿವರಿಸಲು ನಾನು ಈಚೆಗೆ ಕೆಲವು ಸಮಯದಿಂದ ಯತ್ನಿಸುತ್ತಿರುವ ಆಸಕ್ತಿಕರ ವಿದ್ಯಮಾನವೊಂದು ಇದೆ. ಹಿಂದೂ–ಮುಸ್ಲಿಂ, ಸೆಂಗೋಲ್, ವಿಶ್ವಗುರುವಿನಂತಹ ಸಂಕಥನಗಳಿಗೆ ಬಲಿಬೀಳುವವರು ಬಡವರು ಮತ್ತು ಅಶಿಕ್ಷಿತರಲ್ಲ; ಬದಲಿಗೆ ಶ್ರೀಮಂತರು ಮತ್ತು ಮಧ್ಯವರ್ಗದವರು.

ಶಿವಂ ಶಂಕರ್ ಸಿಂಗ್, ಲೇಖಕ

25 ವರ್ಷಗಳ ಹಿಂದೆ
ಶುಕ್ರವಾರ, 29-5-1998

• ಪಾಕಿಸ್ತಾನದಿಂದಲೂ ಐದು ಅಣ್ವಸ್ತ್ರ ಸಾಧನ ಸ್ಫೋಟ

ಇಸ್ಲಾಮಾಬಾದ್, ಮೇ 28 (ಎಪಿ)– ಪೊಖ್ರಾನ್ ಅಣ್ವಸ್ತ್ರ ಸಾಧನ ಪರೀಕ್ಷೆಗೆ ಪ್ರತೀಕಾರವಾಗಿ ಪಾಕಿಸ್ತಾನ ಇಂದು ಐದು ಅಣ್ವಸ್ತ್ರ ಸಾಧನಗಳ ಪರೀಕ್ಷೆ ನಡೆಸುವ ಮೂಲಕ ದಕ್ಷಿಣ ಏಷ್ಯಾದಲ್ಲಿ ತೀವ್ರ ಶಸ್ತ್ರಾಸ್ತ್ರ ಪೈಪೋಟಿಗೆ ನಾಂದಿ ಹಾಡಿದೆ.

ಇಂದು ಸಂಜೆ ನಾಲ್ಕು ಗಂಟೆಗೆ ದಕ್ಷಿಣ ಬಲೂಚಿಸ್ತಾನ ಪ್ರದೇಶದ ಚಗೈ ಗುಡ್ಡಗಾಡು ಪ್ರದೇಶದಲ್ಲಿ ಈ ಪರೀಕ್ಷಾರ್ಥ ಪ್ರಯೋಗ ನಡೆಸಿತು ಎಂದು ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ಅವರು ಪಾಕಿಸ್ತಾನ ಟೆಲಿವಿಷನ್‌ನ ರಾಷ್ಟ್ರೀಯ ಜಾಲದಲ್ಲಿ ಘೋಷಿಸಿದರು. ಇಂದಿನ ಸ್ಫೋಟದೊಂದಿಗೆ ಪಾಕಿಸ್ತಾನ ಅಣ್ವಸ್ತ್ರ ಸಾಮರ್ಥ್ಯದಲ್ಲಿ ಭಾರತವನ್ನು ಸರಿಗಟ್ಟಿದೆ ಎಂದು ಹೇಳಿದರು.

• ಪರಿಸ್ಥಿತಿ ಎದುರಿಸಲು ಭಾರತ ಸಿದ್ಧ: ಪ್ರಧಾನಿ ವಾಜಪೇಯಿ

ನವದೆಹಲಿ, ಮೇ 28 (ಯುಎನ್ಐ)– ಪಾಕಿಸ್ತಾನ ಇಂದು ಐದು ಅಣ್ವಸ್ತ್ರ ಸಾಧನ ಪ್ರಯೋಗ ನಡೆಸಿದ ನಂತರ ‘ಹೊಸ ಪರಿಸ್ಥಿತಿ’ ನಿರ್ಮಾಣವಾಗಿದೆ ಎಂಬುದನ್ನು ಒಪ್ಪಿಕೊಂಡ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು, ಯಾವುದೇ ಸನ್ನಿವೇಶವನ್ನು ಎದುರಿಸಲು ಭಾರತ ಸಿದ್ಧವಿದೆ ಎಂದು ತಿಳಿಸಿದರು.

ಪರಿಸ್ಥಿತಿ ಹಿನ್ನೆಲೆಯಲ್ಲಿ ಸಂಸತ್ ಕಲಾಪವನ್ನು ಮುಂದೂಡಿದ ನಂತರ ತುರ್ತು ಸಂಪುಟ ಸಭೆ ನಡೆಸಿದ ಪ್ರಧಾನಿಯವರು, ‘ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಪಾಕಿಸ್ತಾನದ ಅಣ್ವಸ್ತ್ರ ಪರೀಕ್ಷೆ ಅನಿರೀಕ್ಷಿತವಲ್ಲ, ಪರಿಸ್ಥಿತಿ ಎದುರಿಸಲು ನಾವು ಬದ್ಧರಾಗಿಯೇ ಇದ್ದೆವು’ ಎಂದು ಹೇಳಿದರು.

50 ವರ್ಷಗಳ ಹಿಂದೆ
ಮಂಗಳವಾರ, 29-5-1973

• ಸನ್ನಿವೇಶಕ್ಕೆ ಬಲಿಯಾದ ಸಚಿವ ಕಿತ್ತೂರು: ರಂಗನಾಥ್ ವಿವರಣೆ

ಹುಬ್ಬಳ್ಳಿ, ಮೇ 28– ಸುಮಿತ್ರಾ ದೇಸಾಯಿ ಪ್ರಕರಣದ ಸಂಬಂಧದಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಶ್ರೀ ಆರ್.ಡಿ. ಕಿತ್ತೂರು ಅವರು ‘ಸನ್ನಿವೇಶಕ್ಕೆ ಬಲಿಯಾದವರು’ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ.ಎಚ್. ರಂಗನಾಥ್ ಅವರು ಇಂದು ಇಲ್ಲಿ ತಿಳಿಸಿದರು.

ನಾಪತ್ತೆಯಾಗಿರುವ ಸುಮಿತ್ರಾ ದೇಸಾಯಿ ಬಗ್ಗೆ ಗೋವಾದಿಂದ ಪ್ರಕಟವಾಗುತ್ತಿರುವ ಮರಾಠಿ ಪತ್ರಿಕೆಯೊಂದು ಪೂರ್ಣ ಚಿತ್ರ ನೀಡಿದೆಯೆಂದು ಶ್ರೀ ರಂಗನಾಥ್ ಅವರು, ನಿನ್ನೆ ಬೆಳಗಾವಿಯಲ್ಲಿ ಸದರಿ ಪತ್ರಿಕಾ ವರದಿಯ ವಿವರಗಳನ್ನು ತಾವು ಅರಿತಿದ್ದಾಗಿ ಹೇಳಿದರು.

ಕಿತ್ತೂರರ ರಾಜೀನಾಮೆ ಕಾರಣ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟಿನ ಶಾಸಕರಲ್ಲಿ ಅಸಮಾಧಾನ ಮೂಡಿದೆಯೆಂಬ ವರದಿಗಳನ್ನು ಅವರು ತಿರಸ್ಕರಿಸಿದರು.

• ಇನ್ನೂ ಸುಳಿವು ಸಿಕ್ಕದ ಸುಮಿತ್ರಾ

ಬೆಂಗಳೂರು, ಮೇ 28– ಕಣ್ಮರೆ ಆಗಿ ಹತ್ತು ದಿನಗಳಾದರೂ ಕುಮಾರಿ ಸುಮಿತ್ರಾ ದೇಸಾಯಿ ಅವರ ಸುಳಿವು ಇನ್ನೂ ಸಿಕ್ಕಿಲ್ಲ.

ರಾಜ್ಯದ ಗೃಹ ಶಾಖೆಯ ರಾಜ್ಯ ಸಚಿವ ಶ್ರೀ ಆರ್.ಡಿ. ಕಿತ್ತೂರು ಅವರ ರಾಜೀನಾಮೆಗೆ ಕಾರಣರಾದ ಕುಮಾರಿ ದೇಸಾಯಿ ಅವರನ್ನು ಪತ್ತೆ ಮಾಡಲು ಪೊಲೀಸರು ಅವಿರತ ಪ್ರಯತ್ನವನ್ನು ಮುಂದುವರಿಸಿದ್ದಾರೆ.

ದೆಹಲಿ, ಅಹಮದಾಬಾದ್, ಪಣಜಿ ನಗರಗಳಿಂದ ಕುಮಾರಿ ದೇಸಾಯಿ ಅವರ ಬಗ್ಗೆ ಈಗಾಗಲೇ ತಿಳಿದು ಬಂದಿರುವ ಸಂಗತಿಗಳನ್ನು ಬಿಟ್ಟರೆ ಹೆಚ್ಚಿನ ಮಾಹಿತಿ ಏನೂ ಸಿಕ್ಕಿಲ್ಲ ಎಂದು ಉನ್ನತ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಅನಗತ್ಯವಾಗಿ ಮಾತಾಡುವವರ ಬಾಯಿಗೆ ಬೀಗ ಹಾಕದಿದ್ದರೆ ನಷ್ಟ ಗ್ಯಾರಂಟಿ

ಗ್ಯಾರಂಟಿ ಇಲ್ಲದ ಮುಖ್ಯಮಂತ್ರಿ ಸ್ಥಾನ!

ಅನುಸಂಧಾನ

ರವೀಂದ್ರ ಭಟ್ಟ

ವಿಧಾನಸಭೆ ಕದನ ಮುಗಿದಿದೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾರೆ. ಪೂರ್ಣ ಪ್ರಮಾಣದ ಸಚಿವ ಸಂಪುಟವೂ ಅಸ್ತಿತ್ವಕ್ಕೆ ಬಂದಿದೆ. ಅಸಮಾಧಾನ ವ್ಯಕ್ತಪಡಿಸಿದವರಿಗೆ ಚೌಕಾಶಿ ಮಾಡುವುದಕ್ಕೂ ಅವಕಾಶ ಇಲ್ಲದಂತೆ ಎಲ್ಲ 34 ಸ್ಥಾನಗಳನ್ನೂ ಭರ್ತಿ ಮಾಡಲಾಗಿದೆ. ಸಂಪೂರ್ಣ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದಿರುವುದು ಕಳೆದ ಕೆಲವು ದಶಕಗಳಲ್ಲಿ ಇದೇ ಮೊದಲು. ಆದರೂ ಮುಖ್ಯಮಂತ್ರಿ ಪೂರ್ಣಾವಧಿ ಇರುತ್ತಾರೋ ಇಲ್ಲವೋ ಎಂಬ ಚರ್ಚೆ ಮಾತ್ರ ನಿಂತಿಲ್ಲ.

ಸಂಪೂರ್ಣ ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂದಿದ್ದೇ ಅಧಿಕಾರ ಹಂಚಿಕೆಯ ಸೂತ್ರದ ಆಧಾರದಲ್ಲಿ ಎಂದೇ ವಿಶ್ಲೇಷಿಸಲಾಗುತ್ತಿದೆ. ಈಗಿನ ಸಂಪುಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈ ಮೇಲಾಗಿದೆ. ಇದಕ್ಕೆ ಕಾರಣ ಮೊದಲ ಅವಧಿಯಲ್ಲಿ ಸಿದ್ದರಾಮಯ್ಯ ಬಯಸಿದವರಿಗೆ ಮಂತ್ರಿ ಸ್ಥಾನ ಸಿಕ್ಕಿದೆ. ಎರಡನೇ ಅವಧಿಯಲ್ಲಿ ಡಿ.ಕೆ. ಶಿವಕುಮಾರ್ ಆಯ್ಕೆಗೆ ಆದ್ಯತೆ ಸಿಗುತ್ತದೆ ಎಂದೇ ಭಾವಿಸಲಾಗಿದೆ. ಆದರೆ ಕಾಂಗ್ರೆಸ್‌ನ ಕೆಲವು ಮೂಲಗಳು ಮಾತ್ರ ಇದನ್ನು ಒಪ್ಪುತ್ತಿಲ್ಲ. ‘ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಮುಖ್ಯಮಂತ್ರಿಯಾಗಿರ್ತಾರೆ. ಮಂತ್ರಿಗಳ ಆಯ್ಕೆ ಅವರದ್ದೇ ಪರಮಾಧಿಕಾರ. ಅದರಂತೆ ಅವರು ತಮ್ಮ ಮಂತ್ರಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ’ ಎಂದು ಹೇಳುತ್ತವೆ. ಈ ಮಾತನ್ನು ಡಿ.ಕೆ.ಶಿವಕುಮಾರ್ ಬಣ ಒಪ್ಪುತ್ತಿಲ್ಲ. ‘ಅಧಿಕಾರ ಹಂಚಿಕೆ ಸೂತ್ರ ಈಗಾಗಲೇ ನಿಗದಿಯಾಗಿದೆ. ಅದರಂತೆಯೇ ಎಲ್ಲವೂ ನಡೆಯುತ್ತಿದೆ’ ಎಂದು ಹೇಳುತ್ತಿದೆ ಈ ಬಣ. ಈ ಬಣಗಳ ಗುದ್ದಾಟದಲ್ಲಿ ಮುಖ್ಯಮಂತ್ರಿ ಕುರ್ಚಿ ಅಲುಗಾಟದಲ್ಲಿಯೇ ಇದೆ.

ವಿಧಾನಸಭೆ ಚುನಾವಣೆ ಘೋಷಣೆಯಾಗುವುದಕ್ಕೆ ಮೊದಲಿನಿಂದಲೂ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಅಧಿಕಾರಕ್ಕಾಗಿ ಕಿತ್ತಾಡುತ್ತಾರೆ ಎಂಬ ಸಂಶಯ ಜನರ ಮನದಲ್ಲಿ ಇತ್ತು. ವಿರೋಧ ಪಕ್ಷಗಳೂ ಇದನ್ನೇ ಹೇಳುತ್ತಿದ್ದವು. ಆದರೆ ಚುನಾವಣೆ ಹೊತ್ತಿನಲ್ಲಿ ಇಬ್ಬರೂ ಒಂದಾದರು. ಅದು ಬಲವಂತದ ಮಾಘಸ್ನಾನವಾಗಿದ್ದರೂ ಬಹಿರಂಗದಲ್ಲಿ ಏನೂ ಗೊತ್ತಾಗದಂತೆ ನಡೆದುಕೊಂಡರು. ಅಲ್ಲಲ್ಲಿ ಇಬ್ಬರೂ ಮುಖ್ಯಮಂತ್ರಿ ಆಸೆಯನ್ನು ಬಹಿರಂಗವಾಗಿ ಪ್ರಕಟಿಸಿದ್ದರೂ ಮುಖ್ಯಮಂತ್ರಿಯಾಗುವ ಕನಸು ಕಾಣುವ ಹಕ್ಕು ಎಲ್ಲರಿಗೂ ಇದೆ ಎಂದು ಅದನ್ನು ತೇಲಿಸಲಾಗಿತ್ತು. ಚುನಾವಣೆ ಫಲಿತಾಂಶ ಪ್ರಕಟವಾಗಿ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ನಡೆಯುವಾಗ ಬಣ್ಣ ಬಯಲಾಯಿತು. ಅಂತೂ ಇಂತೂ ಅಳೆದು ತೂಗಿ ಸಿದ್ದರಾಮಯ್ಯ ಅವರನ್ನೇ ಮುಖ್ಯಮಂತ್ರಿ ಎಂದು ಘೋಷಿಸಲಾಯಿತು. ಸಿದ್ದರಾಮಯ್ಯ ಪ್ರಮಾಣವಚನವನ್ನೂ ಸ್ವೀಕರಿಸಿದರು. ಅಲ್ಲಿಗೆ ಒಂದು ಅಧ್ಯಾಯ ಮುಗಿಯಿತು. ಆದರೆ ಸಿದ್ದರಾಮಯ್ಯ ಎಷ್ಟು ದಿನಗಳ ಮುಖ್ಯಮಂತ್ರಿ ಎಂಬ ಪ್ರಶ್ನೆ ಹಾಗೆಯೇ ಉಳಿಯಿತು.

2013ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿ ಆದಾಗ ಇಂತಹ ಪ್ರಶ್ನೆ ಉದ್ಭವಿಸಿರಲಿಲ್ಲ. ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಮುಖ್ಯಮಂತ್ರಿಯಾಗಿದ್ದರು. ಆದರೆ 2018ರಲ್ಲಿ ಜೆಡಿಎಸ್-ಕಾಂಗ್ರೆಸ್ ಮೈತ್ರಿಕೂಟದ ಮುಖ್ಯಮಂತ್ರಿಯಾಗಿ ಎಚ್.ಡಿ.ಕುಮಾರಸ್ವಾಮಿ ಅಧಿಕಾರ ಸ್ವೀಕರಿಸಿದಾಗಲೂ ಇಂತಹದೇ ಪ್ರಶ್ನೆ ಇತ್ತು. ಮೊದಲ ಮೂರು ತಿಂಗಳು ಹನಿಮೂನ್ ಪೀರಿಯಡ್ ಮುಗಿದ ನಂತರ ಮುಖ್ಯಮಂತ್ರಿ ಬದಲಾವಣೆಯ ಮಾತುಗಳು ಶುರುವಾದವು. ಅಂತೂ ಇಂತೂ ಒಂದು ವರ್ಷದಲ್ಲಿ ಕುಮಾರಸ್ವಾಮಿ ನೇತೃತ್ವದ ಸರ್ಕಾರ ಪತನಗೊಂಡು ಯಡಿಯೂರಪ್ಪ ನೇತೃತ್ವದ ಸರ್ಕಾರ ಬಂದಾಗಲೂ ಮುಖ್ಯಮಂತ್ರಿ ಸ್ಥಾನದ ಸ್ಥಿರತೆ ಬಗ್ಗೆ ಪ್ರಶ್ನೆಗಳು ಇದ್ದವು. ಯಡಿಯೂರಪ್ಪ ಕೂಡ ಬಹಳ ದಿನ ಮುಖ್ಯಮಂತ್ರಿ ಹುದ್ದೆಯಲ್ಲಿ ಇರುವುದಿಲ್ಲ ಎಂದೇ ಹೇಳಲಾಗುತ್ತಿತ್ತು. ಅದು ನಿಜವೂ ಆಯಿತು. ಯಡಿಯೂರಪ್ಪ ಹೋಗಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಯಾದರು. ಆಗಲೂ ಈ ಚರ್ಚೆ ನಿಲ್ಲಲಿಲ್ಲ. ಬೊಮ್ಮಾಯಿ ಕೂಡ ಬಹಳ ದಿನ ಇರುವುದಿಲ್ಲ. ಮತ್ತೊಬ್ಬರು ಬರುತ್ತಾರೆ ಎಂಬ ಗುಸುಗುಸು ಕೊನೆಯ ಕಾಲದವರೆಗೂ ಇತ್ತು. ಇತ್ತೀಚಿನ ದಿನಗಳಲ್ಲಿ ಮುಖ್ಯಮಂತ್ರಿ ಕುರ್ಚಿ ಎನ್ನುವುದು ಮ್ಯೂಜಿಕಲ್ ಚೇರ್ ತರಹ ಆಗಿಬಿಟ್ಟಿದೆ.

2013ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣ ಬಹುಮತ ಇತ್ತು. 2018ರಲ್ಲಿ ಅತಂತ್ರ ವಿಧಾನಸಭೆ ನಿರ್ಮಾಣ ಆಗಿತ್ತು. ಬಿಜೆಪಿ ಅತಿ ದೊಡ್ಡ ಪಕ್ಷವಾಗಿತ್ತು. 2023ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಜೀರ್ಣವಾಗುವಷ್ಟು ಬಹುಮತ ಇದೆ. ಇಷ್ಟೊಂದು ಬಹುಮತ ಇದ್ದರೂ ಮುಖ್ಯಮಂತ್ರಿ ಸ್ಥಾನದ ಹಂಚಿಕೆಯ ಪ್ರಶ್ನೆ ಬಗೆಹರಿದಿಲ್ಲ. ಮತದಾರರಲ್ಲಿ ಶಂಕೆ ಇದ್ದೇ ಇದೆ. ಸಿದ್ದರಾಮಯ್ಯ, ಶಿವಕುಮಾರ್ ಇಬ್ಬರೂ ಒಂದಾಗಿ ಇದನ್ನು ಬಗೆಹರಿಸದಿದ್ದರೆ ಮತದಾರ ಮತ್ತೆ ಪೆಟ್ಟು ಕೊಡಲು ಸಿದ್ಧನಾಗಿಯೇ ಇರುತ್ತಾನೆ.

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಯಾಗಿ ಶಿವಕುಮಾರ್ ಹಾಗೂ ಎಂಟು ಮಂದಿ ಸಚಿವರು ಪ್ರಮಾಣ ವಚನ ಸ್ವೀಕರಿಸಿದ ನಂತರ ಸಚಿವ ಎಂ.ಬಿ.ಪಾಟೀಲ ಅವರು ‘ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿರ್ತಾರೆ’ ಎಂಬ ಹೇಳಿಕೆಯನ್ನು ನೀಡುವ ಮೂಲಕ ಕಿಡಿ ಹೊತ್ತಿಸಿದರು. ಇದಕ್ಕೆ ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು. ಬಿಜೆಪಿ ಮುಖಂಡರೂ ಇದಕ್ಕೆ ಸಾಕಷ್ಟು ತುಪ್ಪ ಸುರಿದರು. ಮಾರನೇ ದಿನ ಕೂಡ ಎಂ.ಬಿ. ಪಾಟೀಲ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡರು. ‘ಹೈಕಮಾಂಡ್ ಹೇಳಿದ್ದನ್ನೇ ನಾನು ಹೇಳ್ತಿದೀನಿ’ ಎಂದು ಹೇಳಿದರು. ಇದು ಎಷ್ಟು ತೀವ್ರವಾಯಿತು ಎಂದರೆ ಹೈಕಮಾಂಡ್ ಮಧ್ಯಪ್ರವೇಶಿಸಿ ಮುಖ್ಯಮಂತ್ರಿ ಸ್ಥಾನದ ಬಗ್ಗೆ ಯಾರೂ ಮಾತನಾಡಬಾರದು ಎಂದು ಕಟ್ಟೆಚ್ಚರ ನೀಡಿತು.

ಈಗ ಇತಿಹಾಸ ಬೇಗ ಬೇಗ ಮರುಕಳಿಸುತ್ತದೆ. ಬಸವರಾಜ ಬೊಮ್ಮಾಯಿ ಕಾಲದಲ್ಲಿಯೂ ಹೀಗೆಯೇ ಆಗಿತ್ತು. ಬೊಮ್ಮಾಯಿ ಸಂಪುಟದಲ್ಲಿದ್ದ ಕೆಲವರು ಬೇಕಾಬಿಟ್ಟಿ ಮಾತನಾಡುತ್ತಿದ್ದರು. ಕೂಗುಮಾರಿಯಂತೆ ಇದ್ದ ಕೆಲವು ಶಾಸಕರಂತೂ ಲಂಗುಲಗಾಮು ಇಲ್ಲದೆ ಹೇಳಿಕೆ ನೀಡುತ್ತಿದ್ದರು. ತಮ್ಮ ಹೇಳಿಕೆಯ ಮೂಲಕ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ಮುಜುಗರ ಉಂಟು ಮಾಡುತ್ತಿದ್ದರು. ಭ್ರಮೆಯಲ್ಲಿಯೇ ಇದ್ದ ಬಿಜೆಪಿ ಮುಖಂಡರಿಗೆ ಅದರ ಅರಿವು ಆಗ ಆಗಿರಲಿಲ್ಲ. ವಿಧಾನಸಭೆ ಫಲಿತಾಂಶ ಬಹುಶಃ ಅರಿವು ಮೂಡಿಸಿರಬಹುದು. ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಇವರನ್ನೆಲ್ಲಾ ನಿಯಂತ್ರಣದಲ್ಲಿ ಇಡಲು ಸಾಧ್ಯವೂ ಆಗಿರಲಿಲ್ಲ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದು ಇನ್ನೂ ಎರಡು ವಾರ ಕಳೆದಿಲ್ಲ. ಆಗಲೇ ಕೆಲವು ಸಚಿವರು ಅನಗತ್ಯ ಮಾತುಗಳನ್ನು ಬಿಡುಬೀಸಾಗಿ ನೀಡತೊಡಗಿದ್ದಾರೆ. ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿರ್ತಾರೆ ಎಂದು ಹೇಳುವುದು ಅನಗತ್ಯವಾಗಿತ್ತು. ಅದೇ ರೀತಿ ಪ್ರಿಯಾಂಕ್ ಖರ್ಗೆ ಅವರು ‘ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಎಲ್ಲ ವಿವಾದಾತ್ಮಕ ಕಾಯ್ದೆಗಳನ್ನು ವಾಪಸು ಪಡೆಯುತ್ತೇವೆ. ಸಂವಿಧಾನ ವಿರೋಧಿ, ರಾಷ್ಟ್ರ ವಿರೋಧಿ ಚಟುವಟಿಕೆ ನಡೆಸುವ ಯಾವುದೇ ಸಂಘಟನೆ, ಅದು ಆರ್‌ಎಸ್‌ಎಸ್ ಆಗಿದ್ದರೂ ಕೂಡ ನಿಷೇಧಿಸುತ್ತೇವೆ’ ಎಂಬ ಹೇಳಿಕೆಯನ್ನು ನೀಡಿದರು. ಇದೂ ಕೂಡ ಅನಗತ್ಯವಾಗಿತ್ತು.

ತಾನು ನೀಡಿದ್ದ ಗ್ಯಾರಂಟಿಗಳನ್ನು ಎರಡನೇ ಸಚಿವ ಸಂಪುಟ ಸಭೆಯಲ್ಲಿಯೂ ಜಾರಿಗೆ ತರಲು ಸಾಧ್ಯವಾಗದೆ ಮತದಾರರ ಕೆಂಗಣ್ಣಿಗೆ ಗುರಿಯಾಗಿರುವ ಮತ್ತು ವಿರೋಧ ಪಕ್ಷವಾದ ಬಿಜೆಪಿಗೆ ಬಲವಾದ ಅಸ್ತ್ರವನ್ನು ನೀಡಿರುವಾಗ ಆರ್‌ಎಸ್‌ಎಸ್, ಬಜರಂಗದಳದ ವಿಷಯವನ್ನೂ ಪ್ರಸ್ತಾಪಿಸಿ ಇನ್ನಷ್ಟು ಅಸ್ತ್ರಗಳನ್ನು ಕೊಡುವುದು ನಿಜ ರಾಜಕಾರಣಿಗಳ ಲಕ್ಷಣವಲ್ಲ. ತಪ್ಪಾಗಿದ್ದನ್ನು ಸರಿ ಮಾಡಬೇಕು. ಅದನ್ನು ಟಾಂ ಟಾಂ ಮಾಡುತ್ತಾ ಹೋಗಬೇಕಿಲ್ಲ. ಇದು ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಮಂತ್ರಿಗಳಿಗೆ ಅರ್ಥವಾದರೆ ಅವರಿಗೂ ಕ್ಷೇಮ. ಜನರಿಗೂ ಕ್ಷೇಮ.

ಕರ್ನಾಟಕದ ಜನರು ಈಗಾಗಲೇ ಹಿಜಾಬ್, ಆಜಾನ್, ಹಲಾಲ್, ಮುಸ್ಲಿಂ ವ್ಯಾಪಾರಿಗಳಿಗೆ ವಿರೋಧ, ಕೋಮು ಆಧಾರಿತ ಹತ್ಯೆ ಮುಂತಾದವುಗಳಿಂದ ಬಹಳಷ್ಟು ನೊಂದಿದ್ದಾರೆ. ‘ಸರ್ವ ಜನಾಂಗದ ಶಾಂತಿಯ ತೋಟ’ ನಿರ್ಮಿಸುವುದಾಗಿ ತನ್ನ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ ಕಾಂಗ್ರೆಸ್ ಪಕ್ಷ ಆ ನಿಟ್ಟಿನತ್ತ ಹೆಜ್ಜೆ ಇಡಬೇಕೇ ವಿನಾ ಬಾಯಿ ಬಡಾಯಿ ಸಲ್ಲ. ಮತದಾರರಿಗೆ ಎಲ್ಲರ ಬಾಯಿ ಮುಚ್ಚಿಸುವ ಕಲೆ ಗೊತ್ತು. ಸಚಿವರು ಅಷ್ಟು ತಿಳಿದುಕೊಂಡರೆ ಸಾಕು.

ಚುರುಮುರಿ

ರಾಜದಂಡ!

• ಬಿ.ಎನ್. ಮಲ್ಲೇಶ್

‘ಲೇ ತೆಪರ, ನಿನ್ನಿ ಹೊಸ ಸಂಸತ್ ಭವನ ಉದ್ಘಾಟನಿ ಆತಲ್ಲ, ಸ್ಪೀಕರ್ ಕುರ್ಚಿ ಪಕ್ಕ ರಾಜದಂಡ ಅಂತ ಅದೇನೋ ಇಟ್ರಲ್ಲ, ಏನಲೆ ಅದು?’ ಗುಡ್ಡೆ ಕೇಳಿದ.

‘ಅದಾ? ಸೆಂಗೋಲ್ ಅಂತ. ರಾಜದಂಡ, ನ್ಯಾಯದಂಡ ಅಂತಾನೂ ಕರೀತಾರೆ. ಅಧಿಕಾರ ಹಸ್ತಾಂತರ ಮಾಡೋವಾಗ ಕೊಡ್ತಾರಂತಪ...’ ತೆಪರೇಸಿ ವಿವರಿಸಿದ.

‘ಮತ್ತೆ ಅದನ್ಯಾಕೆ ಸ್ಪೀಕರ್ ಕುರ್ಚಿ ಪಕ್ಕ ಇಟ್ರು?’

‘ಸ್ಪೀಕರ್ ಕುರ್ಚಿ ಅಂದ್ರೆ ನ್ಯಾಯಪೀಠ ಇದ್ದಂಗೆ. ರಾಜದಂಡ ಪಕ್ಕದಾಗೇ ಇದ್ರೆ ಎಲ್ರಿಗೂ ನ್ಯಾಯ ಸಿಗ್ತತಿ, ಯಾರ್ಗೂ ಅನ್ಯಾಯ ಆಗಲ್ಲ ಅಂತ ಇಟ್ಟರಬೋದು...’

‘ಅದಕ್ಕೆ ಅಷ್ಟ್ ಪವರ್ ಐತಾ?’ ಕೊಟ್ರೇಶಿ ಕೊಕ್ಕೆ.

‘ಮತ್ತೆ? ಏನಂತ ತಿಳಿದಿದಿ? ಬೆಂಕಿ ಇದ್ದಂಗೆ. ದೇವರ ಕೈಯಾಗೂ ಅಂಥದು ಐತಿ ಅಂತ ಮೊನ್ನಿ ಯಾರೋ ವಾಟ್ಸಪ್‌ನಾಗೆ ಹಾಕಿದ್ರಪ...’

‘ಹೌದಾ? ಹಂಗಿದ್ರೆ ಅಂಥ ರಾಜದಂಡಗಳನ್ನ ಎಲ್ಲ ಕೋರ್ಟು, ಪೊಲೀಸ್ ಸ್ಟೇಷನ್ ಒಳಗೂ ಒಂದೊಂದು ಇಟ್ರೆ ಒಳ್ಳೇದಲ್ವ? ಎಲ್ರಿಗೂ ನ್ಯಾಯ ಕೊಡುಸ್ಬೋದು...’

‘ನಿನ್ತಲಿ, ಅವು ಹಂಗೆ ಎಲ್ಲ ಕಡಿ ಸಿಗಲ್ಲ, ದೇವರ ಕೈಯಾಗಿರೋದು ಅಂದ್ರ ಏನಂತ ತಿಳಿದಿದಿ?’ ತೆಪರೇಸಿ ರೇಗಿದ.

‘ನೀನೊಬ್ಬ, ಅಂಥ ರಾಜದಂಡ ನಮ್ ದುಬ್ಬೀರನ ಮನ್ಯಾಗೂ ಐತಿ ಗೊತ್ತಾ?’ ಕೊಟ್ರೇಶಿ ನಕ್ಕ.

‘ಹೌದಾ? ದೇವರ ಫೋಟೊದಾಗ?’

‘ಅಲ್ಲ...’

‘ಮತ್ತೆ ನಿಜವಾಗ್ಲುನಾ? ಚಿನ್ನದ್ದಾ?’

‘ಅಲ್ಲ ಮರದ್ದು, ಹಳೇ ಕಾಲದ್ದು... ದುಬ್ಬೀರ ಮದುವಿ ಆದಾಗ ಮನಿ ಅಧಿಕಾರ ಹಸ್ತಾಂತರ ಆತಲ್ಲ, ಅವಾಗಿಂದ ಅವನ ಹೆಂಡ್ತಿ ಕೈಯಾಗೈತಿ. ಅದನ್ನ ಕಂಡ್ರೆ ದುಬ್ಬೀರಂಗೆ ಈಗ್ಲೂ ಭಯ, ಭಕ್ತಿ... ಬೇಕಿದ್ರೆ ಕೇಳಿ ನೋಡು...’

‘ಹೌದಾ? ಅದೆಂಥದಲೆ ಅದು...?’ ತೆಪರೇಸಿಗೆ ಅರ್ಥವಾಗಲಿಲ್ಲ.

‘ಅರ್ಥ ಆಗ್ಲಿಲ್ವಾ? ಲಟ್ಟಣಿಗಿ ಕಣಲೆ... ರಾಜದಂಡ ಅಲ್ಲ, ರಾಣಿದಂಡ...’

ಕೊಟ್ರೇಶಿ ಕೀಟಲೆಗೆ ‘ಥೂ ನಿನ್ನ’ ಎಂದ ದುಬ್ಬೀರನಿಗೂ ನಗು ತಡೆಯಲಾಗಲಿಲ್ಲ.

ಚರ್ಚೆ

ಒಡೆದಾಳುವವರಿಗೆ ಉತ್ತರ

ಕಾಂಗ್ರೆಸ್ಸಿನಿಂದಲೇ ಅತ್ಯಂತ ಹೆಚ್ಚು ಲಿಂಗಾಯತರು ಗೆದ್ದಿದ್ದಾರೆ ಎಂದರೆ, ಲಿಂಗಾಯತರಲ್ಲಿ ಹೆಚ್ಚಿನವರು ಕಾಂಗ್ರೆಸ್ಸಿಗೆ ವೋಟು ಹಾಕಿದ್ದಾರೆ ಎಂದರ್ಥವೇ?

• ವಿಕಾಸ್ ಮೌರ್ಯ

‘ಅವರು ಮಾಂಗ್‌ರನ್ನು ಬೆಂಬಲಿಸಿ ಮಹಾರರ ವಿರುದ್ಧ ಎತ್ತಿಕಟ್ಟುತ್ತಾರೆ. ಚಮ್ಮಾರರನ್ನು ಬೆಂಬಲಿಸಿ ಮಹಾರ್ ಮತ್ತು ಮಾಂಗ್‌ರ ವಿರುದ್ಧ ಎತ್ತಿಕಟ್ಟುತ್ತಾರೆ. ನಮ್ಮ ಏಕತೆಯನ್ನು ಮುರಿಯಲು ಅವರ ತಾರತಮ್ಯ ಸಿದ್ಧಾಂತವನ್ನು ನಮ್ಮೊಳಗೇ ಹರಡುತ್ತಾರೆ’ –ಹೀಗೆ ಡಾ. ಬಿ.ಆರ್.ಅಂಬೇಡ್ಕರ್ ಅವರು ದಲಿತ ಸಮುದಾಯಗಳಿಗೆ ಸಂದೇಶ ನೀಡುವುದರ ಜೊತೆಗೆ ಎಚ್ಚರಿಸಿದ್ದರು. ಇಲ್ಲಿ ‘ಅವರು’ ಎಂದರೆ, ಜಾತಿ ಸಾಮರಸ್ಯ ಮತ್ತು ಜಾತಿ ವಿನಾಶದ ದಿಕ್ಕಿಗೆ ವಿರುದ್ಧವಾಗಿ ಸನಾತನ, ಸ್ವಜನಪಕ್ಷಪಾತದ ಚಾತುರ್ವರ್ಣ ಪದ್ಧತಿಯೆಡೆಗೆ ಸಮಾಜವನ್ನು ಸದಾ ಎಳೆದೊಯ್ಯಲು ಇತರರನ್ನು ಎತ್ತಿಕಟ್ಟುವ ‘ಮನುವಾದಿ’ ಪರಂಪರೆ ಎಂದರ್ಥ. ‘ಮೀಸಲು ಕ್ಷೇತ್ರ: ಒಳರಾಜಕಾರಣ’ ಎಂಬ ವಾದಿರಾಜ್ ಅವರ ಲೇಖನವು (ಪ್ರ.ವಾ., ಮೇ 23) ಬಾಬಾಸಾಹೇಬರ ಈ ಮಾತುಗಳನ್ನು ಇನ್ನೊಮ್ಮೆ ನೆನಪಿಸುವಂತಿದೆ.

ಮೀಸಲಾತಿಯ ಪ್ರಮಾಣ ಹೆಚ್ಚಳ, ಒಳಮೀಸಲಾತಿ ಶಿಫಾರಸು, ಬಂಜಾರ ಸಮುದಾಯದ ಪ್ರತಿಭಟನೆಗಳು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಪರಿಶಿಷ್ಟ ಜಾತಿಯ (ಎಸ್‌ಸಿ) ಮೀಸಲು ಕ್ಷೇತ್ರಗಳ ಮೇಲೆ ಪ್ರಭಾವ ಬೀರಿದವು ಎಂದಷ್ಟೇ ಲೇಖಕರು ಹೇಳುತ್ತಾರೆ. ಆದರೆ ಮೀಸಲಾತಿ ಹೆಚ್ಚಳ ಮತ್ತು ಒಳಮೀಸಲಾತಿ ಶಿಫಾರಸಿಗೆ ಸಂಬಂಧಿಸಿದ ವಿಚಾರದಲ್ಲಿ ದಲಿತರಿಗೆ ಬಿಜೆಪಿ ಕೊಟ್ಟ ಮಾತು ತಪ್ಪಿದ್ದನ್ನು ಮರೆಮಾಚುತ್ತಾರೆ. ಮೊದಲ ಬಾರಿಗೆ, ಸಂವಿಧಾನಬದ್ಧವಾದ ವಿಧಾನಸೌಧವನ್ನು ಬಿಟ್ಟು ಸಾಂಪ್ರದಾಯಿಕವಾದ ಆರ್‌ಎಸ್‌ಎಸ್ ಕಚೇರಿ, ಬ್ರಾಹ್ಮಣ ಮಠಗಳ ಸುತ್ತ ದಲಿತರನ್ನು ಅಲೆದಾಡಿಸಿ ಅರ್ಧ ದಾರಿಯಲ್ಲಿಯೇ ಕೈಬಿಟ್ಟಿದ್ದರ ಬಗ್ಗೆ ತುಟಿ ಬಿಚ್ಚುವುದಿಲ್ಲ. ದಲಿತ ಸಂಘರ್ಷ ಸಮಿತಿಯು ಅಮರಜ್ಯೋತಿ ಪ್ರೊ. ಬಿ.ಕೃಷ್ಣಪ್ಪ ಅವರ ಚೇತನಭೂಮಿಯಿಂದ ಸುಮಾರು 300 ಕಿ.ಮೀಗಿಂತಲೂ ಹೆಚ್ಚು ದೂರ ಬೆಂಗಳೂರಿನವರೆಗೆ ಕಾಲ್ನಡಿಗೆ ಜಾಥಾ ಬಂದು, ಫ್ರೀಡಂ ಪಾರ್ಕಿನಲ್ಲಿ ನೂರಕ್ಕೂ ಹೆಚ್ಚು ದಿನ ಸತ್ಯಾಗ್ರಹ ಮಾಡಿದರೂ ಕಣ್ಣು ತೆರೆಯದ್ದನ್ನು ಉಲ್ಲೇಖಿಸುವುದೇ ಇಲ್ಲ.

ಇಂತಹ ಜಾಣ ಮರೆವಿನ ಲೇಖನವು ಕನ್ನಡದ ‘ಸಾಕ್ಷಿಪ್ರಜ್ಞೆ’ ದೇವನೂರ ಮಹಾದೇವ ಅವರನ್ನು ದಲಿತರೆಂದು ಸೀಮಿತಗೊಳಿಸಲು ಮಾತ್ರ ಮರೆಯುವುದಿಲ್ಲ. ದಲಿತ ಸಂಘರ್ಷ ಸಮಿತಿಯು ಕಾಂಗ್ರೆಸ್‌ಗೆ ನೀಡಿದ ಬೆಂಬಲಕ್ಕೆ ವಿಧಿಸಿದ ‘ಷರತ್ತು’ಗಳನ್ನು ಕಿತ್ತುಹಾಕಿ, ಬಹಿರಂಗ ಬೆಂಬಲ ಎನ್ನಲು ಹಿಂದೆ ಮುಂದೆ ಯೋಚಿಸುವುದಿಲ್ಲ.

ಇದನ್ನೆಲ್ಲ ಅರ್ಥ ಮಾಡಿಕೊಂಡಿರುವ ಪರಿಶಿಷ್ಟ ಜಾತಿಯ ಎಲ್ಲ ಸಮುದಾಯಗಳೂ ಬಿಜೆಪಿಯ ವಿರುದ್ಧ ಈ ಬಾರಿ ಮತ ಹಾಕಿವೆ. ಏಕೆಂದರೆ ಎಡಗೈ, ಬಲಗೈ, ಬೋವಿ, ಲಂಬಾಣಿ ಯಾರೇ ಇರಲಿ ಎಲ್ಲರಿಗೂ ಈ ಸಾರಿ ಬಿಜೆಪಿ ಬೇಡವಾಗಿತ್ತು. ಬಂಜಾರ ಸಮುದಾಯವು ಒಳಮೀಸಲಾತಿ ಶಿಫಾರಸಿನ ವಿರುದ್ಧ ತಿರುಗಿ ಬಿದ್ದಿದ್ದರೂ, ಆ ಸಮುದಾಯದಿಂದ ಗೆದ್ದ ಏಳು ಜನರಲ್ಲಿ ನಾಲ್ವರು ಬಿಜೆಪಿಯವರೇ ಆಗಿದ್ದಾರೆ, ಕಾಂಗ್ರೆಸ್ಸಿನಿಂದ ಗೆದ್ದವರು ಒಬ್ಬರೇ ಎಂದಿದ್ದಾರೆ. ಹಾಗಿದ್ದರೆ, ಕಾಂಗ್ರೆಸ್ಸಿನಿಂದಲೇ ಅತ್ಯಂತ ಹೆಚ್ಚು ಲಿಂಗಾಯತರು ಗೆದ್ದಿದ್ದಾರೆ, ಅದರಿಂದ ಲಿಂಗಾಯತರಲ್ಲಿ ಹೆಚ್ಚಿನವರು ಕಾಂಗ್ರೆಸ್ಸಿಗೆ ವೋಟು ಹಾಕಿದ್ದಾರೆ ಎಂದಾಗುತ್ತದೆಯೇ?



ಲಂಬಾಣಿ ಶಾಸಕರಿದ್ದಾರೆ ಎಂದರೆ ಅರ್ಥ ಆ ಕ್ಷೇತ್ರದಲ್ಲಿ ಲಂಬಾಣಿ ಸಮುದಾಯದ ಅತಿ ಹೆಚ್ಚು ಮಂದಿ ಇದ್ದರು ಎಂದೇನೂ ಅಲ್ಲ. ಬದಲಿಗೆ ಬಾಬಾ ಸಾಹೇಬರು ಎಚ್ಚರಿಸಿದ್ದ ‘ಅವರು’ ಮೀಸಲು ಕ್ಷೇತ್ರಗಳಲ್ಲಿ ಅತ್ಯಂತ ಹೆಚ್ಚಾಗಿ ಸ್ಪೃಶ್ಯ ಜಾತಿಗಳಿಗೆ ಸೇರಿದವರನ್ನೇ ನಿಲ್ಲಿಸಿ, ಜಾತಿ ಅಸಹನೆಯ ಲಾಭ ಪಡೆದುಕೊಳ್ಳುವ ಪಿತೂರಿ ಮಾಡಿದ್ದರು ಎಂಬುದೇ ಅದಕ್ಕೆ ಕಾರಣ. ಪರಿಶಿಷ್ಟ ಜಾತಿಗಳಲ್ಲೇ ಒಬ್ಬರನ್ನು ಇನ್ನೊಬ್ಬರ ವಿರುದ್ಧ ಎತ್ತಿಕಟ್ಟುವ ಇಂತಹ ಹುನ್ನಾರಕ್ಕೆಂದೇ ಕೆಲವರು ನಿಯೋಜಿತರಾಗಿದ್ದರು. ಅವರು ಸತತವಾಗಿ ಬಲಗೈ ವಿರುದ್ಧ ಎಡಗೈ ಅನ್ನು, ಎರಡೂ ಸಮುದಾಯಗಳ ವಿರುದ್ಧ ಲಂಬಾಣಿ, ಬೋವಿ ಸಮುದಾಯದವರನ್ನು, ಅವರ ವಿರುದ್ಧ ಇನ್ನು ಕೆಲವು ಸಮುದಾಯಗಳನ್ನು ಎತ್ತಿ ಕಟ್ಟಲು ಹತ್ತಾರು ವರ್ಷ ಕೆಲಸ ಮಾಡಿದ್ದಾರೆ. ಒಳಮೀಸಲಾತಿಯ ಮೂಲಕ ಈ ಸಮುದಾಯಗಳನ್ನು ಒಡೆಯಬಹುದು ಎಂದುಕೊಂಡಿದ್ದ ಅಂತಹವರ ಹುನ್ನಾರವು ಅವರಿಗೇ ತಿರುಗುಬಾಣವಾಗಿದೆ.

ಕಲ್ಯಾಣ ಕರ್ನಾಟಕದ ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿ ಹೆಚ್ಚಿನ ಪಾಲು ಪಡೆದುಕೊಂಡಿರುವುದನ್ನು ಉಲ್ಲೇಖಿಸಿರುವ ಲೇಖಕರು, ಈ ಕ್ಷೇತ್ರಗಳಲ್ಲಿ ದಲಿತರು ಮಾತ್ರ ಇರುತ್ತಾರೆ ಎಂದುಕೊಂಡಿದ್ದಾರೆಯೇ? ಮೀಸಲು ಕ್ಷೇತ್ರಗಳಲ್ಲಿ ಜಾತಿ ಅಸಹನೆ ಹೆಚ್ಚಾಗುವಂತೆ ಮಾಡಿ, ಅಲ್ಲಿ ಅದರ ಫಲವನ್ನು ಪಡೆಯುವ ಹುನ್ನಾರ ದಲಿತರಿಗೆ ಗೊತ್ತಾಗುವುದಿಲ್ಲ ಎಂದುಕೊಂಡಿರಬಹುದು. 2022ರ ಡಿ. 6ರಂದು ನಡೆದ ದಲಿತರ ಸಾಂಸ್ಕೃತಿಕ ಪ್ರತಿರೋಧದ ನಂತರ ಎಡಗೈ-ಬಲಗೈ-ಅಲೆಮಾರಿ ಸಮುದಾಯಗಳು ಯಾವಾಗ ಒಗ್ಗಟ್ಟಿನಿಂದ ಒಳಮೀಸಲು ಜಾರಿಗಾಗಿ ಒತ್ತಾಯಿಸಿದವೋ ‘ಮನುವಾದಿ’ ಪಾಳಯದಲ್ಲಿ ಆಗಲೇ ತಲ್ಲಣ ಶುರುವಾಗಿತ್ತು. ಅಂತಿಮವಾಗಿ ಈ ಚುನಾವಣೆಯಲ್ಲಿ ಬಿಜೆಪಿಗೆ ಸೋಲುಣಿಸುವಲ್ಲಿ ಪರಿಶಿಷ್ಟ ಸಮುದಾಯಗಳು ಪ್ರಮುಖ ಕಾಣಿಕೆ ನೀಡಿದವು.

ದಲಿತ ಸಮುದಾಯಗಳು ತಮಗೇನು ಬೇಕು ಮತ್ತು ಬೇಡ ಎಂಬುದನ್ನು ತೀರ್ಮಾನಿಸಲು ಸಾಕಷ್ಟು ಶಕ್ತವಾಗಿವೆ. ಅನ್ಯರು ಕೈಜೋಡಿಸಿದರೆ ಬೇಡವೆನ್ನಲಾರರು. ಆದರದು ಒಳಿತಿಗಾಗಿರಬೇಕೇ ಹೊರತು ಒಡೆಯಲಿಕ್ಕಾಗಲ್ಲ.

ವಾಚಕರ ವಾಣಿ

ಯಾರನ್ನು ದಡ್ಡರನ್ನಾಗಿ ಮಾಡುತ್ತಿದ್ದಾರೆ?

ಬಿಜೆಪಿ ಮುಖಂಡ ಆಗಿದ್ದ ಪ್ರವೀಣ್ ನೆಟ್ಟಾರು ಅವರ ಪತ್ನಿ ನೂತನಕುಮಾರಿ ಅವರನ್ನು ಕೆಲಸದಿಂದ ವಜಾ ಮಾಡಲಾಗಿದೆ ಎಂದು ಆರೋಪಿಸಿ ಬಿಜೆಪಿ ನಾಯಕರು ಪುಂಖಾನುಪುಂಖವಾಗಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಬಿಜೆಪಿಗೆ ಪ್ರವೀಣ್ ಮೇಲೆ ಸಹಾನುಭೂತಿ, ನೈಜ ಕಾಳಜಿ ಇದ್ದಿದ್ದರೆ, ಅವರ ಪತ್ನಿಗೆ ‘ತಾತ್ಕಾಲಿಕ ಹುದ್ದೆ’ಯಲ್ಲಿ ಕೆಲಸ ಕಲ್ಪಿಸಿದ್ದು ಏಕೆ? ಇಂತಹ ತಾತ್ಕಾಲಿಕ ನೇಮಕಾತಿಗಳು ಹೊಸ ಪಕ್ಷ ಅಧಿಕಾರಕ್ಕೆ ಬಂದಾಗ ಸಹಜವಾಗಿ ರದ್ದುಗೊಳ್ಳುತ್ತವೆ. ಹೀಗೆ ಪ್ರತಿ ವಿಷಯಕ್ಕೂ ಜಾತಿ-ಧರ್ಮದ ಲೇಪನ ಮಾಡಿದ್ದರಿಂದ ಅಧಿಕಾರ ಕಳೆದುಕೊಂಡಿರುವ ಬಿಜೆಪಿ ನಾಯಕರು, ಹೇಳಿಕೆ ನೀಡುವಾಗ ಕನಿಷ್ಠ ಸಾಮಾನ್ಯ ಜ್ಞಾನ ಬಳಸಬೇಕು. ಕರುನಾಡಿನ ಜನ ಅಷ್ಟು ದಡ್ಡರಲ್ಲ. ಮುಂದಿನ ದಿನಗಳಲ್ಲಾದರೂ ಬಿಜೆಪಿ ಒಂದು ಜವಾಬ್ದಾರಿಯುತ, ಜನಸಾಮಾನ್ಯರ ಬಗ್ಗೆ ಕಾಳಜಿಯುಳ್ಳ ಪ್ರತಿಪಕ್ಷವಾಗಿ ಕಾರ್ಯನಿರ್ವಹಿಸಲಿ.

ಚನ್ನು ಹಿರೇಮಠ, ರಾಣೆಬೆನ್ನೂರು

ಕುತೂಹಲ ಮತ್ತು ಸಮಾಧಾನ

‘24 ಸಚಿವರ ಪೂರ್ವಾಪರ’ (ಪ್ರ.ವಾ., ಮೇ 28) ನೋಡಿದಾಗ ಗಮನ ಸೆಳೆದದ್ದು ಭಟ್ಕಳದಿಂದ ಎರಡನೇ ಬಾರಿ ಆಯ್ಕೆಯಾಗಿ ಬಂದು, ಸದ್ದುಗದ್ದಲವಿಲ್ಲದೆ ಈ ಬಾರಿ ಸಚಿವ ಸಂಪುಟ ಸೇರಿರುವ ಮಂಕಾಳ ವೈದ್ಯ. ಅವರ ಹೆಸರಿನಷ್ಟೇ ಕುತೂಹಲ ಹುಟ್ಟಿಸಿದ್ದು ಎಂಟನೇ ತರಗತಿವರೆಗಿನ ಓದು. ಅವರಿಗೆ ಯಾವುದೇ ಅಪರಾಧ ಹಿನ್ನೆಲೆ ಇಲ್ಲದಿರುವುದು. ಸಚಿವ ಸಂಪುಟ ಸೇರಲು ನಾನಾ ಬಗೆಯ ಗದ್ದಲ ಎಬ್ಬಿಸುತ್ತಿರುವವರ ನಡುವೆಯೂ ಇಂಥವರಿದ್ದಾರಲ್ಲ ಎನ್ನುವುದೇ ಸಮಾಧಾನದ ಸಂಗತಿ. 1982ರಲ್ಲಿ ಮಡಿಕೇರಿ ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಅಧ್ಯಕ್ಷ ಶಂಬಾ ಜೋಶಿ ಅವರನ್ನು ಸಂದರ್ಶಿಸಿದಾಗ- ‘ಮುಂದೆ ಈ ದೇಶಕ್ಕೆ ಕಲಿತವರೇ ದೊಡ್ಡ ಕುತ್ತು’ ಎಂದು ನುಡಿದಿದ್ದರು. ಅದೆಂಥ ಭವಿಷ್ಯವಾಣಿ!

ಈರಪ್ಪ ಎಂ. ಕಂಬಳಿ, ಬೆಂಗಳೂರು

ಸಮಂಜಸ ನಡೆ ಅಲ್ಲ

ನೀತಿ ಆಯೋಗದ ಸಭೆಗೆ ಹನ್ನೊಂದು ದೊಡ್ಡ ರಾಜ್ಯಗಳ ಮುಖ್ಯಮಂತ್ರಿಗಳ ಗೈರು ಒಂದೆಡೆ, ಪ್ರಜಾಪ್ರಭುತ್ವದ ದೇವಾಲಯವೆಂದು ಹೇಳಲಾಗುವ ನೂತನ ಸಂಸತ್ ಭವನದ ಉದ್ಘಾಟನೆಗೆ ಸುಮಾರು 20 ವಿರೋಧ ಪಕ್ಷಗಳ ಬಹಿಷ್ಕಾರ ಇನ್ನೊಂದೆಡೆ (ಪ್ರ.ವಾ., ಮೇ 28). ಈ ಬೆಳವಣಿಗೆಗಳು, ರಾಷ್ಟ್ರದ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳಲ್ಲಿ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲವೂ ಸರಿ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತವೆ. ರಾಷ್ಟ್ರಪತಿ, ಉಪರಾಷ್ಟ್ರಪತಿ ಸಂಸತ್ ಭವನದ ಉದ್ಘಾಟನಾ ಕಾರ್ಯಕ್ರಮದ ಭಾಗವಾಗದಿರುವುದು ಯಾವುದೇ ದೃಷ್ಟಿಯಿಂದಲೂ ಸಮಂಜಸವಲ್ಲ.

ರಾಷ್ಟ್ರದ ಹಿತಾಸಕ್ತಿ, ಸದಾಚಾರ, ಸನ್ನಡತೆಗಳಿಗಿಂತ ಸ್ವಪ್ರತಿಷ್ಠೆ, ರಾಜಕೀಯ ದ್ವೇಷಾಸೂಯೆಗಳು ಮೇಲುಗೈ ಪಡೆದರೆ ಆಗುವುದು ಹೀಗೆಯೇ. ಕೆಲವು ದಶಕಗಳಿಂದ ನಮ್ಮ ರಾಜಕೀಯ ರಂಗದಲ್ಲಿ ಮುತ್ಸದ್ದಿತನ, ರಾಜಕೀಯ ಹೃದಯ ವೈಶಾಲ್ಯ, ಉದಾರವಾದಿ ಧೋರಣೆ ಅಪರೂಪವಾಗಿದೆ. ನಮ್ಮಂತಹ ಬೃಹತ್ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಅನ್ನುವುದೇ ಹೊಂದಾಣಿಕೆ ಬಯಸುವ ವ್ಯವಸ್ಥೆ. ಸರ್ಕಾರ ನಡೆಸುವವರು ಸೌಹಾರ್ದದ ಕಾರ್ಯವಿಧಾನವನ್ನು ರೂಢಿಸಿಕೊಳ್ಳುವ ಮೂಲಕ ಪ್ರಜಾಪ್ರಭುತ್ವದ ತೇರನ್ನು ಎಳೆಯಬೇಕಾಗುತ್ತದೆ. ವಿರೋಧ ಪಕ್ಷಗಳೂ ಅದಕ್ಕೆ ಸಹಕಾರ ನೀಡಬೇಕಾಗುತ್ತದೆ. ರಾಜಕೀಯ ಮೇಲಾಟವೇ ಮೇಲುಗೈ ಪಡೆಯುತ್ತಾ ಹೋದರೆ ಸಂಸತ್ ಭವನ ಎಷ್ಟು ಭವ್ಯ, ದಿವ್ಯವಾದರೇನು, ಪ್ರಜಾಪ್ರಭುತ್ವದ ಅಡಿಪಾಯ ಶಿಥಿಲಗೊಳ್ಳುತ್ತಾ ಹೋಗುತ್ತದೆ. ಇದನ್ನು ಎಲ್ಲರೂ ಅರಿತು ನಡೆದಾಗಲೇ ರಾಷ್ಟ್ರಕ್ಕೆ ಕ್ಷೇಮ.

ವೆಂಕಟೇಶ ಮಾಚಕನೂರ, ಧಾರವಾಡ

ಮುಖ್ಯಮಂತ್ರಿಯ ವಿವೇಚನೆಯ ಅರ್ಥವೇನು?

ಮುಖ್ಯಮಂತ್ರಿ ಆಯ್ಕೆಯು ಬಹುಮತ ಹೊಂದಿರುವ ಪಕ್ಷದ ಅಥವಾ ಪಕ್ಷಗಳ ಮೈತ್ರಿಕೂಟದ ಶಾಸಕರ ವಿವೇಚನೆಗೆ ಬಿಟ್ಟದ್ದು, ಮಂತ್ರಿಗಳ ನಿಯೋಜನೆ ಮತ್ತು ಖಾತೆ ಹಂಚುವಿಕೆ ಮುಖ್ಯಮಂತ್ರಿಯ ವಿವೇಚನೆ ಮತ್ತು ಪರಮಾಧಿಕಾರ ಎಂದು ಹೇಳಲಾಗುತ್ತದೆ. ಅದರೆ, ವಾಸ್ತವದಲ್ಲಿ ಇದು ಸಂಬಂಧಪಟ್ಟ ರಾಜಕೀಯ ಪಕ್ಷದ ಹೈಕಮಾಂಡ್ ವಿವೇಚನೆಗೆ ಬಿಟ್ಟ ವಿಷಯ ಎಂದು ಇನ್ನೊಮ್ಮೆ ಸಾಬೀತಾಗಿದೆ. ಈ ದಿಸೆಯಲ್ಲಿ ಜನ ತಮ್ಮ ತಿಳಿವಳಿಕೆಯನ್ನು ತಿದ್ದಿಕೊಳ್ಳುವ ಕಾಲ ಬಂದಿದೆ. ಮಂತ್ರಿಗೆ ಯಾವ ಕಚೇರಿ ಕೊಡಬೇಕು, ಎಲ್ಲಿ ಬಂಗಲೆ ನೀಡಬೇಕು, ಯಾವ ಸಿಬ್ಬಂದಿ ನೀಡಬೇಕು ಮತ್ತು ಯಾವ ಕಾರನ್ನು ನೀಡಬೇಕು ಎನ್ನುವುದೂ ಹೈಕಮಾಂಡ್ ಹೆಗಲಿಗೆ ವರ್ಗಾವಣೆಯಾದರೆ ಆಶ್ಚರ್ಯವಿಲ್ಲ. ‘ಸರ್ವಂ ಹೈಕಮಾಂಡ್ ಮಯಂ’ ಎಂದು ಧಾರಾಳವಾಗಿ ಹೇಳಬಹುದು.

ರಮಾನಂದ ಶರ್ಮಾ, ಬೆಂಗಳೂರು

ಪ್ರಿಯಾಂಕ್ ಹೇಳಿದ್ದರಲ್ಲಿ ತಪ್ಪೇನಿದೆ?

‘ಯಾವುದೇ ವ್ಯಕ್ತಿ ಅಥವಾ ಸಂಘಟನೆ ಕರ್ನಾಟಕದ ವರ್ಚಸ್ಸಿಗೆ ಧಕ್ಕೆ ತಂದರೆ, ಸಮಾಜದಲ್ಲಿ ಕೋಮುವಿಷ ಬಿತ್ತಿ ಶಾಂತಿ ಕದಡಲು ಪ್ರಯತ್ನಿಸಿದರೆ ಅಂಥವರಿಗೆ ಕಾನೂನು ಹಾಗೂ ಸಂವಿಧಾನದ ಚೌಕಟ್ಟಿನಲ್ಲಿ ಕಡಿವಾಣ ಹಾಕುತ್ತೇವೆ... ಬಜರಂಗದಳ, ಪಿಎಫ್ಐ ಅಥವಾ ಯಾವುದೇ ಕೋಮು ಸಂಘಟನೆಗಳು ಮತ್ತು ಜಾತಿ ಸಂಘಟನೆಗಳು ಶಾಂತಿ ಕದಡುವ ಕೆಲಸಕ್ಕೆ ಕೈಹಾಕಿದರೆ ಅವುಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ; ನಿಯಮ ಮುರಿದರೆ ಅಂಥ ಸಂಘಟನೆಗಳನ್ನು ನಿಷೇಧಿಸಲೂ ಹಿಂಜರಿಯುವುದಿಲ್ಲ- ಅದು ಆರ್‌ಎಸ್‌ಎಸ್ ಆದರೂ ಅಷ್ಟೇ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಈಚೆಗೆ ಹೇಳಿದ್ದಾರೆ. ‘ಶಾಂತಿ ಕದಡಲು ಯತ್ನಿಸಿದರೆ, ಸಮಾಜದ ಸಾಮರಸ್ಯ ಹಾಳುಗೆಡವಿದರೆ... ಕಾನೂನು ಮತ್ತು ಸಂವಿಧಾನದ ಚೌಕಟ್ಟಿನಲ್ಲಿ ಕ್ರಮ...’ ಎಂದು ಹೇಳಿದ್ದರಲ್ಲಿ ತಪ್ಪೇನಿದೆ? ಅವರೇನು, ಏಕಾಏಕಿ ಯಾವುದೇ ಸಂಘಟನೆ ನಿಷೇಧಿಸುವುದಾಗಿ ಹೇಳಿಲ್ಲ. ಆದರೆ, ಈ ಮಾತು ಬಂದಕೂಡಲೇ ಬಿಜೆಪಿ ಧುರೀಣರಾದ ಸಿ.ಟಿ. ರವಿ, ಆರ್. ಅಶೋಕ, ನಳಿನ್ ಕುಮಾರ್ ಕಟೀಲ್, ಬಸವರಾಜ ಬೊಮ್ಮಾಯಿ ಆಕ್ರೋಶ ವ್ಯಕ್ತಪಡಿಸಿದರು. ‘ಧೈರ್ಯವಿದ್ದರೆ ಆರ್‌ಎಸ್‌ಎಸ್ ನಿಷೇಧಿಸಿ, ನೆಹರೂ ಮತ್ತು ಇಂದಿರಾ ಗಾಂಧಿ ಕೈಯಲ್ಲೇ ಏನೂ ಮಾಡಲಾಗಲಿಲ್ಲ... ಇದರಿಂದ ಕಾಂಗ್ರೆಸ್ ಭಸ್ಮವಾಗಿಬಿಡುತ್ತೆ...’ ಇಂಥ ಬೆದರಿಕೆ ಮಾತುಗಳನ್ನೂ ಕೆಲವರು ಆಡುತ್ತಿದ್ದಾರೆ. ಏನು ಇವರ ಮಾತಿನ ಅರ್ಥ? ಕಾನೂನು ಮತ್ತು ಸಂವಿಧಾನಕ್ಕೆ ಅತೀತವಾದ ಸಂಘಟನೆಯೇ ಆರ್‌ಎಸ್‌ಎಸ್? ಅಥವಾ ಕೋಮುವಿಷ ಬಿತ್ತುವುದು, ಶಾಂತಿ ಸಾಮರಸ್ಯ ಕದಡುವುದು ಇವರ ಆಜನ್ಮಸಿದ್ಧ ಹಕ್ಕು ಎಂದೇ? ಇವರಿಗೆ ನಿಜಕ್ಕೂ ಲಜ್ಜೆ ಇದ್ದಿದ್ದರೆ ‘ನಾವು ಕೂಡ ಈ ದೇಶದ ಪ್ರಜೆಗಳು; ಎಂದಿಗೂ ಸಮಾಜದ ಶಾಂತಿ ಕದಡುವ ಕೆಲಸ ಮಾಡುವುದಿಲ್ಲ. ಮಾಡಿದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಿ’ ಅನ್ನಬೇಕಿತ್ತು.

ಎನ್.ಎಸ್. ಶಂಕರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಮ್ಮಾನಕ್ಕೆ ಪರಿಗಣಿತವಾದ ಗಟ್ಟಿಕಾಳುಗಳು

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ಕ್ಕೆ ಕೆಲ ದಿನಗಳಷ್ಟೇ ಬಾಕಿಯಿದೆ. 2022ನೇ ಸಾಲಿನಲ್ಲಿ ತೆರೆಕಂಡ ಚಿತ್ರಗಳನ್ನಷ್ಟೇ ಈ ಪ್ರಶಸ್ತಿಗೆ ಪರಿಗಣಿಸಲಾಗಿತ್ತು. ಈಗಾಗಲೇ ಎಲ್ಲ ವಿಭಾಗಗಳ ನಾಮನಿರ್ದೇಶಿತರ ಹೆಸರು ಪ್ರಕಟಗೊಂಡಿದೆ. ಇದೀಗ ನಾಮನಿರ್ದೇಶಿತರನ್ನು ಪರಿಚಯಿಸುವ ಸಮಯ. 'ವರ್ಷದ ಅತ್ಯುತ್ತಮ ಚಿತ್ರ' ಮತ್ತು 'ಅತ್ಯುತ್ತಮ ನಿರ್ದೇಶನ' ವಿಭಾಗದಲ್ಲಿ ನಾಮನಿರ್ದೇಶನಗೊಂಡ ಚಿತ್ರಗಳು ಮತ್ತು ನಿರ್ದೇಶಕರ ಕುರಿತಾದ ಕಿರುಪರಿಚಯ ಇಲ್ಲಿದೆ. 'ಸಿನಿ ಸಮ್ಮಾನ'ದ ಕುರಿತ ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ. prajavani.net/cinesamman



ವರ್ಷದ ಅತ್ಯುತ್ತಮ ಚಿತ್ರ (2022)

ತಲೆದಂಡ

ಪ್ರವೀಣ್ ಕೃಪಾಕರ್ ನಿರ್ದೇಶನದ 'ತಲೆದಂಡ' ಕನ್ನಡದ ಅತ್ಯುತ್ತಮ ನಟರಲ್ಲೊಬ್ಬರೆನಿಸಿಕೊಂಡಿದ್ದ ಸಂಚಾರಿ ವಿಜಯ್ ಅವರ ಕೊನೆಯ ಚಿತ್ರ. ಮರ-ಗಿಡಗಳನ್ನು ಪ್ರೀತಿಸುವ ಹುಡುಗ ಕುನ್ನೇಗೌಡನ ಕಥೆ ಹೊಂದಿರುವ ಚಿತ್ರಕ್ಕೆ 'ಅತ್ಯುತ್ತಮ ಪರಿಸರ ಕಾಳಜಿಯ ಸಿನಿಮಾ' ವಿಭಾಗದಡಿ 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಲಭಿಸಿತ್ತು. 'ಮರಗಳನ್ನು ರಕ್ಷಿಸಿ ಕಾಡು ಬೆಳೆಸಿ' ಎಂಬ ಸಂದೇಶ ಸಾರುವ ಸಿನಿಮಾದಲ್ಲಿ ಓರ್ವ ಮುಗ್ಧ ಬುದ್ಧಿಮಾಂದ್ಯನ ಪಾತ್ರದಲ್ಲಿ ವಿಜಯ್ ಕಾಣಿಸಿಕೊಂಡಿದ್ದರು. ಚೈತ್ರಾ ಆಚಾರ್, ಮಂಗಳಾ, ರಮೇಶ್ ಪಂಡಿತ್, ಮಂಡ್ಯ ರಮೇಶ್ ಮುಂತಾದವರು ಈ ಸಿನಿಮಾದಲ್ಲಿ ನಟಿಸಿದ್ದಾರೆ. ಕೃಪಾನಿಧಿ ಕ್ರಿಯೇಷನ್ಸ್ ಚಿತ್ರ ನಿರ್ಮಿಸಿದ್ದು, ಹರಿಕಾವ್ಯ ಸಂಗೀತ ನಿರ್ದೇಶನವಿದೆ. ಸಂಕಲನ ಬಿ.ಎಸ್. ಕೆಂಪರಾಜ್ ಅವರದ್ದು. ಛಾಯಾಗ್ರಹಣವನ್ನು ಅಶೋಕ್ ಕಶ್ಯಪ್ ನಿಭಾಯಿಸಿದ್ದಾರೆ.

777 ಚಾರ್ಲಿ

ತಮ್ಮದೇ ನಿರ್ಮಾಣ ಸಂಸ್ಥೆ ಪರಂವಃ ಸ್ಟುಡಿಯೋಸ್ ಅಡಿಯಲ್ಲಿ ನಟ ರಕ್ಷಿತ್ ಶೆಟ್ಟಿ ನಿರ್ಮಿಸಿ, ಅಭಿನಯಿಸಿರುವ '777 ಚಾರ್ಲಿ' 2022ರ ಸೂಪರ್ ಹಿಟ್ ಚಿತ್ರಗಳಲ್ಲೊಂದು. ನಾಯಿ ಚಾರ್ಲಿ ಮತ್ತು ನಾಯಕ ಧರ್ಮನ ಬಾಂಧವ್ಯದ ಕಥೆ ಹೇಳುವ ಚಿತ್ರದಲ್ಲಿ ಸಂಗೀತಾ ಶೃಂಗೇರಿ, ಚಾರ್ಲಿ,ರಾಜ್ ಬಿ. ಶೆಟ್ಟಿ,ದಾನೀಶ್ ಸೇಠ್,ಬಾಬಿ ಸಿಂಹ,ಭಾರ್ಗವಿ ನಾರಾಯಣ್,ಬೇಬಿ ಶಾರ್ವರಿ ಮೊದಲಾದವರು ನಟಿಸಿದ್ದಾರೆ. ರಕ್ಷಿತ್ ಶೆಟ್ಟಿ ಅವರ ಜೊತೆಗೆ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ ಕಿರಣ್‌ರಾಜ್ ಈ ಚಿತ್ರವನ್ನು ಬರೆದು ನಿರ್ದೇಶಿಸಿ ತಮ್ಮ ಮೊದಲ ಯತ್ನದಲ್ಲೇ ಪ್ರೇಕ್ಷಕರ ಮನ ಗೆದ್ದಿದರು. ಅರವಿಂದ್ ಕಶ್ಯಪ್ ಅವರ ಛಾಯಾಗ್ರಹಣ ಹಾಗೂ ನೋಬಿನ್ ಪೌಲ್‌ರ ಹಿನ್ನೆಲೆ ಸಂಗೀತ, ಹಾಡುಗಳು ಚಿತ್ರದ ಗೆಲುವಿನಲ್ಲಿ ಪ್ರಮುಖ ಪಾಲು ಪಡೆದಿವೆ.

ಗುರು ಶಿಷ್ಯರು

ದೇಸಿ ಸೊಗಡಿನ ಕ್ರೀಡೆ ಖೊಖೊವನ್ನು ಮುಖ್ಯವಾಗಿಟ್ಟುಕೊಂಡು ಬಂದ ಸಿನಿಮಾ 'ಗುರು ಶಿಷ್ಯರು'. 'ಜಂಟಲ್‌ಮನ್' ಸಿನಿಮಾದಿಂದ ಗಮನಸೆಳೆದಿದ್ದ ನಿರ್ದೇಶಕ ಜಡೇಶ್ ಕೆ. ಹಂಪಿ ಈ ಚಿತ್ರದ ನಿರ್ದೇಶಕರು. ಶರಣ್,ನಿಶ್ವಿಕಾ ನಾಯ್ಡು, ಸುರೇಶ್ ಹೆಬ್ಳಿಕರ್,ಅಪೂರ್ವ ಕಾಸರವಳ್ಳಿ, ಮಹಾಂತೇಶ್ ಹಿರೇಮಠ್,ಹೃದಯ್, ಏಕಾಂತ್,ಆನಂದ್ ನೀನಾಸಂ ಮೊದಲಾದವರು ಅಭಿನಯಿಸಿದ್ದಾರೆ. ಚಿತ್ರದಲ್ಲಿ ಪಿಟಿ ಮಾಸ್ಟರ್ ಆಗಿ ನಟ ಶರಣ್ ಪ್ರೇಕ್ಷಕರ ಮನ ಗೆದ್ದಿದ್ದರು. 1990ರಲ್ಲಿ ಹಳ್ಳಿಗಾಡಿನಲ್ಲಿ ನಡೆಯುವ ಕಥೆ. ಕ್ರೀಡೆಯ ಕುರಿತು ಕನ್ನಡದಲ್ಲಿ ಬಂದ ವಿಭಿನ್ನ ಸಿನಿಮಾ ಕೂಡ. ಮಂಜು ಮಾಸ್ತಿ ಸಂಭಾಷಣೆ, ಅಜನೀಶ್ ಲೋಕನಾಥ್ ಹಿನ್ನೆಲೆ ಸಂಗೀತ, ಆರೂರು ಸುಧಾಕರ್ ಶೆಟ್ಟಿ ಛಾಯಾಗ್ರಹಣವು 1990ರ ದಶಕದ ಮೂಡ್ ಕ್ರಿಯೇಟ್ ಮಾಡುವಲ್ಲಿ ಸಫಲವಾಗಿತ್ತು.

ಕಾಂತಾರ

'ಕೆಜಿಎಫ್' ನಂತರ ದೇಶ ವಿದೇಶಗಳು ಕನ್ನಡ ಚಿತ್ರರಂಗವನ್ನು ತಿರುಗಿ ನೋಡುವಂತೆ ಮಾಡಿದ ಚಿತ್ರ 'ಕಾಂತಾರ'. 'ಕೆಜಿಎಫ್' ನಿರ್ಮಿಸಿದ್ದ ಹೊಂಬಾಳೆ ಫಿಲಂಸ್ ಈ ಚಿತ್ರವನ್ನು ನಿರ್ಮಿಸಿದ್ದು, ಕನ್ನಡ ಹೊರತಾಗಿ ಬೇರೆ ಭಾಷೆಗಳಲ್ಲಿಯೂ ಸೂಪರ್ ಹಿಟ್ ಎನಿಸಿಕೊಂಡ ಚಿತ್ರ. ಕರಾವಳಿಯ ಭೂತಕೋಲ, ದೈವ, ನಂಬಿಕೆಯ ಸುತ್ತಲಿನ ಕಥೆ ಹೊಂದಿದೆ. ರಿಷಬ್ ಶೆಟ್ಟಿ ನಿರ್ದೇಶಿಸಿ, ನಟಿಸಿದ್ದಾರೆ. ಕಿಶೋರ್,ಅಚ್ಯುತ್ ಕುಮಾರ್, ಸಪ್ತಮಿ ಗೌಡ,ಪ್ರಕಾಶ್ ತುಮ್ಮಿನಾಡು,ಮಾನಸಿ ಸುಧೀರ್,ಪ್ರಮೋದ್ ಶೆಟ್ಟಿ ಮೊದಲಾದವರು ಚಿತ್ರದಲ್ಲಿದ್ದಾರೆ. ಅರವಿಂದ್ ಕಶ್ಯಪ್ ಛಾಯಾಗ್ರಹಣ, ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. 'ಬಾಕ್ಸಾಫೀಸ್‌ನಲ್ಲಿಯೂ ಭರ್ಜರಿ ದಾಖಲೆ ಸಾಧಿಸಿದ ಚಿತ್ರ 100 ದಿನಗಳ ಕಾಲ ಚಿತ್ರಮಂದಿರದಲ್ಲಿ ಯಶಸ್ವಿ ಪ್ರದರ್ಶನ ಕಂಡಿತು.

ಧರಣಿ ಮಂಡಲ ಮಧ್ಯದೊಳಗೆ

ಕನ್ನಡದ ಭರವಸೆಯ ಯುವ ನಟ ನವೀನ್ ಶಂಕರ್ ಮತ್ತು ಐಶಾನಿ ಶೆಟ್ಟಿ ಅಭಿನಯದ ಚಿತ್ರ 'ಧರಣಿ ಮಂಡಲ ಮಧ್ಯದೊಳಗೆ'. ಶ್ರೀಧರ್ ಶಿಕಾರಿಪುರ ಅವರ ಚೊಚ್ಚಲ ನಿರ್ದೇಶನದ ಚಿತ್ರದಲ್ಲಿ ಸಿದ್ದು ಮೂಲಿಮನಿ, ಯಶ್ ಶೆಟ್ಟಿ,ಪ್ರಕಾಶ್ ತುಮ್ಮಿನಾಡು, ಬಾಲ ರಾಜ್‌ವಾಡಿ,ಕರಿಸುಬ್ಬು,ಮೋಹನ್ ಮೊದಲಾದವರು ಅಭಿನಯಿಸಿದ್ದಾರೆ. 'ನಾವು ಒಬ್ಬರಿಗೆ ಸಹಾಯ ಮಾಡಿದರೆ, ಇನ್ಯಾರೋ, ಮತ್ತಾವುದೋ ಗಳಿಗೆಯಲ್ಲಿ ನಮ್ಮ ನೆರವಿಗೆ ಬರುತ್ತಾರೆ' ಎಂಬುದು ಚಿತ್ರದ ಒಟ್ಟು ಸಾರ. ಹೈಪರ್‌ಲಿಂಕ್ ಮಾದರಿಯ ಸಿನಿಮಾ. ಕೀರ್ತನ್ ಪೂಜಾರಿ ಛಾಯಾಗ್ರಾಹಣ, ಉಜ್ವಲ್ ಚಂದ್ರ ಸಂಕಲನ ಚಿತ್ರಕ್ಕಿದೆ. ರೋನಾಡ್ ಬಕ್ಕೇಶ್ ಹಾಗೂ ಕಾರ್ತಿಕ್ ಚನ್ನೋಜಿ ರಾವ್ ಜೋಡಿಯ ಸಂಗೀತವಿರುವ ಈ ಚಿತ್ರಕ್ಕೆ ವಿಮರ್ಶಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು.

ಅತ್ಯುತ್ತಮ ನಿರ್ದೇಶನ

ಪ್ರವೀಣ್ ಕೃಪಾಕರ್
ಚಿತ್ರ: ತಲೆದಂಡ

ಇವರ ಚೊಚ್ಚಲ ನಿರ್ದೇಶನದ ಚಿತ್ರವಿದು. 27 ವರ್ಷದಿಂದ ಮೈಸೂರು ವಿಶ್ವವಿದ್ಯಾಲಯದಲ್ಲಿ ಚಲನಚಿತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಪ್ರಾಧ್ಯಾಪಕರಾಗಿರುವ ಪ್ರವೀಣ್ ಅವರಿಗೆ 40 ವರ್ಷದಿಂದ ಚಿತ್ರರಂಗದ ನಂಟಿದೆ. ಕೆ.ವಿ.ಜಯರಾಂ ಅವರೊಂದಿಗೆ ಕೆಲಸ ಪ್ರಾರಂಭಿಸಿದ ಇವರು, ನಂತರ ಹಲವು ನಿರ್ದೇಶಕರ ಜೊತೆ ಕೆಲಸ ಮಾಡಿದ್ದಾರೆ. ಸುಮಾರು 16 ಸಿನಿಮಾಗಳಲ್ಲಿ ಸಹ, ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. 2019ರಲ್ಲಿ 'ತಲೆದಂಡ' ಚಿತ್ರ ಪ್ರಾರಂಭವಾಗುತ್ತದೆ. ಚಿತ್ರಕ್ಕೆ 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಲಭಿಸುತ್ತದೆ.

ಎ.ಹರ್ಷ
ಚಿತ್ರ: ವೇದ

ನೃತ್ಯ ಸಂಯೋಜಕರಾಗಿ ಚಿತ್ರರಂಗದಲ್ಲಿ ಗುರುತಿಸಿಕೊಂಡವರು. ಈವರೆಗೆ ಸುಮಾರು 300ಕ್ಕೂ ಹೆಚ್ಚು ಸಿನಿಮಾಗಳಿಗೆ ನೃತ್ಯ ಸಂಯೋಜನೆ ಮಾಡಿದ್ದಾರೆ. 2007ರಲ್ಲಿ ಪ್ರಜ್ವಲ್ ದೇವರಾಜ್ ಮತ್ತು ತರುಣ್ ಅಭಿನಯದ 'ಗೆಳೆಯ' ಚಿತ್ರದ ಮೂಲಕ ನಿರ್ದೇಶಕರಾಗಿ ಚಿತ್ರರಂಗದಲ್ಲಿ ಬಡ್ತಿ ಪಡೆಯುತ್ತಾರೆ. ನಂತರ 'ಬಿರುಗಾಳಿ', 'ಚಿಂಗಾರಿ' ಚಿತ್ರಗಳಿಗೆ ಆ್ಯಕ್ಷನ್ ಕಟ್ ಹೇಳುತ್ತಾರೆ. ನಿರ್ದೇಶಕರಾಗಿ ಹರ್ಷ ಅವರಿಗೆ ಉತ್ತಮ ಹೆಸರು ತಂದುಕೊಟ್ಟಿದ್ದು ಶಿವಣ್ಣ ಅಭಿನಯದ 'ಭಜರಂಗಿ'. ನಂತರ 'ವಜ್ರಕಾಯ', 'ಜೈಮಾರುತಿ 800', 'ಅಂಜನಿಪುತ್ರ', 'ಸೀತಾರಾಮ ಕಲ್ಯಾಣ', 'ಭಜರಂಗಿ 2' ಚಿತ್ರಗಳನ್ನು ನಿರ್ದೇಶಿಸುತ್ತಾರೆ.

ಕಿರಣ್‌ರಾಜ್ ಕೆ
ಚಿತ್ರ: 777 ಚಾರ್ಲಿ

ನಟ ರಕ್ಷಿತ್ ಶೆಟ್ಟಿ ಅವರ ನಿರ್ದೇಶಕ ತಂಡದ ಸದಸ್ಯರಲ್ಲೊಬ್ಬರಾಗಿ ಕಿರಣ್‌ರಾಜ್ ಅವರ ಸಿನಿ ಪಯಣ ಪ್ರಾರಂಭ. '777 ಚಾರ್ಲಿ'ಗೆ ನಿರ್ದೇಶನದ ಜೊತೆಗೆ ಚಿತ್ರಕಥೆಯನ್ನು ಇವರೇ ಬರೆದಿದ್ದಾರೆ. 'ಹತ್ತನೇ ತರಗತಿ ಮುಗಿಸಿ, ಫಿಲ್ಮ್ ಮೇಕರ್ ಆಗುವ ಕನಸು ಕಂಡಾತ ಕಿರಣ್‌ರಾಜ್. ಈ ಕನಸಿಗಾಗಿ ಮನೆ ಬಿಟ್ಟು ಬಂದು ಮಂಗಳೂರಿನ ಬಾರ್ ಒಂದರಲ್ಲಿ ವೇಟರ್ ಆಗಿ, ಆಸ್ಪತ್ರೆಯಲ್ಲಿ ವಾಚ್‌ಮನ್ ಆಗಿ, ಸೇಲ್ಸ್‌ಮನ್ ಆಗಿ ಕೊನೆಗೆ ಬೆಂಗಳೂರಿಗೆ ಬಂದು ಸಹಾಯಕ ನಿರ್ದೇಶಕನಾಗಿ ಬೆಳೆದವನು. ಇಂಥ ಜೀವನ ಅನುಭವಿಸಿದವನಿಗಷ್ಟೇ ಈ ಭಾವನೆಗಳನ್ನು ಕಟ್ಟಲು ಸಾಧ್ಯ' ಎಂದು ಕಿರಣ್‌ರಾಜ್ ಕುರಿತು ರಕ್ಷಿತ್ ಶೆಟ್ಟಿ ಈ ಹಿಂದೆ ಹೇಳಿದ್ದರು.

ರಾಹುಲ್ ಪಿ.ಕೆ.
ಚಿತ್ರ: ಸಕುಟುಂಬ ಸಮೇತ

'ಉಳಿದವರು ಕಂಡಂತೆ' ಚಿತ್ರದ ಸಹ ನಿರ್ದೇಶಕರಾಗಿ ಇವರ ಸಿನಿ ಪಯಣ ಪ್ರಾರಂಭ. ಮೊದಲಿನಿಂದಲೂ ರಕ್ಷಿತ್ ಶೆಟ್ಟಿ ಅವರ ತಂಡದಲ್ಲಿರುವ ಇವರು, 'ರಿಕ್ಕಿ' ಸೇರಿದಂತೆ ಬೇರೆ, ಬೇರೆ ಸಿನಿಮಾಗಳ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿದ್ದಾರೆ. ಪರಂವಃ ಸಂಸ್ಥೆಯ ಪ್ರಮುಖ ಬರಹಗಾರರಲ್ಲಿ ಒಬ್ಬರು. ರಿಷಬ್ ಶೆಟ್ಟಿ ಅವರ 7 ಕಥೆಗಳ 'ಕಥಾಸಂಗಮ'ದ ಒಂದು ಕಥೆಯನ್ನು ನಿರ್ದೇಶಿಸುವ ಮೂಲಕ ಇವರು ಸ್ವತಂತ್ರ ನಿರ್ದೇಶಕರಾಗುತ್ತಾರೆ. ಪರಂವಃ ನಿರ್ಮಾಣದ 'ಸಕುಟುಂಬ ಸಮೇತ' ನಿರ್ದೇಶಕರಾಗಿ ಇವರ ಎರಡನೇ ಚಿತ್ರ. ಚಿತ್ರಕ್ಕೆ ವಿಮರ್ಶಕರಿಂದ ಅತ್ಯುತ್ತಮ ಪ್ರತಿಕ್ರಿಯೆ ಲಭಿಸಿತ್ತು.

ರಿಷಬ್ ಶೆಟ್ಟಿ
ಚಿತ್ರ: ಕಾಂತಾರ

ಪ್ರಾರಂಭದಲ್ಲಿ ಒಂದಷ್ಟು ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಾರೆ. 'ಉಳಿದವರು ಕಂಡಂತೆ' ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ಇವರು, 2016ರಲ್ಲಿ ನಿರ್ದೇಶಕರಾಗುತ್ತಾರೆ. 'ರಿಕಿ' ಇವರ ಚೊಚ್ಚಲ ನಿರ್ದೇಶನದ ಚಿತ್ರ. ಇವರ 'ಕಿರಿಕ್ ಪಾರ್ಟಿ' ಸೂಪರ್ ಹಿಟ್ ಎನಿಸಿಕೊಳ್ಳುತ್ತದೆ. 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ' ಕೂಡ ನಿರ್ದೇಶಕನಾಗಿ ಇವರಿಗೆ ದೊಡ್ಡ ಯಶಸ್ಸು ಮತ್ತು ರಾಷ್ಟ್ರ ಪ್ರಶಸ್ತಿಯನ್ನು ಗಳಿಸಿಕೊಡುತ್ತದೆ. ನಟರಾಗಿ ಬೆಲ್‌ಬಾಟಂ ಚಿತ್ರದಲ್ಲಿ ಯಶಸ್ಸು ಕಂಡು, 'ಹೀರೋ', 'ಹರಿಕಥೆಯಲ್ಲ ಗಿರಿಕಥೆ' ಚಿತ್ರಗಳಲ್ಲಿ ನಾಯಕರಾಗಿ ಕಾಣಿಸಿಕೊಳ್ಳುತ್ತಾರೆ. 'ಕಾಂತಾರ' ಚಿತ್ರವನ್ನು ನಿರ್ದೇಶಿಸಿ, ನಟಿಸಿದ್ದಾರೆ.

ಬಿಡುಗಡೆಗೆ ಸಜ್ಜಾದ ಅಗ್ರಸೇನಾ

ರಚನಾ ದಶರಥ್

ಹೊಸಬರಾದ ಅಮರ್ ವಿರಾಜ್ ಹಾಗೂ ರಚನಾ ದಶರಥ್ ಅಭಿನಯಿಸಿರುವ 'ಅಗ್ರಸೇನಾ' ಚಿತ್ರ ಬಿಡುಗಡೆಗೆ ಸಜ್ಜಾಗಿದೆ. ಮಮತಾ ಜಯರಾಮರೆಡ್ಡಿ ಈ ಚಿತ್ರದ ನಿರ್ಮಾಪಕರಾಗಿದ್ದು, ಭಜರಂಗಿ ಹರ್ಷ ಜೊತೆ ಕೆಲಸ ಮಾಡಿರುವ ಮುರುಗೇಶ್ ಕಣ್ಣಪ್ಪ ಆ್ಯಕ್ಷನ್-ಕಟ್ ಹೇಳಿದ್ದಾರೆ. ಚಿತ್ರದ ಟೀಸರ್ ಇತ್ತೀಚೆಗಷ್ಟೆ ಬಿಡುಗಡೆಗೊಂಡಿದೆ.

'ಹಿರಿಯನಟ ರಾಮಕೃಷ್ಣ ಅವರು ತಂದೆಯ ಪಾತ್ರವನ್ನು ನಿರ್ವಹಿಸುತ್ತಿದ್ದು, ಇದು ಅವರ 200ನೇ ಚಿತ್ರ. ಇದೊಂದು ಕೌಟಂಬಿಕ ಕಥಾಹಂದರ ಹೊಂದಿರುವ ಚಿತ್ರ. ಎರಡು ದಾರಿಯಲ್ಲಿ ಕಥೆ ನಡೆಯುತ್ತದೆ. ತಂದೆ-ಮಗನ ಸಂಬಂಧದ ಕಥೆ ಒಂದು ಕಡೆಯಾದರೆ, ನಾಯಕ ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲು ಹೇಗೆ ಹೋರಾಡುತ್ತಾನೆ ಎನ್ನುವುದು ಮತ್ತೊಂದು ದಾರಿ. ರಾಮಕೃಷ್ಣ ಅವರ ಪಾತ್ರಕ್ಕೂ ಎರಡು ಶೇಡ್ ಇದೆ. ಬೆಳಗಾವಿಯ ನಾಗರಾಜ ದೇಸಾಯಿ ಅವರ ವಾಡೆಯಲ್ಲಿ 15 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ' ಎಂದು ನಿರ್ದೇಶಕರು ಹೇಳಿದರು.

ನಾಯಕ ಅಮರ್ ಮಾತನಾಡಿ, 'ಹಳ್ಳಿ ಮತ್ತು ನಗರದಲ್ಲಿ ಕಥೆ ನಡೆಯಲಿದ್ದು, ನಗರ ಭಾಗದ ಕಥೆಯಲ್ಲಿ ನನ್ನ ಪಾತ್ರ ಬರುತ್ತದೆ' ಎಂದರು. 'ಚಿತ್ರದಲ್ಲಿ 6 ಹಾಡುಗಳಿವೆ. ಈಗಾಗಲೇ ಬಿಡುಗಡೆಗೊಂಡ ಹಾಡುಗಳಿಗೆ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ಚಿತ್ರದ ಪ್ರತಿ ಹಂತದಲ್ಲೂ ತಿರುವುಗಳನ್ನು ನೋಡಬಹುದು. ಚೆನ್ನೈ, ಹೈದರಾಬಾದ್, ಕೊಚ್ಚಿನ್‌ನಲ್ಲಿ ಹಿನ್ನೆಲೆ ಸಂಗೀತದ ಕೆಲಸಗಳು ನಡೆದಿವೆ' ಎಂದು ಸಂಗೀತ ನಿರ್ದೇಶಕ ಎಂ.ಎಸ್.ತ್ಯಾಗರಾಜ್ ವಿವರಿಸಿದರು. ಚಿತ್ರಕ್ಕೆ ಆರ್.ಪಿ.ರೆಡ್ಡಿ ಅವರ ಛಾಯಾಗ್ರಹಣವಿದ್ದು, ಶೀಘ್ರದಲ್ಲಿ ಚಿತ್ರ ತೆರೆಗೆ ಬರಲಿದೆ ಎಂದು ಚಿತ್ರತಂಡ ಹೇಳಿದೆ.

'ಸ್ಟಾರ್' ಆಗಲು ಹೊರಟ ಹೊಸಬರು!

ರಜತ್ ರಕ್ಷಾ

ಚಿತ್ರರಂಗಕ್ಕೆ ಬರುವ ಬಹುತೇಕರು 'ಸ್ಟಾರ್' ಆಗಿ ಬೆಳ್ಳಿತೆರೆಯಲ್ಲಿ ಮಿಂಚಬೇಕೆಂಬ ಕನಸು ಕಟ್ಟಿಕೊಂಡು ಬರುತ್ತಾರೆ. ಆದರೆ ಇದು ಆ ರೀತಿ ಸ್ಟಾರ್‌ಗಳ ಕಥೆಯಲ್ಲ. ಬದಲಿಗೆ 'ಸ್ಟಾರ್' ಎಂಬ ಶೀರ್ಷಿಕೆ ಇಟ್ಟುಕೊಂಡು ಸಿನಿಮಾ ಮಾಡಲು ಹೊರಟ ಹೊಸಬರ ಕಥೆ!

'ಪ್ಯಾಟಿ ಮಂದಿ ಕಾಡಿಗ್ ಬಂದ್ರು' ರಿಯಾಲಿಟಿ ಶೋನಲ್ಲಿ ವಿಜೇತರಾಗಿದ್ದ ಶರತ್ ತಮ್ಮದೇ ನಿರ್ಮಾಣದೊಂದಿಗೆ 'ಸ್ಟಾರ್' ಎಂಬ ಸಿನಿಮಾ ಪ್ರಾರಂಭಿಸಿದ್ದಾರೆ. ಚಿತ್ರಕ್ಕೆ ನಾಯಕ ಕೂಡ ಅವರೇ. ಅನು-ವಿಜಯಸೂರ್ಯ ದಂಪತಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿರುವುದು ಮತ್ತೊಂದು ವಿಶೇಷ. ಇತ್ತೀಚೆಗಷ್ಟೇ ಈ ಚಿತ್ರದ ಮೊದಲ ದೃಶ್ಯಕ್ಕೆ ಶಾಸಕ ರವಿ ಸುಬ್ರಮಣ್ಯ ಕ್ಲಾಪ್ ಮಾಡಿ ಶುಭ ಹಾರೈಸಿದರು. ಚಿತ್ರದ ನಾಯಕ ಹಾಗೂ ನಿರ್ಮಾಪಕ ಶರತ್ ಮಾತನಾಡಿ, 'ನಮ್ಮ ತಂದೆ ಪ್ರಕಾಶ್ ಫೈಟರ್ ಆಗಿ ಚಿತ್ರರಂಗದಲ್ಲಿ ಕೆಲಸ ಮಾಡಿದ್ದಾರೆ. ಅದೇ ನಾನು ಚಿತ್ರರಂಗಕ್ಕೆ ಬರಲು ಕಾರಣ. ಈ ಹಿಂದೆ ರಿಯಾಲಿಟಿ ಶೋನಲ್ಲಿ ಭಾಗವಹಿಸಿ ವಿಜೇತನಾಗಿದ್ದೆ. ಜೊತೆಗೆ ರಂಗಭೂಮಿ ಹಿನ್ನೆಲೆಯೂ ನನಗಿದೆ. ಇದೊಂದು ರೌಡಿಸಂ ಆಧಾರಿತ ಕಥೆ. ಚಿತ್ರದಲ್ಲಿ ಒಂದಷ್ಟು ನೈಜ ಘಟನೆಗಳನ್ನು ಹೇಳಿದರೂ, ಯಾರ ಹೆಸರನ್ನೂ ಸಹ ಬಳಸಿಕೊಳ್ಳುವುದಿಲ್ಲ' ಎಂದರು. '16 ವರ್ಷಗಳ ಹಿಂದೆ ನಾನು ಒಬ್ಬ ಲೈಟ್ ಬಾಯ್ ಆಗಿ ಸಿನಿ ಪಯಣ ಆರಂಭಿಸಿ, ಬರವಣಿಗೆಯಲ್ಲೇ ಹೆಚ್ಚು ಸಮಯ ಕಳೆದೆ. ಈಗ ನಿರ್ದೇಶಕನಾಗುತ್ತಿದ್ದೇನೆ. ಬೆಂಗಳೂರಿನಲ್ಲೇ ಹೆಚ್ಚು ಭಾಗದ ಶೂಟಿಂಗ್ ಮಾಡುತ್ತೇವೆ. ಹೊಡೆದಾಟಕ್ಕಿಂತ ಹೆಚ್ಚಾಗಿ ಥ್ರಿಲ್ಲರ್ ಇದೆ. ಕುತೂಹಲ ಕಾಪಾಡಿಕೊಂಡು ಹೋಗುವ ಕಥೆ' ಎಂದು ನಿರ್ದೇಶಕ ವಿಜಯಸೂರ್ಯ ಹೇಳಿದರು.

'ಸದ್ದು ವಿಚಾರಣೆ ನಡೆಯುತ್ತಿದೆ' ಚಿತ್ರದಲ್ಲಿ ನಟಿಸಿದ್ದ ರಜತ ರಕ್ಷಾ ಈ ಚಿತ್ರಕ್ಕೆ ನಾಯಕಿ. ಪ್ರವೀಣ್ ಎಂ ಛಾಯಾಗ್ರಹಣವಿದೆ. ವಿಕಾಸ್ ವಸಿಷ್ಠ ಸಂಗೀತ ನಿರ್ದೇಶಕರು.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸ್ವಪ್ನ-ಜಾಗ್ರತ ಅವಸ್ಥೆಗಳು

ಸ್ವಪ್ನಲೋಕವ ಜಾಗ್ರತಂ ಸುಳ್ಳೆನುವನಲ್ತೆ? |
ಸುಪ್ತಂಗೆ ಜಾಗ್ರತನ ಲೋಕಮುಂ ಸುಳ್ಳೇ ||
ಸ್ವಪ್ನ ಜಾಗ್ರತ್ಸುಪ್ತಿಗಳ ಹಿಂದೆ ನಿರ್ಲಿಪ್ತ - |
ಗುಪ್ತಾತ್ಮನಿಹುದು ದಿಟ - ಮಂಕುತಿಮ್ಮ || 893 ||

ಪದ-ಅರ್ಥ: ಜಾಗ್ರತಂ = ಎಚ್ಚರಿರುವವನು, ಸುಳ್ಳೆನುವನಲ್ತೆ = ಸುಳ್ಳು + ಎನ್ನುವನು + ಅಲ್ತೆ(ಅಲ್ಲವೇ), ಸುಪ್ತಂಗೆ = ಮಲಗಿದವನಿಗೆ, ಜಾಗ್ರತ್ಸುಪ್ತಿಗಳ = - ಜಾಗ್ರತ್ + ಸುಪ್ತಿಗಳ, ನಿರ್ಲಿಪ್ತ ಗುಪ್ತಾತ್ಮನಿಹುದು- = ನಿರ್ಲಿಪ್ತ + ಗುಪ್ತಾತ್ಮನು + ಇಹುದು(ಇರುವುಂ), ದಿಟ = ಸತ್ಯ.

ವಾಚ್ಯಾರ್ಥ: ಎಚ್ಚರವಾಗಿದ್ದವನು ಸ್ವಪ್ನದಲ್ಲಿ ಕಂಡದ್ದನ್ನು ಸುಳ್ಳೆನ್ನುವನವಲ್ಲವೆ? ಅದೇ ರೀತಿ ನಿದ್ರೆ ಹೋದವನಿಗೆ ಎಚ್ಚರದ ಪ್ರಪಂಚವೂ ಸುಳ್ಳೇ. ಈ ಸ್ವಪ್ನ ಮತ್ತು ಜಾಗ್ರತಗಳ ಹಿಂದೆ ನಿರ್ಲಿಪ್ತವಾದ, ಗುಪ್ತವಾದ ಆತ್ಮವಿರುವುದು ಸತ್ಯ.

ವಿವರಣೆ: ಮಾಂಡೂಕ್ಯೋಪನಿಷತ್ತು ಮೂರು ಅವಸ್ಥೆಗಳನ್ನು ಗುರುತಿಸುತ್ತದೆ. ಅವು ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ. ಇವುಗಳನ್ನು ಅವಸ್ಥಾತ್ರಯಗಳೆಂದು ಕರೆಯುತ್ತಾರೆ. ಗೌಡಪಾದರು ತಮ್ಮ ಕಾರಿಕೆಗಳಲ್ಲಿ ಅವಸ್ಥಾತ್ರಯಗಳ ಬಗ್ಗೆ ವಿಶಿಷ್ಟವಾಗಿ ವಿಶ್ಲೇಷಣೆ ಮಾಡಿದ್ದಾರೆ. ಒಂದು ರೀತಿಯಲ್ಲಿ ಈ ಕಗ್ಗ ಆ ವಿಶ್ಲೇಷಣೆಯ ಸಂಕ್ಷಿಪ್ತ ರೂಪದಂತಿದೆ. ಜಾಗ್ರತ್ ಅವಸ್ಥೆಯಲ್ಲಿ ಆತ್ಮ ಬಾಹ್ಯಪ್ರಜ್ಞೆಯನ್ನು ಹೊಂದಿ ಸ್ಥೂಲ ವಿಷಯಗಳನ್ನು ಅನುಭವಿಸುತ್ತದೆ. ಸ್ವಪ್ನಾವಸ್ಥೆಯಲ್ಲಿ ಅಂತಃಪ್ರಜ್ಞವಾಗಿ ಸೂಕ್ಷ್ಮ ವಿಷಯಗಳನ್ನು ಅರಿಯುತ್ತದೆ . ನಮಗೆ ತಿಳಿದಿರುವಂತೆ ಸ್ವಪ್ನದಲ್ಲಿ ಕಾಣುವ ದೃಶ್ಯಗಳೆಲ್ಲ ಮಿಥ್ಯೆ. ಅವು ನಿಜವಾಗಿದ್ದರೆ ಕನಸು ಕಾಣುವವನ ಶರೀರದಲ್ಲೇ ಇರಬೇಕಿತ್ತು. ಇದು ಅಸಾಧ್ಯ. ಯಾಕೆಂದರೆ ಕನಸಿನಲ್ಲಿ ಹಿಮಾಲಯ ಪರ್ವತ ಬರಬಹುದು, ಕಾಶ್ಮೀರದ ಕಣಿವೆ ಬರಬಹುದು, ಮಹಾನಗರಗಳು, ಜಲಪಾತಗಳು ಬರಬಹುದು. ಕನಸು ಕಾಣುವವ ಶರೀರದಿಂದ ಹೊರಗೆ ಹೋಗಿ ಆ ಪ್ರದೇಶಗಳನ್ನು ನೋಡಿದ್ದರೆ, ಎಚ್ಚರವಾದಾಗ ಅಲ್ಲಿಯೇ ಇರಬೇಕಿತ್ತು. ಕನಸಿನ ದೃಶ್ಯಗಳು ದೇಶಕಾಲಗಳಿಗೆ ಸಂಬಂಧಿಸಿಲ್ಲದಿರುವುದರಿಂದ ಅವು ಸುಳ್ಳು ಎಂದೇ ಹೇಳಬೇಕು. ಕನಸಿನಲ್ಲಿ ಓಡಾಡುವ ಶರೀರ ಕೇವಲ ಮತಿಭ್ರಾಂತಿ. ಜಾಗ್ರತ್ ಅವಸ್ಥೆಯೂ ಒಂದು ರೀತಿಯಲ್ಲಿ ಸ್ವಪ್ನವೇ. ಎಚ್ಚರದಲ್ಲಿ ನಾವು ಯಾವ ವಸ್ತುಗಳನ್ನು ಕಂಡು, ಸತ್ಯವೆಂದು ಭಾವಿಸುತ್ತೇವೋ ಅವೆಲ್ಲ ಅಶಾಶ್ವತವಾದವು, ಕ್ಷಣಿಕವಾದವು. ನಮ್ಮನ್ನು ಸಾಕಿ ಬೆಳೆಸಿದ ಹಿರಿಯರನ್ನು, ಸ್ನೇಹಿತರನ್ನು ಸತ್ಯವೆಂದು ನಂಬಿ ಬದುಕಿದ್ದೆವು. ಅವರೆಲ್ಲ ಕನಸಿನಂತೆ ಮಾಯವಾದರು. ಬಾಲ್ಯದಲ್ಲಿ ನೀವು ಕಂಡ, ಬೆಳೆದ ಹಳ್ಳಿ ಗುರುತೇ ಸಿಗದಂತೆ ಮಾಯವಾಗಿದೆ. ಅಲ್ಲಿ ನೀವೇ ಈಗ ಪರಕೀಯರು. ಯಾವುದು ಸತ್ಯವೆಂದು ಭಾಸವಾಗಿತ್ತೋ ಅದು ಈಗ ಕನಸು ಮಾತ್ರ.ಕಗ್ಗ ಅದನ್ನು ಒತ್ತಿ ಹೇಳುತ್ತದೆ. ಎಚ್ಚರದಲ್ಲಿದ್ದವನುಕನಸನ್ನು ಸುಳ್ಳೆನ್ನುತ್ತಾನೆ. ಸ್ವಪ್ನದಲ್ಲಿ ಮೈಮರೆತವನು ಪ್ರಪಂಚವನ್ನೇ ಕನಸಿನಂತೆ ಕಾಣುತ್ತಾನೆ. ಎರಡೂ ಅವಸ್ಥೆಗಳಿಗೆ ಕಾರಣನಾಗಿ, ಸಾಕ್ಷಿಯಾಗಿ ಒಂದು ಅಲೌಕಿಕವಾದ, ನಿರ್ಲಿಪ್ತವಾದ, ಗುಪ್ತವಾದ ಆತ್ಮವಿದೆ. ಅದೇ ಪರಮಾತ್ಮ ತತ್ವ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಮೇ 29, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ನವಮಿ ಗಂ. 11-50 ನಕ್ಷತ್ರ: ಉತ್ತರಫಲ್ಗುನಿ ಗಂ. 28-29 ಯೋಗ: ವಜ್ರ ಗಂ. 21-01, ಕರಣ: ಕೌಲವ ಗಂ. 11-50, ವೃಷಭ ಮಾಸದ 14 ನೇ ದಿನ, ಮಳೆನಕ್ಷತ್ರ: ರೋಹಿಣಿ 2.
ರಾಹುಕಾಲ : ಸಾಯಂಕಾಲ 07-30 – 09-00
ಸೂರ್ಯೋದಯ : 06-06 **ಸೂರ್ಯಾಸ್ತ :** 06-49
ಮುಸ್ಲಿಂ ದಿನಾಂಕ : 09 ಜುಲ್ಹಾಯದ್
ಅದೃಷ್ಟ ಸಂಖ್ಯೆ : 4, 7

ಮೇಷ: ಸವಾಲನ್ನು ಎದುರಿಸುವ ಶಕ್ತಿ ಮತ್ತು ಸಾಮರ್ಥ್ಯ ಅಭಿವೃದ್ಧಿಯಾಗುವುದು. ಈ ಹಿಂದೆ ನಡೆದ ದುರ್ಘಟನೆ ಮತ್ತೆ ಮರುಕಳಿಸದಂತೆ ಎಚ್ಚರವಹಿಸುವುದು ಸೂಕ್ತ. ದೇಹಾಯಾಸ ಮತ್ತು ಶೀತ ಬಾಧೆ ನಿವಾರಣೆಯಾಗುವುದು.

ವೃಷಭ: ದೇವರ ಆಭರಣ ತಯಾರಿಕೆ ಅಥವಾ ದೇವಾಲಯದ ಕೆಲಸದ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವಗಳಿವೆ. ಈ ದಿನದ ಕಾರ್ಯ ಮೊದಲೇ ನಿಶ್ಚಯಿಸಿಕೊಂಡು ಕ್ರಮ ಪ್ರಕಾರವಾಗಿ ಮಾಡುವುದು ಉತ್ತಮ.

ಮಿಥುನ: ದಾಂಪತ್ಯದಲ್ಲಿ ಸಮಸ್ಯೆಗಳು ತೋರಿಬಂದರೂ ಮುಂದಿನ ದಿನಗಳಲ್ಲಿ ಸಂತಸವಿದೆ. ಸಮಯಪ್ರಜ್ಞೆಯಿಂದ ಕಾರ್ಯನಿರ್ವಹಿಸಿ, ಗೆಲುವು ನಿಮ್ಮದಾಗುವುದು. ಸಂಬಂಧಿಗಳಲ್ಲಿರುವ ವ್ಯವಹಾರ ಮುಗಿಸುವ ಯತ್ನ ಮಾಡಿ.

ಕರ್ಕಾಟಕ: ಆತ್ಮವಿಶ್ವಾಸ ಹೆಚ್ಚಲಿದೆ. ದೃಢ ನಿಶ್ಚಯ ಮತ್ತು ಸಾಧಿಸಲೇ ಬೇಕೆಂಬ ಛಲದ ಮನೋಭಾವ ಯಶಸ್ಸಿಗೆ ಕಾರಣವೆನಿಸಲಿದೆ. ಮನೆಯ ಕಟ್ಟಡದ ದುರಸ್ತಿ ಕಾರ್ಯಗಳು ಅನಿವಾರ್ಯ. ಔಷಧ ಮಾರಾಟಗಳಲ್ಲಿ ಸಂಪಾದನೆ ಹೆಚ್ಚಲಿದೆ.

ಸಿಂಹ: ಮಗಳಿಂದ ಶುಭ ಸುದ್ದಿ ತಿಳಿಯುವಿರಿ. ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಅವರಿಂದಾಗಿ ಹೆಸರು ಹಾಳಾಗುವಂತೆ ಮಾಡುವ ಪ್ರಯತ್ನ ನಡೆಯಬಹುದು. ಅಪರೂಪದ ಸಮಾರಂಭಕ್ಕೆ ಶುಭಾಹ್ವಾನ ಬರುವುದು.

ಕನ್ಯಾ: ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವವು ನಿಮ್ಮಲ್ಲಿದೆ. ಭಾಗ್ಯವಂತರಾದ ಸಂಸ್ಥೆಯ ಹೊಸ ಯೋಜನೆಯು ಬಹಳ ಸುಲಭವೆನಿಸಲಿದೆ. ಅಧಿಕಾರಕ್ಕಾಗಿ ಹೆಚ್ಚಿನ ಓಡಾಟವನ್ನು ನಡೆಸುವಿರಿ. ಕೃಷಿ ಚಟುವಟಿಕೆ ಹೆಚ್ಚಿಸಿಕೊಳ್ಳಬಹುದು.

ತುಲಾ: ಸಾಂಸಾರಿಕವಾಗಿ ಅಥವಾ ವೈಯಕ್ತಿಕವಾಗಿ ಕೆಲವು ಮುಖ್ಯ ನಿರ್ಧಾರ ಕೈಗೊಳ್ಳುವಿರಿ. ಕಾರ್ಮಿಕರ ಸಮಸ್ಯೆಗಳಿಗೆ ಉತ್ತಮ ಪ್ರತಿಕ್ರಿಯೆ ಸಿಗುವುದು. ಸ್ವತಂತ್ರ ಜೀವನ ನಡೆಸುವ ನಿಮ್ಮ ಮುಂಗೋಪಿತನದ ತೀರ್ಮಾನ ಸರಿಯಲ್ಲ.

ವೃಶ್ಚಿಕ: ಸ್ನೇಹಿತರಲ್ಲಿ ಅನಗತ್ಯ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ಸಹೋದ್ಯೋಗಿಯ ನೆರವಿನಿಂದ ಕೆಲಸ ಕಾರ್ಯಗಳು ಶೀಘ್ರವಾಗಿ ಮನಸ್ಸಿಗೆ ಹಿತ ಕೊಡುವ ರೀತಿಯಲ್ಲಿ ಪೂರ್ಣಗೊಳ್ಳಲಿದೆ.

ಧನು: ದೈವಾನುಗ್ರಹದಿಂದ ನೀವು ಮಾಡುವ ಕೆಲಸದಲ್ಲಿ ಒಳ್ಳೆಯ ಲಾಭ ಪಡೆಯುವಿರಿ. ಸಮಯ ಯಾಚಿಸುತ್ತಿರುವುದರಿಂದ ಸ್ವಂತ ಕೆಲಸಗಳು ನಿಧಾನ ಗತಿಯಲ್ಲಿ ಸಾಗಲಿದೆ. ಉದ್ಯೋಗದಿಂದ ಒಳ್ಳೆಯ ಅನುಭವ ಸಿಗಲಿದೆ.

ಮಕರ: ಕುಟುಂಬದಲ್ಲಿ ಹಿಂದೆ ನಡೆದ ಕೆಟ್ಟ ವಿಚಾರಗಳ ಬಗ್ಗೆ ಮಾತನಾಡುವುದು ಸಹೋದರರಲ್ಲಿ ಪುನಃ ಭಿನ್ನಾಭಿಪ್ರಾಯ ಬೆಳೆಯಲು ಕಾರಣವಾಗುತ್ತದೆ. ನಿಮ್ಮನ್ನು ನೀವೇ ವಿಮರ್ಶಿಕೊಳ್ಳಿ ನಡವಳಿಕೆಯ ತಪ್ಪುಗಳು ಅರಿವಾಗುವುದು.

ಕುಂಭ: ತಂದೆ ತಾಯಿ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ತಪಾಸಣೆ ಅಗತ್ಯವೆನಿಸಲಿದೆ. ಹಲವು ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ವೃಥಾ ವೈರತ್ವ ಕಟ್ಟಿಕೊಳ್ಳದೆ ಕಾರ್ಯನಿರ್ವಹಿಸಿ.

ಮೀನ: ಜೀವನದಲ್ಲಿ ಸೋಮಾರಿತನ ಜತೆ ಅಹಂಕಾರವನ್ನು ದೂರ ಮಾಡಿದರೆ, ಯೋಗ್ಯತೆಗೆ ಮೀರಿದ ಕೆಲಸಕಾರ್ಯಗಳಿಗೆ ಕೈ ಹಾಕಿದರೂ ಸಮಸ್ಯೆ ಆಗುವುದಿಲ್ಲ. ಖರ್ಚುವೆಚ್ಚಗಳನ್ನು ಸರಿಯಾದ ಲೆಕ್ಕಾಚಾರ ನಡೆಸಿ.

ಪದಬಂಧ 5333

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಾಪವಿದ್ದಾಗ ಈ ಪರಿ ಬಂದಿರುವ ದುಃಖ! (4)
3.ಗಟ್ಟಿಯಾಗಿ ಕೂಗಿದರೆ ಕೇಳುವಷ್ಟು ದೂರ (4)
5.ಇದು ಅಂತರಂಗ ಸ್ಪರ್ಶಿಯಾದುದು (3)
6.ಅವನಲ್ಲಿ ಕಾಣುತ್ತಿರುವ ಕೆಟ್ಟಗುಣ (4)
8.ಬರದಿಂದ ಕಂಗೆಟ್ಟವನಿಗೆ ನೀಡಿರುವ ಪಾನಕ (4)
10.ಮನದಲ್ಲಿ ಓಟವನ್ನು ನೀಡುವಿಕೆ (4)
12.ಗರತಿ ಸೇರಿಕೊಂಡಿರುವ ಇಯತ್ತೆ (4)
13.ಬಲು ವಾಚಾಳಿಯಾಗಿರುವ ವರ (3)
16.ವ್ಯಂಗ್ಯದಿಂದ ಕೂಡಿದ ನಗೆ (4)
17.ನೂತನ ದಂಪತಿಗಳು ಕೈಗೊಳ್ಳುವ ವಿಹಾರಯಾತ್ರೆ (4)

ಮೇಲಿಂದ ಕೆಳಕ್ಕೆ
1.ಅತ್ತೆ ಗೊತ್ತುಹಚ್ಚಿರುವ ವಿಳಾಸ (2)
2.ಪಣವಿಟ್ಟು ತೋರಿಸಿದ ಅಳತೆ (4)
3.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
4.ಹೊಳೆ ದಾಟಲು ಬಳಸುವ ಸಾಧನ (2)
7.ವರನ ತಗಾದೆಯೇ ಇದು? (3)
9.ಬಹಳ ಆತ್ಮೀಯ ನೆಂಟರ ಸಮೂಹ (3)
11. ವನವಾಸದ ಒಂಬತ್ತು ತಿಂಗಳು (4)
12.ಈ ತರಹ ತೋರಿರುವ ಬೇಧಭಾವ (4)
14.ಕ್ರೂರನಾದವನು ತಿರುಗಿದ್ದಾನಲ್ಲಾ! (2)
15.ದೇವತೆಗಳ ಒಡೆಯನೀತ (2)



5332ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದಕ 3.ಕನಸು
4.ಮಡಕೆ 6.ಕುಶಲ
7.ವಾಡಿಕೆ 9.ಮರುಕ 11.ನಜರು
13.ದಿವಾನ 15.ಪ್ರವಾದಿ
17.ಲಫಂಗ 18.ವರ್ತಕ
19.ತಿವಸ

ಮೇಲಿಂದ ಕೆಳಕ್ಕೆ:
1.ಉಸುಕು 2.ಕಮಲ
3.ಕರಡಿ 5.ಕೆಸರು
7.ವಾಗ್ದಾನ 8.ಕೆನ್ನೀರು
9.ಮಸೀದಿ 10.ಕದನ
12.ಜಟಿಲ 14.ವಾದಕ
15.ಪ್ರಗತಿ 16.ದಿವಸ

ಸುಡೊಕು 5719

						5		7
	2		6		7		4	
		5		4			9	1
	4				1		7	
8				2			1	4
	9		7			6		
9				3		4		
			4		8		2	
2		4						3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5718 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ಕ್ರೆಡಿಟ್ ಕಾರ್ಡ್ ಬಳಕೆ ಹೆಚ್ಚಳ: ಪಿಡಬ್ಲ್ಯುಸಿ ಇಂಡಿಯಾ

ಯುಪಿಐ: ರಿಟೇಲ್ ವಹಿವಾಟಿನಲ್ಲಿ ಸಿಂಹಪಾಲು

ನವದೆಹಲಿ (ಪಿಟಿಐ): ಯುಪಿಐ ಮೂಲಕ ನಡೆಯುವ ವಹಿವಾಟು ಏರಿಕೆ ಕಾಣುತ್ತಿದ್ದು, 2026–27ರ ವೇಳೆಗೆ ದೇಶದಲ್ಲಿ ಯುಪಿಐ ವಹಿವಾಟು ಸಂಖ್ಯೆಯು ಪ್ರತಿ ದಿನಕ್ಕೆ 100 ಕೋಟಿಗೆ ತಲುಪುವ ಸಾಧ್ಯತೆ ಇದೆ ಎಂದು ವರದಿಯೊಂದು ಹೇಳಿದೆ.

ದೇಶದಲ್ಲಿ ನಡೆಯುವ ಡಿಜಿಟಲ್ ವಹಿವಾಟುಗಳಲ್ಲಿ ಯುಪಿಐ ಮೂಲಕ ನಡೆಯುವ ವಹಿವಾಟಿನ ಪಾಲು ಶೇ 90ರಷ್ಟು ಇರಲಿದೆ ಎಂದು ಪಿಡಬ್ಲ್ಯುಸಿ ಇಂಡಿಯಾ ವರದಿ ಹೇಳಿದೆ.

2022–23ರ ಹಣಕಾಸು ವರ್ಷದಲ್ಲಿ ಯುಪಿಐ ಮೂಲಕ 8,371 ಕೋಟಿಯಷ್ಟು ವಹಿವಾಟುಗಳು ನಡೆದಿದ್ದು, ಇದು 2026–27ರ ಹಣಕಾಸು ವರ್ಷದ ವೇಳೆಗೆ 37,900 ಕೋಟಿಗೆ ಏರಿಕೆ ಆಗಲಿದೆ ಎಂದು ಹೇಳಿದೆ.

2022–23ರಲ್ಲಿ ನಡೆದಿರುವ ರಿಟೇಲ್ ವಹಿವಾಟಿನ ಒಟ್ಟು ಪ್ರಮಾಣದಲ್ಲಿ ಶೇ 75ರಷ್ಟು ಯುಪಿಐ ಮೂಲಕವೇ ಆಗಿದೆ ಎಂದು ಪಿಡಬ್ಲ್ಯುಸಿ ವರದಿ 'ದಿ ಇಂಡಿಯನ್ ಪೇಮೆಂಟ್ಸ್ ಹ್ಯಾಂಡ್‌ಬುಕ್‌–2022–27'ರಲ್ಲಿ ಹೇಳಲಾಗಿದೆ.

ಭಾರತದ ಡಿಜಿಟಲ್ ಪಾವತಿ ಮಾರುಕಟ್ಟೆಯ ವಾರ್ಷಿಕ ಸಂಯುಕ್ತ ಬೆಳವಣಿಗೆ ಪ್ರಮಾಣವು (ಸಿಎಜಿಆರ್) ಶೇ 50ರಷ್ಟು ಇದ್ದು, 2026–27ರ ವೇಳೆಗೆ ವಹಿವಾಟುಗಳ ಸಂಖ್ಯೆಯು 41,100 ಕೋಟಿಗೆ ತಲುಪುವ ನಿರೀಕ್ಷೆ ಇದೆ.

ಯುಪಿಐನಲ್ಲಿ ಕ್ರೆಡಿಟ್ ಕಾರ್ಡ್ ಬಳಸಿ ವಹಿವಾಟು ನಡೆಸುವುದು ಉತ್ತಮ ಬೆಳವಣಿಗೆ ಕಾಣುತ್ತಿದೆ. 2024–25ರ ವೇಳೆಗೆ ಕ್ರೆಡಿಟ್ ಕಾರ್ಡ್ ಬಳಕೆ ಪ್ರಮಾಣವು ಡೆಬಿಟ್ ಕಾರ್ಡ್ ಬಳಕೆಯನ್ನೂ ಮೀರುವ ಅಂದಾಜು ಮಾಡಲಾಗಿದೆ.

ಮುಂದಿನ ಐದು ವರ್ಷಗಳಲ್ಲಿ ಕ್ರೆಡಿಟ್ ಕಾರ್ಡ್ ವಿತರಣೆಯ ವಾರ್ಷಿಕ ಸರಾಸರಿ ಬೆಳವಣಿಗೆ ಪ್ರಮಾಣವು ಶೇ 21ರಷ್ಟು ಆಗಲಿದ್ದು, ಡೆಬಿಟ್ ಕಾರ್ಡ್ ವಿತರಣೆಯು ಶೇ 3ರಷ್ಟು ಇರಲಿದೆ ಎಂದು ವರದಿ ತಿಳಿಸಿದೆ.

ವಂಡರ್‌ಲಾ ವರಮಾನ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಂಡರ್‌ಲಾ ಅಮ್ಯೂಸ್‌ಮೆಂಟ್ ಪಾರ್ಕ್, 2022–23ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹112.6 ಕೋಟಿ ವರಮಾನ ಗಳಿಸಿದೆ.

2020ರಲ್ಲಿ ₹44.91 ಕೋಟಿ ಇದ್ದ ವರಮಾನವು ಈ ಬಾರಿ ₹112.6 ಕೋಟಿಗೆ ತಲುಪಿದ್ದು, ಮೂರುಪಟ್ಟು ಏರಿಕೆ ಆಗಿದೆ ಎಂದು ವಂಡರ್‌ಲಾದ ವ್ಯವಸ್ಥಾಪಕ ನಿರ್ದೇಶಕ ಅರುಣ್ ಕೆ ಚಿಟ್ಟಿಲಪ್ಪಿಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜರ್ಮನಿಯಲ್ಲಿ ಹಿಂಜರಿತ: ರಫ್ತಿನ ಮೇಲೆ ಪರಿಣಾಮ ಸಾಧ್ಯತೆ

ನವದೆಹಲಿ (ಪಿಟಿಐ): ಜರ್ಮನಿಯು ಆರ್ಥಿಕ ಹಿಂಜರಿತಕ್ಕೆ ಜಾರಿರುವ ಪರಿಣಾಮವಾಗಿ, ಭಾರತದಿಂದ ಆ ದೇಶಕ್ಕೆ ರಾಸಾಯನಿಕಗಳು, ಯಂತ್ರಗಳು, ಬಟ್ಟೆ ಮತ್ತು ಎಲೆಕ್ಟ್ರಾನಿಕ್ಸ್ ವಲಯಗಳಿಂದ ಆಗುವ ರಫ್ತಿನ ಮೇಲೆ ಪರಿಣಾಮ ಉಂಟಾಗಬಹುದು ಎಂದು ಭಾರತೀಯ ಕೈಗಾರಿಕಾ ಮಹಾಸಂಘದ (ಸಿಐಐ) ಆಮದು ಮತ್ತು ರಫ್ತು ಸಮಿತಿಯ ಅಧ್ಯಕ್ಷ ಸಂಜಯ್ ಬುಧಿಯಾ ಹೇಳಿದ್ದಾರೆ.

ವಿಶ್ವದ ನಾಲ್ಕನೆಯ ಅತಿದೊಡ್ಡ ಅರ್ಥ ವ್ಯವಸ್ಥೆಯನ್ನು ಹೊಂದಿರುವ ಜರ್ಮನಿಯು ಆರ್ಥಿಕ ಹಿಂಜರಿತಕ್ಕೆ ಸಿಲುಕಿದೆ. '2022ರಲ್ಲಿ ಭಾರತದ ಒಟ್ಟು ರಫ್ತಿನಲ್ಲಿ ಜರ್ಮನಿಯ ಪಾಲು ಶೇ 4.4ರಷ್ಟು ಇತ್ತು. ಆರ್ಥಿಕ ಹಿಂಜರಿತದ ಪರಿಣಾಮವು ಭಾರತದ ರಫ್ತುಗಳ ಮೇಲೆ ಎಷ್ಟರಮಟ್ಟಿಗೆ ಇರಲಿದೆ ಎಂಬುದನ್ನು ಹೇಳಲು ಕಾಲ ಇನ್ನೂ ಪಕ್ವವಾಗಿಲ್ಲ' ಎಂದು ಅವರು ಹೇಳಿದ್ದಾರೆ.

ಆರ್ಥಿಕ ಹಿಂಜರಿತವು ಜರ್ಮನಿಯಿಂದ ಭಾರತಕ್ಕೆ ಬರುವ ಹೂಡಿಕೆಗಳ ಮೇಲೆಯೂ ಪರಿಣಾಮ ಉಂಟುಮಾಡಬಹುದು ಎಂದಿದ್ದಾರೆ.

ಸುಕನ್ಯಾ ಸಮೃದ್ಧಿ: ಸಪ್ತ ಸಂಗತಿಗಳು

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಹೆಣ್ಣು ಮಕ್ಕಳ ಆರ್ಥಿಕ ಹಿತಕ್ಕಾಗಿ ಕೇಂದ್ರ ಸರ್ಕಾರ ರೂಪಿಸಿರುವ ಸುಕನ್ಯಾ ಸಮೃದ್ಧಿ ಯೋಜನೆಯ ಪ್ರಯೋಜನವನ್ನು ಲಕ್ಷಾಂತರ ಮಂದಿ ಪೋಷಕರು ಪಡೆದುಕೊಂಡಿದ್ದಾರೆ. ಅಂಚೆ ಕಚೇರಿ ಮತ್ತು ಪ್ರಮುಖ ಬ್ಯಾಂಕುಗಳ ಮೂಲಕ ಜಾರಿಗೆ ಬಂದಿರುವ ಈ ಯೋಜನೆ ಜನಪ್ರಿಯವಾಗಿದ್ದರೂ ಕೆಲವು ಪ್ರಮುಖ ಅಂಶಗಳು, ನಿಯಮಗಳು ಹಲವರಿಗೆ ತಿಳಿದಿಲ್ಲ. ಅಂತಹ ಕೆಲವು ವೈಶಿಷ್ಟ್ಯಗಳ ಬಗ್ಗೆ ಗಮನ ಹರಿಸೋಣ.

1) ಹೆಚ್ಚು ಲಾಭ ಸಿಗಬೇಕಾದರೆ...: ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಪ್ರತಿ ತಿಂಗಳ 5ನೇ ತಾರೀಕಿಗಿಂತ ಮೊದಲು ಹೂಡಿಕೆ ಮಾಡಿದರೆ ಹೆಚ್ಚು ಲಾಭ ಸಿಗುತ್ತದೆ. ಪ್ರತಿ ತಿಂಗಳ ಒಂದನೇ ತಾರೀಕಿನ ನಂತರ ಹಾಗೂ 5ನೇ ತಾರೀಕಿನ ಒಳಗೆ ಹಣ ಹೂಡಿಕೆ ಮಾಡಿದರೆ ಆ ತಿಂಗಳಿನ ಬಡ್ಡಿ ಲೆಕ್ಕಹಾಕುವಾಗ ಈ ಮೊತ್ತವನ್ನು ಪರಿಗಣಿಸಲಾಗುತ್ತದೆ. ಐದನೇ ತಾರೀಕಿನ ಬಳಿಕ ಹೂಡಿಕೆ ಮಾಡುವ ಮೊತ್ತವನ್ನು ಮುಂದಿನ ತಿಂಗಳಿನಲ್ಲಿ ಬಡ್ಡಿ ಲೆಕ್ಕಾಚಾರ ಮಾಡುವಾಗ ಪರಿಗಣಿಸಲಾಗುತ್ತದೆ. ಹಾಗಾಗಿ ಸುಕನ್ಯಾ ಸಮೃದ್ಧಿ ಖಾತೆಯಲ್ಲಿ ಹೂಡಿಕೆಯನ್ನು ಸಾಧ್ಯವಾದಷ್ಟುಮಟ್ಟಿಗೆ ತಿಂಗಳ 5ನೇ ತಾರೀಕಿನ ಮೊದಲು ಮಾಡಿ.

2. ಎರಡಕ್ಕಿಂತ ಹೆಚ್ಚು ಖಾತೆ ತೆರೆಯಲು ಅವಕಾಶ: ನಿಯಮದ ಪ್ರಕಾರ ಸುಕನ್ಯಾ ಸಮೃದ್ಧಿ ಯೋಜನೆಯ ಅಡಿಯಲ್ಲಿ ಗರಿಷ್ಠ ಎರಡು ಖಾತೆ ಆರಂಭಿಸಬಹುದು. ಆದರೆ ನಿಮಗೆ ಅವಳಿ ಅಥವಾ ತ್ರಿವಳಿ ಮಕ್ಕಳಿದ್ದರೆ ಎರಡಕ್ಕಿಂತ ಹೆಚ್ಚಿನ ಖಾತೆಗಳನ್ನು ತೆರೆಯಲು ಕಾನೂನಿನಲ್ಲಿ ಅವಕಾಶ ಒದಗಿಸಲಾಗಿದೆ.

3. ಹೂಡಿಕೆ ಅವಧಿಗೆ ಮಿತಿ ಇದೆ: ಸುಕನ್ಯಾ ಸಮೃದ್ಧಿ ಯೋಜನೆ ಅಡಿಯಲ್ಲಿ ಗರಿಷ್ಠ 15 ವರ್ಷಗಳವರೆಗೆ ಮಾತ್ರ ಹೂಡಿಕೆ ಮಾಡಲು ಅವಕಾಶವಿದೆ. ಖಾತೆಯಲ್ಲಿ ಹೂಡಿಕೆ ಆರಂಭಿಸಿ 15 ವರ್ಷ ಪೂರೈಸಿದ ಬಳಿಕ ತಂದೆ-ತಾಯಿ ಅಥವಾ ಪೋಷಕರು ಯಾವುದೇ ಕಾರಣಕ್ಕೂ ಹಣ ತೊಡಗಿಸಲು ಅವಕಾಶ ಸಿಗುವುದಿಲ್ಲ.

4. ಎರಡು ಹಂತಗಳ ಮೆಚ್ಯುರಿಟಿ: ಸುಕನ್ಯಾ ಸಮೃದ್ಧಿ ಖಾತೆಯಲ್ಲಿ ಹೂಡಿಕೆ ಮಾಡಿರುವ ಮೊತ್ತವನ್ನು ಹಿಂಪಡೆಯಬೇಕಾದರೆ ಖಾತೆ ಹೊಂದಿರುವ ಹೆಣ್ಣು ಮಗಳಿಗೆ 21 ವರ್ಷ ತುಂಬಿರಬೇಕು. ಒಂದೊಮ್ಮೆ ಹೆಣ್ಣು ಮಗಳು 18 ತುಂಬಿದ ಕೂಡಲೇ ವಿವಾಹವಾಗುವಂತಹ ಸಂದರ್ಭವಿದ್ದರೆ ಆಗಲೂ ಹಣ ಹಿಂದಕ್ಕೆ ಪಡೆಯಲು ಅವಕಾಶವಿದೆ.

5. ಹಣ ಭಾಗಶಃ ಹಿಂಪಡೆಯಲು ಅವಕಾಶ: ಹೆಣ್ಣು ಮಗುವಿಗೆ 18 ವರ್ಷ ತುಂಬಿದಾಗ ಸುಕನ್ಯಾ ಸಮೃದ್ಧಿ ಖಾತೆಯಲ್ಲಿನ ಹೂಡಿಕೆಯ ಶೇ 50ರಷ್ಟು ಮೊತ್ತ ಹಿಂಪಡೆಯಲು ಅವಕಾಶವಿದೆ. ಹೆಣ್ಣು ಮಗು 10ನೇ ತರಗತಿ ಪಾಸಾದ ಬಳಿಕವೂ ಶೇ 50ರಷ್ಟು ಹಣ ತೆಗೆದುಕೊಳ್ಳುವ ಅನುಕೂಲ ಕಲ್ಪಿಸಲಾಗಿದೆ.

6. ಸುಕನ್ಯಾ ಸಮೃದ್ಧಿ ಖಾತೆ ಸ್ಥಗಿತಗೊಳ್ಳಬಹುದು: ಸುಕನ್ಯಾ ಸಮೃದ್ಧಿ ಖಾತೆ ಹೊಂದಿರುವವರು ಪ್ರತಿ ಹಣಕಾಸು ವರ್ಷದಲ್ಲೂ ಹೂಡಿಕೆ ಮಾಡಬೇಕು. ಹೂಡಿಕೆ ಮಾಡದಿದ್ದರೆ ಅದು ಚಾಲ್ತಿಯಲ್ಲಿ ಇಲ್ಲದ ಖಾತೆಯಾಗಿ ಮಾರ್ಪಾಡಾಗುತ್ತದೆ. 15 ವರ್ಷಗಳ ಒಳಗೆ ಖಾತೆ ಮಧ್ಯಂತರ ಸ್ಥಗಿತಗೊಂಡರೆ ಅದನ್ನು ಸರಿಪಡಿಸಿಕೊಳ್ಳಲು ಸಾಧ್ಯವಿದೆ.

ಒಂದು ವರ್ಷ ನಿಮ್ಮ ಖಾತೆ ಚಾಲ್ತಿಯಲ್ಲಿ ಇರದಿದ್ದರೆ ₹50ರಂತೆ ದಂಡ ಪಾವತಿಸಿ ಖಾತೆ ಚಾಲ್ತಿಗೆ ತಂದುಕೊಳ್ಳಬಹುದು.

7. ಪ್ರತಿ 3 ತಿಂಗಳಿಗೊಮ್ಮೆ ಬಡ್ಡಿ ದರ ಬದಲು: ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಬಡ್ಡಿ ದರ ಬದಲಾಗುತ್ತದೆ. 2015ರಲ್ಲಿ ಸುಕನ್ಯಾ ಸಮೃದ್ಧಿ ಯೋಜನೆಯ ಬಡ್ಡಿ ದರ ಶೇ 9.2ರಷ್ಟಿತ್ತು. ಈಗ ಪ್ರಸ್ತುತ ಬಡ್ಡಿ ದರ ಶೇ 7.6ರಷ್ಟಿದೆ. ಬಡ್ಡಿ ದರ ಎಷ್ಟು ಸಿಗುತ್ತದೆ ಎನ್ನುವುದರ ಆಧಾರದಲ್ಲಿ ನಿಮ್ಮ ಲಾಭಾಂಶದ ಅಂತಿಮ ಮೊತ್ತ ನಿರ್ಧಾರವಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

5 ತಿಂಗಳ ಗರಿಷ್ಠ ಮಟ್ಟಕ್ಕೆ ಷೇರುಪೇಟೆ

ಮೇ 26ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಉತ್ತಮ ಗಳಿಕೆ ದಾಖಲಿಸಿದೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಐದು ತಿಂಗಳ ಗರಿಷ್ಠ ಮಟ್ಟ ತಲುಪಿವೆ. 62,501 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.25ರಷ್ಟು ಗಳಿಸಿಕೊಂಡಿದೆ. 18,499 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.62ರಷ್ಟು ಹೆಚ್ಚಳವಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಮಿಶ್ರ ಪ್ರತಿಕ್ರಿಯೆ ಕಂಡುಬಂದರೂ ವಾಡಿಕೆಯ ಮುಂಗಾರು ನಿರೀಕ್ಷೆ, ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಉತ್ತಮ ಗಳಿಕೆ, ಸಾಂಸ್ಥಿಕ ಹೂಡಿಕೆದಾರರಿಂದ ಸಿಕ್ಕ ಬಲ ಸೇರಿದಂತೆ ಇನ್ನಿತರ ಕೆಲವು ಅಂಶಗಳು ಸೂಚ್ಯಂಕಗಳ ಚೇತರಿಕೆಗೆ ದಾರಿ ಮಾಡಿಕೊಟ್ಟವೆ.

ವಲಯವಾರು ನೋಡಿದಾಗ ಎಲ್ಲ ಸೂಚ್ಯಂಕಗಳು ಸಕಾರಾತ್ಮಕವಾಗಿ ಕಂಡುಬಂದಿವೆ. ನಿಫ್ಟಿ ಲೋಹ ಸೂಚ್ಯಂಕ ಶೇ 5.6ರಷ್ಟು, ಫಾರ್ಮಾ ಸೂಚ್ಯಂಕ ಶೇ 4ರಷ್ಟು, ಮಾಧ್ಯಮ ಸೂಚ್ಯಂಕ ಶೇ 3.8ರಷ್ಟು, ಆರೋಗ್ಯ ವಲಯದ ಸೂಚ್ಯಂಕ ಶೇ 3.8ರಷ್ಟು ಮತ್ತು ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 3.7ರಷ್ಟು ಹೆಚ್ಚಳ ದಾಖಲಿಸಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವಾರ ₹3,230.49 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹3,482.21 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಎಂಟರ್‌ಪ್ರೈಸಸ್, ಡಿವೀಸ್ ಲ್ಯಾಬೊರೇಟರಿಸ್, ಅದಾನಿ ವಿಲ್ಮಾರ್ ಮತ್ತು ಅದಾನಿ ಟೋಟಲ್ ಗ್ಯಾಸ್ ಶೇ 10ರಿಂದ ಶೇ 30ರಷ್ಟು ಗಳಿಸಿಕೊಂಡಿವೆ. ಬಿಎಸ್‌ಇ ಮಿಡ್ ಕ್ಯಾಪ್‌ನಲ್ಲಿ ಬಾಲಕೃಷ್ಣ ಇಂಡಸ್ಟ್ರೀಸ್, ಸಿಜಿ ಪವರ್ ಆ್ಯಂಡ್ ಇಂಡಸ್ಟ್ರಿಯಲ್ ಸಲ್ಯೂಷನ್ಸ್, ಬಜಾಜ್ ಹೋಲ್ಡಿಂಗ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್, ಅದಾನಿ ಪವರ್, ಲಾರಸ್ ಲ್ಯಾಬ್ಸ್, ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾ ಮತ್ತು ಮುತ್ತೂಟ್ ಫೈನಾನ್ಸ್ ಜಿಗಿದಿವೆ. ಗ್ಲ್ಯಾಂಡ್ ಫಾರ್ಮಾ, ಪೇಜ್ ಇಂಡಸ್ಟ್ರೀಸ್ ಕ್ರಮವಾಗಿ ಶೇ 13 ಮತ್ತು ಶೇ 10ರಷ್ಟು ಕುಸಿದಿವೆ. ಬಿಎಸ್‌ಇ ಸ್ಮಾಲ್ ಕ್ಯಾಪ್‌ನಲ್ಲಿ ನ್ಯೂಕ್ಲಿಯಸ್ ಸಾಫ್ಟ್‌ವೇರ್ ಎಕ್ಸ್‌ಪೋರ್ಟ್ಸ್, ಶಿಂಡ್ಲರ್ ಇಲೆಕ್ಟ್ರಿಕ್ ಇನ್ಫ್ರಾಸ್ಟ್ರಕ್ಚರ್, ಇಂಡಿಯಾ ಬುಲ್ಸ್ ರಿಯಲ್ ಎಸ್ಟೇಟ್, ಹಿಂಡ್‌ವೇರ್ ಹೋಮ್ ಇನ್ನೊವೇಷನ್, ಡಿಕ್ಸಾನ್ ಟೆಕ್ನಾಲಜೀಸ್, ಆನ್ ವರ್ಡ್ ಟೆಕ್ನಾಲಜೀಸ್ ಮತ್ತು ಶ್ರೇಯಸ್ ಶಿಪ್ಪಿಂಗ್ ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಅಪೋಲೊ, ಕ್ಯಾಂಪಸ್, ಎಂಪವರ್, ಎಫಿಕ್, ಫ್ಯಾಮಿಲ್ ಕೇರ್, ಫಿಷರ್, ಫೋರ್ಸ್ ಮೋಟರ್ಸ್ ಲಿ., ಫ್ರಂಟ್ ಕ್ಯಾಪ್, ಗೋಕುಲ್, ಗೋಲ್ಡ್ ಟೆಕ್, ಶ್ರೀ ಹನುಮಾನ್ ಶುಗರ್ ಇಂಡಸ್ಟ್ರೀಸ್, ಹೈಪರ್ ಸಾಫ್ಟ್ ಟೆಕ್ನಾಲಜೀಸ್, ಐಟಿಐ ಲಿ. ಸೇರಿ ಕೆಲವು ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ.

ಜೂನ್ 6ರಿಂದ 8ರ ತನಕ ಆರ್‌ಬಿಐ ಹಣಕಾಸು ಸಮಿತಿ ಸಭೆ ನಡೆಯಲಿದೆ. ಆರ್‌ಬಿಐ ಬಡ್ಡಿ ದರ ಹೆಚ್ಚಳ ಮಾಡಲು ಮುಂದಾದರೆ ಅದರ ಪರಿಣಾಮ ಷೇರುಪೇಟೆ ಮೇಲೆ ಆಗಲಿದೆ. ಜಾಗತಿಕ ವಿದ್ಯಮಾನಗಳು ಹಾಗೂ ದೇಶಿ ಬೆಳವಣಿಗೆಗಳು ಸೂಚ್ಯಂಕಗಳ ಏರಿಳಿತ ನಿರ್ಧರಿಸಲಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪಾಕ್: ಹಿಮಕುಸಿತಕ್ಕೆ 10 ಮಂದಿ ಸಾವು

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಗಿಲ್ಗಿಟ್‌–ಬಲೂಚಿಸ್ತಾನ್ ವಲಯದಲ್ಲಿ ಶನಿವಾರ ಹಿಮಕುಸಿತದಿಂದ ಕನಿಷ್ಠ 10 ಮಂದಿ ಮೃತಪಟ್ಟಿದ್ದು, ಇತರೆ 25 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರಲ್ಲಿ ಮೂವರು ಮಹಿಳೆಯರು ಸೇರಿದ್ದು, ಗಾಯಾಳುಗಳಲ್ಲಿ 12 ಜನರ ಸ್ಥಿತಿ ಗಂಭೀರವಾಗಿದೆ. ಪಾಕಿಸ್ತಾನ ಸೇನೆಯ ಯೋಧರ ಜೊತೆಗೆ ಸ್ಥಳೀಯರು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು ಎಂದು ತಿಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹530
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹535

ಕೀವ್: ರಷ್ಯಾದಿಂದ ಡ್ರೋನ್ ದಾಳಿ

ದಾಳಿಗೆ ಓರ್ವ ಬಲಿ • 40 ಡ್ರೋನ್ ಹೊಡೆದುರುಳಿಸಿದ ಉಕ್ರೇನ್ ಸೇನೆ

ಕೀವ್ (ಎಪಿ): ಉಕ್ರೇನ್‌ನ ರಾಜಧಾನಿ ಕೀವ್ ಅನ್ನು ಗುರಿಯಾಗಿಸಿ ರಷ್ಯಾ ಸೇನೆ ಶನಿವಾರ ಡ್ರೋನ್ ದಾಳಿ ನಡೆಸಿದ್ದು, ಒಬ್ಬರು ಸತ್ತಿದ್ದಾರೆ.

ಯುದ್ಧ ಆರಂಭವಾದ ಬಳಿಕ ನಡೆದ ದೊಡ್ಡ ಸ್ವರೂಪದ ಡ್ರೋನ್ ದಾಳಿ ಇದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ವಾರ್ಷಿಕೋತ್ಸವ ಆಚರಣೆಗೆ ಕೀವ್ ನಗರ ಸಿದ್ಧತೆಯಲ್ಲಿರುವಾಗಲೇ, ಮುನ್ನಾದಿನದಂದು ರಷ್ಯಾ ದಾಳಿ ನಡೆಸಿದೆ. ಇರಾನ್ ಅಭಿವೃದ್ಧಿಪಡಿಸಿರುವ ಶಾಹೆದ್ ಡ್ರೋನ್ ಬಳಸಿ ದಾಳಿ ನಡೆದಿದೆ ಎಂದು ಉಕ್ರೇನ್ ಸೇನಾ ಅಧಿಕಾರಿ ಸೆರ್ರಿಲ್ ಪೊಪ್ಕೊ ಹೇಳಿದ್ದಾರೆ.

ಸುಮಾರು ಐದು ಗಂಟೆ ಕಾಲ ನಿರಂತರವಾಗಿ ದಾಳಿ ನಡೆಯಿತು. ಉಕ್ರೇನ್ ಸೇನೆಯು ಪ್ರತಿರೋಧ ತೋರಿದ್ದು ಸುಮಾರು 40 ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದೂ ಅವರು ತಿಳಿಸಿದರು.

ರಷ್ಯಾ ಶನಿವಾರ ನಡೆಸಿದ ಡ್ರೋನ್ ದಾಳಿಯಲ್ಲಿ ಉಕ್ರೇನ್‌ನ ರಾಜಧಾನಿ ಕೀವ್‌ನಲ್ಲಿ ವಸತಿ ಕಟ್ಟಡವೊಂದಕ್ಕೆ ಭಾಗಶಃ ಹಾನಿಯಾಗಿದೆ –ಎಎಫ್‌ಪಿ ಚಿತ್ರ

41 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ದಾಳಿಯಿಂದ ಬಹುಮಹಡಿ ಕಟ್ಟಡವೊಂದು ಕುಸಿದಿದ್ದು, ಅವಶೇಷಗಳಡಿ ಸಿಕ್ಕು ಮಹಿಳೆಯೊಬ್ಬರು ಗಾಯಗೊಂಡರು ಎಂದು ಅಧಿಕಾರಿಗಳು ವಿವರಿಸಿದರು.

ಉಕ್ರೇನ್ ವಾಯುಪಡೆ ಅಧಿಕಾರಿಗಳು, ಶನಿವಾರ ರಾತ್ರಿಯೇ ದಾಳಿ ಆರಂಭವಾಗಿದ್ದು, ದೇಶದ ವಿವಿಧೆಡೆ ಸುಮಾರು 54 'ಶಾಹೆದ್' ಡ್ರೋನ್ ಅನ್ನು ಪ್ರಯೋಗಿಸಲಾಗಿದೆ ಎಂದು ತಿಳಿಸಿದರು. ಹಾರ್ಕಿವ್ ಪ್ರಾಂತ್ಯದಲ್ಲಿ ನಡೆದ ಎರಡು ಪ್ರತ್ಯೇಕ ಶೆಲ್ ದಾಳಿಯಲ್ಲಿ ಮಹಿಳೆಯೊಬ್ಬರು ಸೇರಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಪ್ರಾದೇಶಿಕ ಗವರ್ನರ್ ತಿಳಿಸಿದರು.

2022ರ ಫೆಬ್ರುವರಿಯಲ್ಲಿ ಉಕ್ರೇನ್‌ನ ಮೇಲೆ ಅತಿಕ್ರಮಣ ಆರಂಭವಾದ ಬಳಿಕ ಗಡಿಯಲ್ಲಿ ನಿರಂತರವಾಗಿ ಡ್ರೋನ್ ದಾಳಿ ನಡೆಯುತ್ತಿದೆ. ಏಪ್ರಿಲ್ ತಿಂಗಳಲ್ಲಿ ದಾಳಿ ಪ್ರಮಾಣ ಹೆಚ್ಚಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

WANTED
B.Sc / M.Sc in Geologist (MIS) Agri, Veterinary (BVSc) MBA in Agri Marketing
MSW - With Computer Knowledge, Field Exp. is Desirable 3 to 5 Years Exp. & Freshers Also.
Send Your CV and Marks card Convocation Certificate and photo to the below e-mail ID : mahatmagandhitrust@gmail.com
GOVT. OF INDIA PROJECT WORK, PLACE OF WORK : Bangalore Rural, Hassan and Tumkur Districts
Interview held on : 26th to 31st May 2023 @ 2:00 pm to 5:00 pm (Sunday Holiday)
Mahathma Gandhi Trust (R)
0821-2420374
93438 28203
99454 25447
www.mahatmagandhitrust.com

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಕೆಲಸ: ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್,ಡೇಟಾ ಎಂಟ್ರಿ, ಫಾರಂ ಫಿಲ್ಲಿಂಗ್ ಹಾಗೂ ಟೆಲಿಕಾಲಿಂಗ್ ಹುದ್ದೆಗಳು.ಗಳಿಸಿ,ತಿಂಗಳಿಗೆ 10,000-15,000/-. 8884013618, 6362470664,

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Wanted

Teju READY MIX MASALA ಬೇಕಾಗಿದ್ದಾರೆ. ಸೇಲ್ಸ್ ರೆಪ್ರೆಸೆಂಟೇಟಿವ್ ಬೆಂಗಳೂರು ಮತ್ತು ಮೈಸೂರು (2 ವರ್ಷಗಳ FMCG ಅನುಭವ)
Contact : J.S. Masala Company
61/7, ಪೇಟೆ ಚನ್ನಪ್ಪ ಇಂಡಸ್ಟ್ರಿಯಲ್ ಲೇಔಟ್, ಮಾಗಡಿ ಮುಖ್ಯ ರಸ್ತೆ, ಕಾಮಾಕ್ಷಿಪಾಳ್ಯ, ಬೆಂಗಳೂರು – 560079
e-mail : tejumasala@yahoo.com
Web : www.tejumasala.com
9845182939 / 9611679507
8073441013 / 7411143331

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611227266/ 9611221244

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟವಸತಿ ಇದೆ.12,000 - 17,000. 8951315839, 9880120052

TYPING WORK: ಮನೆಯಲ್ಲಿ ಕುಳಿತು ಮೊಬೈಲ್ ಅಥವಾ Laptop ನಲ್ಲಿ ಕೆಲಸ ಮಾಡಿ ವಾರಕ್ಕೆ 10,000 ಸಂಪಾದಿಸಿ: 8296530236

ಪ್ರವಾಸ

Travel

18 ದಿನಗಳ ಯುಕೆ ಯುರೋಪ್ ಪ್ರವಾಸ ಹತ್ತು ದೇಶಗಳು, ವಿಮಾನದರ,ವೀಸ,ವಸತಿ, ಊಟ,gst,ವಿಮೆ, ಪ್ರವಾಸ ಕೋಚ್, ಪ್ರೇಕ್ಷಣೀಯ ಸ್ಥಳಗಳು ಎಲ್ಲಾ ಸೇರಿರುತ್ತದೆ.ಹೊರಡುವ ದಿನ 26.07.2023. ಹಾಗೂ ಇತರೆ ಪ್ರವಾಸ. ಬುಕ್ಕಿಂಗ್‌ಗಳಿಗಾಗಿ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9880079644, 9900080791

10/7/2023 13/17ದಿನಗಳು ರೈಲು/ವಿಮಾನದಲ್ಲಿ ದೆಹಲಿ ಆಗ್ರ ಅಮೃತಸರ ವೈಷ್ಣವದೇವಿ ಅಮರನಾಥ್ ಕಾಶ್ಮೀರ ಕುರುಕ್ಷೇತ್ರ ಇತ್ಯಾದಿ24000/34000/ (ಕೆಲವೇ ಸೀಟುಗಳಿವೆ)'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

Book Your Classifieds Ads Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Mob. 9008419955, 9901520055, 9449198555,
Email : info@thercss.com
Website : www.thercss.com

07.07.2023 11.09.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 15.06.2023 19.07.2023 ಭೂತಾನ್ 8 ದಿನಗಳು. 18.07.2023 20.08.2023 ನೇಪಾಳ,ಮುಕ್ತಿನಾಥ್ 9 ದಿನಗಳು. 22.06.2023 27.07.2023 ರಾಮೇಶ್ವರ,ಮದುರೈ, ಕುಂಭಕೋಣಮ್ 6 ದಿನಗಳು. 25.06.2023 27.07.2023 ಗ್ಯಾಂಗ್‌ಟಾಕ್,ಡಾರ್ಜಲಿಂಗ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03 9448402248 7022547922

28.06.2023ರಿಂದ 13ದಿನಗಳು ದೆಹಲಿ, ಕುರುಕ್ಷೇತ್ರ,ವೈಷ್ಣೋದೇವಿ,ಕಾಶ್ಮೀರ್ ,ಅಮರನಾಥ್, ಹಿಮಲಿಂಗದರ್ಶನ, ಅಮೃತಸರ್,ಲವಕುಶ ಜನ್ಮಸ್ಥಳ. 12.07.2023ರಿಂದ 16 ದಿನಗಳು ಕಾಶಿ, ಗಯಾ,ನೇಪಾಳ,ಮುಕ್ತಿನಾಥ,ಅಯೋಧ್ಯ,ನೇಮಿಷಾರಣ್ಯ,ಪ್ರಯಾಗ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ, ಬೆಂಗಳೂರು-70. 9342287551, 8050629305

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕುಸ್ತಿಪಟುಗಳು ಪೊಲೀಸ್ ವಶಕ್ಕೆ

ಒಂದನೇ ಪುಟದಿಂದ...

'ಕಾನೂನು ಮತ್ತು ಸುವ್ಯವಸ್ಥೆ ಉಲ್ಲಂಘಿಸಿದ ಆರೋಪದಲ್ಲಿ ಕುಸ್ತಿಪಟುಗಳನ್ನು ಬಂಧಿಸಲಾಗಿದೆ. ತನಿಖೆಯ ಬಳಿಕ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ವಿಶೇಷ ಪೊಲೀಸ್ ಆಯುಕ್ತ ದೀಪೇಂದ್ರ ಪಾಠಕ್ ಹೇಳಿದ್ದಾರೆ.

'ನಾವು ನೀಡಿರುವ ಎಚ್ಚರಿಕೆಯನ್ನು ಕಡೆಗಣಿಸಿ ಕುಸ್ತಿಪಟುಗಳು ಬ್ಯಾರಿಕೇಡ್‌ಗಳನ್ನು ಮುರಿದು ಮುಂದೆ ಹೋಗಲು ಯತ್ನಿಸಿದಾಗ ಅವರನ್ನು ವಶಕ್ಕೆ ಪಡೆದು ಅಲ್ಲಿಂದ ತೆರವುಗೊಳಿಸಿದ್ದೇವೆ' ಎಂದೂ ವಿವರಿಸಿದ್ದಾರೆ.

'ದೇಶದ ಯಾವುದಾದರೂ ಸರ್ಕಾರ ಚಾಂಪಿಯನ್‌ಗಳನ್ನು ಈ ರೀತಿ ನಡೆಸಿಕೊಂಡಿತ್ತೇ? ನಾವು ಯಾವ ತಪ್ಪು ಮಾಡಿದ್ದೇವೆ?' ಎಂದು ಬಜರಂಗ್ ಪೂನಿಯಾ ಟ್ವೀಟ್ ಮಾಡಿದ್ದಾರೆ.

'ವಿಶ್ವವೇ ನಮ್ಮನ್ನು ನೋಡುತ್ತಿದೆ. ಲೈಂಗಿಕ ದೌರ್ಜನ್ಯದ ಆರೋಪ ಹೊತ್ತಿರುವ ಬ್ರಿಜ್‌ಭೂಷಣ್ ಅವರು ಇಂದು ಸಂಸತ್ ಭವನದಲ್ಲಿ ಕೂತಿದ್ದಾರೆ. ನಮ್ಮನ್ನು ರಸ್ತೆಯಲ್ಲಿ ಎಳೆದಾಡಲಾಗಿದೆ. ಭಾರತದ ಕ್ರೀಡಾ ಕ್ಷೇತ್ರಕ್ಕೆ ಇದು ದುಃಖದ ದಿನ' ಎಂದು ಸಾಕ್ಷಿ ಮಲಿಕ್ ಟ್ವೀಟ್ ಮಾಡಿದ್ದಾರೆ. 'ದೇಶಕ್ಕೆ ಪದಕ ತಂದು ಕೊಡುವುದು ಅಪರಾಧವೇ? ಹಾಗಿದ್ದರೆ ನಮ್ಮನ್ನು ಗಲ್ಲಿಗೇರಿಸಲಿ' ಎಂದಿದ್ದಾರೆ.

ನೂತನ ಸಂಸತ್ ಭವನದ ಮುಂದೆ 'ಮಹಿಳಾ ಮಹಾಪಂಚಾಯಿತಿ' ನಡೆಸಲು ಕುಸ್ತಿಪಟುಗಳು ಕರೆ ನೀಡಿದ್ದ ಕಾರಣ ಜಂತರ್ ಮಂತರ್‌ನಲ್ಲಿ ಭಾರಿ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಬ್ರಿಜ್‌ಭೂಷಣ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿರುವ ಕುಸ್ತಿಪಟುಗಳು ಅವರ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ ಆರಂಭಿಸಿದ್ದರು.

ಜೆಎನ್‌ಯು ವಿದ್ಯಾರ್ಥಿಗಳಿಗೆ ತಡೆ: 'ಮಹಿಳಾ ಮಹಾಪಂಚಾಯಿತಿ'ಯಲ್ಲಿ ಪಾಲ್ಗೊಳ್ಳಲು ನಮಗೆ ವಿಶ್ವವಿದ್ಯಾಲಯದ ಅಧಿಕಾರಿಗಳು ಅವಕಾಶ ಕೊಟ್ಟಿಲ್ಲ' ಎಂದು ಜೆಎನ್‌ಯು ವಿದ್ಯಾರ್ಥಿಗಳು ಭಾನುವಾರ ಆರೋಪಿಸಿದ್ದಾರೆ.

ನೂತನ ಸಂಸತ್ ಭವನದತ್ತ ಸಾಗಲು ಕುಸ್ತಿಪಟು ಸಂಗೀತಾ ಪೋಗಟ್ ಅವರು ಬ್ಯಾರಿಕೇಡ್ ಮೇಲೆ ಹತ್ತಿದರು –ಪಿಟಿಐ ಚಿತ್ರ

ನಮ್ಮನ್ನು ಬೆಂಬಲಿಸಿದ ಎರಡು ಸಾವಿರಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಎಲ್ಲೆಡೆ ಸರ್ವಾಧಿಕಾರ ನಡೆಯುತ್ತಿದೆ

ಬಜರಂಗ್ ಪೂನಿಯಾ, ಕುಸ್ತಿಪಟು

ಸಂಸತ್ ಭವನ ಉದ್ಘಾಟನೆಗೊಂಡಿದೆ. ಆ ಸಂದರ್ಭದಲ್ಲಿ ಯಾವುದೇ ರೀತಿಯ ಪ್ರತಿಭಟನೆ ನಡೆಸುವುದು ದೇಶವಿರೋಧಿ ನಡೆ. ಅದಕ್ಕೆ ನಾವು ಅವಕಾಶ ನೀಡಿಲ್ಲ

ದೀಪೇಂದ್ರ ಪಾಠಕ್ ವಿಶೇಷ ಪೊಲೀಸ್ ಆಯುಕ್ತ, ದೆಹಲಿ

ಕೇಂದ್ರದ ವಿರುದ್ಧ ಹರಿಹಾಯ್ದ ಕಾಂಗ್ರೆಸ್

ಕುಸ್ತಿಪಟುಗಳನ್ನು ವಶಕ್ಕೆ ಪಡೆದಿರುವುದಕ್ಕೆ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಹರಿಹಾಯ್ದಿದೆ. 'ಬಿಜೆಪಿ ಸರ್ಕಾರದ ದುರಹಂಕಾರ ಎಷ್ಟರ ಮಟ್ಟಿಗೆ ಹೆಚ್ಚಾಗಿದೆ ಎಂದರೆ ಅದು ಕ್ರೀಡಾಪಟುಗಳ ಧ್ವನಿಯನ್ನು ಕರುಣೆಯಿಲ್ಲದೆ ಬೂಟಿನಿಂದ ತುಳಿಯುತ್ತಿದೆ' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

'ಆಟಗಾರರ ಎದೆಯ ಮೇಲಿನ ಪದಕಗಳು ನಮ್ಮ ದೇಶದ ಹೆಮ್ಮೆ' ಎಂದು ಟ್ವೀಟ್ ಮಾಡಿರುವ ಅವರು, 'ಸರ್ಕಾರದ ದುರಹಂಕಾರ ಮತ್ತು ಅನ್ಯಾಯವನ್ನು ಇಡೀ ದೇಶ ಗಮನಿಸುತ್ತಿದೆ' ಎಂದಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ಇಂದು ನೂತನ ಸಂಸತ್ ಭವನ ಉದ್ಘಾಟಿಸಿ ಪ್ರಜಾಪ್ರಭುತ್ವದ ಬಗ್ಗೆ ಭಾಷಣ ಮಾಡಿದ್ದಾರೆ. ಅಲ್ಪದೂರದಲ್ಲಿ, ಪದಕ ವಿಜೇತ ಹೆಣ್ಣು ಮಕ್ಕಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಟಿಕಾಯತ್‌ಗೆ ತಡೆ

ಭಾರತೀಯ ಕಿಸಾನ್ ಯೂನಿಯನ್ ಮುಖಂಡ ರಾಕೇಶ್ ಟಿಕಾಯತ್ ನೇತೃತ್ವದಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಬಂದಿದ್ದ ರೈತರ ತಂಡವನ್ನು ದೆಹಲಿ ಪೊಲೀಸರು ಗಾಜಿಪುರ ಗಡಿಯಲ್ಲಿ ತಡೆದಿದ್ದಾರೆ.

ವಶಕ್ಕೆ: ಮಹಿಳಾ ಮಹಾ ಪಂಚಾಯಿತಿನಲ್ಲಿ ಪಾಲ್ಗೊಳ್ಳಲು ದೆಹಲಿಗೆ ಬರುತ್ತಿದ್ದ ಹಲವು ಮಂದಿ ರೈತ ಮುಖಂಡರನ್ನು ಹರಿಯಾಣದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಭಾರತ ಕಿಸಾನ್ ಯೂನಿಯನ್ ಹೇಳಿದೆ.

ಪೊಲೀಸರ ನಡೆಗೆ ಆಕ್ರೋಶ

'ಕುಸ್ತಿಪಟುಗಳನ್ನು ವಶಕ್ಕೆ ಪಡೆದಿರುವ ಪೊಲೀಸರ ನಡೆ ಖಂಡನಾರ್ಹ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಸಾಕ್ಷಿ ಮಲಿಕ್ ಅವರನ್ನು ಪೊಲೀಸರು ರಸ್ತೆಯಲ್ಲಿ ಎಳೆದಾಡುತ್ತಿರುವ ದೃಶ್ಯವಿರುವ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಅವರು, 'ದೇಶಕ್ಕೆ ಕೀರ್ತಿ ತಂದಿರುವ ಕ್ರೀಡಾಪಟುಗಳನ್ನು ಈ ರೀತಿ ನಡೆಸಿಕೊಂಡಿರುವುದು ತಪ್ಪು' ಎಂದಿದ್ದಾರೆ.

'ಪೊಲೀಸರು ಕುಸ್ತಿಪಟುಗಳ ಜೊತೆಗೆ ನಡೆದುಕೊಂಡಿರುವ ರೀತಿ ನೋಡಿ ನೋವಾಗಿದೆ. ಇಂತಹ ವಿಚಾರವನ್ನು ನಿರ್ವಹಿಸಲು ಉತ್ತಮ ಮಾರ್ಗ ಅನುಸರಿಸಬೇಕಿತ್ತು' ಎಂದು ಒಲಿಂಪಿಕ್ ಚಾಂಪಿಯನ್ ನೀರಜ್ ಚೋಪ್ರಾ ಟ್ವೀಟ್ ಮಾಡಿದ್ದಾರೆ.

'ಪ್ರಜಾಪ್ರಭುತ್ವವು ಸಹಿಷ್ಣುತೆಯ ಮೇಲೆ ನಿಂತಿದೆ. ಆದರೆ ನಿರಂಕುಶ ಶಕ್ತಿಗಳು ಅಸಹಿಷ್ಣುತೆಯಿಂದ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುತ್ತಿವೆ. ಕುಸ್ತಿಪಟುಗಳನ್ನು ಶೀಘ್ರ ಬಿಡುಗಡೆಗೊಳಿಸಬೇಕು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಟ್ವೀಟ್ ಮಾಡಿದ್ದಾರೆ.

ಕುಸ್ತಿಪಟುಗಳ ವಶ: ಸಿ.ಎಂ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದಲ್ಲಿ ಭಾರತ ಕುಸ್ತಿಪಟುಗಳ ಒಕ್ಕೂಟದ ಅಧ್ಯಕ್ಷರ ವಿರುದ್ಧ ಕ್ರಮ ಕೈಗೊಳ್ಳುವಂತೆ ಹೋರಾಡುತ್ತಿರುವ ಮಹಿಳಾ ಕುಸ್ತಿಪಟುಗಳನ್ನು ವಶಕ್ಕೆ ಪಡೆದಿರುವ ದೆಹಲಿ ಪೊಲೀಸರ ದೌರ್ಜನ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಖಂಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ನೂತನ ಸಂಸತ್ ಭವನದ ಉದ್ಘಾಟನೆಯನ್ನು ಪ್ರಜಾಪ್ರಭುತ್ವದ ಹಬ್ಬ ಎಂಬಂತೆ ಸಂಭ್ರಮಿಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಅಲ್ಲಿಂದ ಕೂಗಳತೆಯ ದೂರದಲ್ಲಿ ಧರಣಿ ನಡೆಸುತ್ತಿರುವ ಮಹಿಳಾ ಕುಸ್ತಿಪಟುಗಳ ಪ್ರತಿಭಟನೆಯ ಪ್ರಜಾಸತ್ತಾತ್ಮಕ ಹಕ್ಕನ್ನು ಪೊಲೀಸರ ಮೂಲಕ ಹತ್ತಿಕ್ಕಲು ಹೊರಟಿರುವುದು ಆತ್ಮವಂಚನಾ ನಡವಳಿಕೆಯ ಪ್ರತೀಕ' ಎಂದಿದ್ದಾರೆ.

'ಬಂಧಿತ ಮಹಿಳಾ ಕುಸ್ತಿಪಟುಗಳನ್ನು ತಕ್ಷಣ ಬಿಡುಗಡೆಗೊಳಿಸಬೇಕು. ಲೈಂಗಿಕ ದೌರ್ಜನ್ಯದ ಆರೋಪಕ್ಕೆ ಒಳಗಾಗಿರುವ ಭಾರತೀಯ ಕುಸ್ತಿಪಟುಗಳ ಒಕ್ಕೂಟದ ಅಧ್ಯಕ್ಷರೂ ಆದ ಬಿಜೆಪಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರನ್ನು ಬಂಧಿಸಿ ವಿಚಾರಣೆಗೊಳಪಡಿಸಿ, ನೊಂದ ಮಹಿಳಾ ಕುಸ್ತಿಪಟುಗಳಿಗೆ ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಪರಂಪರೆ ಜೊತೆ ಆಧುನಿಕತೆ

ಭಾರತದ ಸಾಂಸ್ಕೃತಿಕ ವೈಶಿಷ್ಟ್ಯದ ಪ್ರತೀಕ ● ಲೋಕಸಭೆ, ರಾಜ್ಯಸಭೆ ಸಭಾಂಗಣಗಳಿಗೆ ಹಲವು ಸೌಲಭ್ಯ



ನವದೆಹಲಿ (ಪಿಟಿಐ): ವೇದಕಾಲದಿಂದ ಹಿಡಿದು ಇಂದಿನವರೆಗಿನ ಭಾರತದ ಪ್ರಜಾಸತ್ತಾತ್ಮಕ ಪರಂಪರೆಯ ಕಥೆಗಳನ್ನು ಭಾನುವಾರ ಲೋಕಾರ್ಪಣೆಗೊಂಡ ನೂತನ ಸಂಸತ್ ಭವನವು ಸಾರುತ್ತಿದೆ. ಕಟ್ಟಡವು ಭಾರತದ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಮೈದಳೆದಿದೆ.

ದೇಶದ ಪ್ರಜಾಪ್ರಭುತ್ವದ ಬೆಳವಣಿಗೆಯನ್ನು ತೋರಿಸುವ ಹಲವು ವಸ್ತುಗಳನ್ನು ಕಾನ್‌ಸ್ಟಿಟ್ಯೂಷನ್ ಹಾಲ್‌ನಲ್ಲಿ ಪ್ರದರ್ಶಿಸಲಾಗಿದೆ. ಜೊತಗೆ ಈ ಹಾಲ್, ಹಿಂದೂ ಪರಂಪರೆಯ ಶ್ರೀ ಯಂತ್ರವನ್ನು ಹೋಲುತ್ತದೆ. ಇದರೊಂದಿಗೆ ಈ ಹಾಲ್‌ಗೆ ಆಧುನಿಕ ಸ್ಪರ್ಶವನ್ನೂ ನೀಡಲಾಗಿದೆ. ಭೂಮಿಯ ಪರಿಭ್ರಮಣವನ್ನು ತೋರಿಸುವ ಫೂಕೊನ ಲೋಲಕವನ್ನು ಹಾಗೂ ಡಿಜಿಟಲ್ ಸಂವಿಧಾನವನ್ನು ಇಲ್ಲಿ ಪ್ರದರ್ಶಿಸಲಾಗಿದೆ.

ಲೋಕಸಭೆಯ ಸಭಾಂಗಣ ರಾಷ್ಟ್ರೀಯ ಪಕ್ಷಿ ನವಿಲಿನ ಥೀಮ್‌ನಲ್ಲಿದೆ. ರಾಜ್ಯಸಭೆಯ ಸಭಾಂಗಣ ರಾಷ್ಟ್ರೀಯ ಹೂವು ಕಮಲದ ಥೀಮ್‌ನಲ್ಲಿದೆ.

ಅತ್ಯಾಧುನಿಕ ಮತ ವ್ಯವಸ್ಥೆ: ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಅತ್ಯಾಧುನಿಕ ಮತ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಆಡಿಯೊ–ವಿಡಿಯೊ ವ್ಯವಸ್ಥೆಯು ಅತ್ಯುತ್ತಮವಾಗಿದೆ.

ನೂತನ ಸಂಸತ್ ಭವನದ ಕಟ್ಟಡದ ಪ್ರವೇಶದಲ್ಲಿ ಮಹಾತ್ಮ ಗಾಂಧಿ, ಚಾಣಕ್ಯ, ಗಾರ್ಗಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಅಂಬೇಡ್ಕರ್ ಹಾಗೂ ಕೊನಾರ್ಕ್‌ನ ಸೂರ್ಯ ದೇವಾಲಯದ ಸೂರ್ಯನ ರಥದ ದೊಡ್ಡ ಗಾತ್ರದ ಕಂಚಿನ ಪ್ರತಿಮೆಯನ್ನು ಇಡಲಾಗಿದೆ.

ಉಸ್ತಾದ್ ಅಮ್ಜದ್ ಅಲಿ ಖಾನ್, ಪಂಡಿತ್ ಹರಿಪ್ರಸಾದ್ ಚೌರಾಸಿಯಾ, ಉಸ್ತಾದ್ ಬಿಸ್ಮಿಲ್ಲಾ ಖಾನ್, ಪಂಡಿತ್ ರವಿ ಶಂಕರ್ ಅವರ ಕುಟುಂಬದವರು ಭವನದ ಸಂಗೀತ ಗ್ಯಾಲರಿಗೆ ಅವರ ವಾದನಗಳನ್ನು ಕೊಟ್ಟಿದ್ದಾರೆ. ಭವನದಲ್ಲಿ ಚಿತ್ರಕಲೆ, ಲೋಹದಿಂದ ಮಾಡಿದ ಭಿತ್ತಿಚಿತ್ರಗಳು ಸೇರಿದಂತೆ ಸುಮಾರು 5 ಸಾವಿರ ಕಲಾಕೃತಿಗಳನ್ನು ಇರಿಸಲಾಗಿದೆ.

ಶೃಂಗೇರಿ ವೈದಿಕರಿಂದ ಪೂಜೆ

2020 ಡಿ. 10ರಂದು ನಡೆದ ಸಂಸತ್ ಭವನದ ಶಿಲಾನ್ಯಾಸದ ಸಮಾರಂಭದಲ್ಲಿ ಕರ್ನಾಟಕದ ಶೃಂಗೇರಿ ಮಠದ ವೈದಿಕರು ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿದ್ದರು. ಭಾನುವಾರವೂ ಈ ಮಠದ ವೈದಿಕರೇ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿದರು

'ಸೆಂಗೋಲ್' ಅನ್ನು ಪ್ರತಿಷ್ಠಾಪಿಸುವ ವೇಳೆ ಮೋದಿ ಅವರು ಗಣರಾಜ್ಯದ ಅಡಿಪಾಯವನ್ನೇ ಮರೆತರು. ಅಂಬೇಡ್ಕರ್ ಹೆಸರನ್ನು ಮೋದಿ ಎಲ್ಲೂ ಪ್ರಸ್ತಾಪಿಸಲಿಲ್ಲ
ಡಿ. ರಾಜಾ, ಸಿಪಿಐ

'ನನ್ನನ್ನು ನಾನೇ ಪ್ರೀತಿಸುವ ದಿನ'ವನ್ನು ಮೋದಿ ಆಚರಿಸಿಕೊಂಡಿದ್ದಾರೆ. ಕಳೆದ 9 ವರ್ಷಗಳಲ್ಲಿ ಮೋದಿ ಅವರ ಸರ್ಕಾರವು ಸಂಸತ್ತನ್ನು ಹೇಗೆಲ್ಲಾ ಅವಮಾನಿಸಿದೆ ಎನ್ನುವುದನ್ನು ನೆನಪಿಸಬೇಕು
ಡೆರೆಕ್ ಒಬ್ರಯಾನ್, ಟಿಎಂಸಿ ನಾಯಕ

ನೂತನ ಸಂಸತ್ ಭವನದ ಉದ್ಘಾಟನೆ ಸಮಾರಂಭದ ವೇಳೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಹಾಗೂ ಯತಿಗಳ ಉಪಸ್ಥಿತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ದೀಪ ಬೆಳಗಿಸಿದರು –ಪಿಟಿಐ ಚಿತ್ರ

ಕಾಡಿದ ಕಾನೂನು ತೊಡಕು

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಸೆಂಟ್ರಲ್ ವಿಸ್ತಾ ಪುನರ್ ಅಭಿವೃದ್ಧಿ ಸೇರಿ ನೂತನ ಸಂಸತ್ ಭವನದ ಕಟ್ಟಡ ಕಳೆದ ಐದು ವರ್ಷಗಳಲ್ಲಿ ಹಲವಾರು ಕಾನೂನು ಅಡೆತಡೆಗಳನ್ನು ದಾಟಿ ಭಾನುವಾರ ಲೋಕಾರ್ಪಣೆಯಾಗಿದೆ. ಈ ಯೋಜನೆ ಆರಂಭದಿಂದ ಹಿಡಿದು, ಲೋಕಾರ್ಪಣೆಯವರೆಗೂ ಈ ಯೋಜನೆಯ ಭೂಬಳಕೆ ಬದಲಾವಣೆ, ಪರಿಸರ ಅನುಮತಿ, ಉದ್ಘಾಟನೆ ಯಾರು ಮಾಡಬೇಕೆನ್ನುವುದು ಸೇರಿ ಹಲವು ವಿವಾದಗಳು ಅಥವಾ ವ್ಯಾಜ್ಯಗಳು ದೆಹಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ನಡೆದವು. ಕಾನೂನು ಸಮರದ ಹಿನ್ನೋಟ ಇಲ್ಲಿದೆ.

- ಯೋಜನೆಯ ವಿರುದ್ಧ ನ್ಯಾಯಾಲಯದಲ್ಲಿ ದಾಖಲಾದ ಮೊದಲ ಪ್ರಕರಣವೆಂದರೆ, ರಾಜೀವ್ ಸೂರಿ ಮತ್ತು ಅನೂಜ್ ಶ್ರೀವಾಸ್ತವ ಮತ್ತು ಇತರರು ಈ ಯೋಜನೆಗೆ ಭೂಬಳಕೆ ಬದಲಾವಣೆಗೆ ಅನುಮತಿ ಮತ್ತು ಪರಿಸರ ಅನುಮತಿ ನೀಡಿರುವುದನ್ನು ದೆಹಲಿ ನಗರ ಕಲಾ ಆಯೋಗ (ಡಿಯುಎಸಿ) ಮತ್ತು ಭೂಬಳಕೆಯ ಪರಂಪರೆ ಸಂರಕ್ಷಣಾ ಸಮಿತಿಯ ನಿರ್ಧಾರ ಪ್ರಶ್ನಿಸಿ ದೆಹಲಿ ಹೈಕೋರ್ಟ್‌ನಲ್ಲಿ 2020ರಲ್ಲಿ ಅರ್ಜಿ ಸಲ್ಲಿಸಿದ್ದರು.
- 2020ರ ಫೆಬ್ರುವರಿ 11ರಂದು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ರಾಜೀವ್ ಶಕ್ದರ್ ಅವರಿದ್ದ ಏಕ ಸದಸ್ಯ ಪೀಠ, ಈ ಯೋಜನೆಯಲ್ಲಿ ಯಾವುದೇ ಬದಲಾವಣೆ ಮಾಡಬಾರದು ಎಂದು ದೆಹಲಿ ಅಭಿವೃದ್ಧಿ ಪ್ರಾಧಿಕಾರಕ್ಕೆ (ಡಿಡಿಎ) ನಿರ್ದೇಶನ ನೀಡಿತು.
- ಇದನ್ನು ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ಪ್ರಶ್ನಿಸಿದ್ದ ಕೇಂದ್ರ ಸರ್ಕಾರ, ಏಕ ಸದಸ್ಯ ಪೀಠದ ಆದೇಶಕ್ಕೆ 2020ರ ಫೆಬ್ರುವರಿ 28ರಂದು ತಡೆಯಾಜ್ಞೆ ತಂದಿತ್ತು. ನಂತರ ಸುಪ್ರೀಂ ಕೋರ್ಟ್, ಈ ಅರ್ಜಿಯನ್ನು ಹೊಸದಾಗಿ ಸಲ್ಲಿಕೆಯಾಗಿದ್ದ ಮತ್ತಷ್ಟು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಜತೆಗೆ ಸೇರಿಸಿಕೊಂಡು ವಿಚಾರಣೆ ನಡೆಸಿತು.
- 2021ರ ಜ.5ರಂದು ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠವು 2:1ರ ಬಹುಮತದೊಂದಿಗೆ ಸೆಂಟ್ರಲ್ ವಿಸ್ತಾ ಪುನರ್ ಅಭಿವೃದ್ಧಿ ಯೋಜನೆಗೆ ಹಸಿರು ನಿಶಾನೆ ತೋರಿತು. ಭೂಬಳಕೆ ಬದಲಾವಣೆಗೆ ಅನುಮತಿ ಮತ್ತು ಪರಿಸರ ಅನುಮತಿ ನೀಡಿರುವುದನ್ನು ತೀರ್ಪಿನಲ್ಲಿ ಎತ್ತಿಹಿಡಿಯಿತು. ಈ ಪೀಠದಲ್ಲಿದ್ದ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಯೋಜನೆ ಅನುಷ್ಠಾನಕ್ಕೆ ಅನುಮತಿ ನೀಡಿದರೂ ಭೂಬಳಕೆ ಬದಲಾವಣೆಗೆ ಅನುಮತಿ ಮತ್ತು ಪರಿಸರ ಅನುಮತಿ ನೀಡಿರುವುದನ್ನು ಒಪ್ಪದೇ ಭಿನ್ನಮತದ ತೀರ್ಪು ನೀಡಿದರು
- ಅನುವಾದಕರಾದ ಅನ್ಯಾ ಮಲ್ಹೋತ್ರಾ ಮತ್ತು ಇತಿಹಾಸಕಾರ ಮತ್ತು ಸಾಕ್ಷ್ಯಚಿತ್ರ ನಿರ್ಮಾಪಕ ಸೊಹೈಲ್ ಹಶ್ಮಿ ಅವರು ಕೋವಿಡ್-19 ಸಾಂಕ್ರಾಮಿಕ ರೋಗದ ಎರಡನೇ ಅಲೆ ಇರುವುದರಿಂದ, ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಗಾಗಿ ನಿರ್ಮಾಣ ಕಾರ್ಯ ಸ್ಥಗಿತಗೊಳಿಸುವಂತೆ ಕೋರಿ 2021ರ ಏಪ್ರಿಲ್‌ನಲ್ಲಿ ದೆಹಲಿ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದ್ದರು
- ದೆಹಲಿ ಹೈಕೋರ್ಟ್ ಅಂದಿನ ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಮತ್ತು ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರ ಪೀಠವು, ಇದು ರಾಷ್ಟ್ರೀಯ ಮಹತ್ವದ ಯೋಜನೆ ಎಂದು ಪರಿಗಣಿಸಿ, ಕಾಮಗಾರಿ ಮುಂದುವರಿಸಲು 2021ರ ಮೇ 31ರಂದು ಅವಕಾಶ ಕಲ್ಪಿಸಿತು. ಅರ್ಜಿದಾರರಿಗೆ ₹1 ಲಕ್ಷ ದಂಡ ವಿಧಿಸಿ, ಪಿಐಎಲ್ ವಜಾಗೊಳಿಸಿತು. ಮೇಲ್ಮನವಿ ಪುರಸ್ಕರಿಸಲು ಮತ್ತು ದಂಡಕ್ಕೆ ತಡೆ ನೀಡಲು ನಿರಾಕರಿಸಿತು
- ಹೊಸ ಸಂಸತ್ ಭವನದ ಮೇಲಿರುವ ರಾಷ್ಟ್ರೀಯ ಲಾಂಛನದ ಕಂಚಿನ ಪ್ರತಿಮೆಯಲ್ಲಿ ಸಿಂಹಗಳು ಕೆರಳಿದ ರೂಪದಲ್ಲಿವೆ ಎಂದು, ಈ ವಿನ್ಯಾಸವನ್ನು ಪ್ರಶ್ನಿಸಿ, ವಕೀಲ ಅಲ್‌ಡ್ಯಾನಿಶ್ ರೇನ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದರು. ಕಂಚಿನ ಪ್ರತಿಮೆಯು 'ಭಾರತದ ರಾಷ್ಟ್ರ ಲಾಂಛನ (ಅಸಮಂಜಸ ಬಳಕೆ ನಿಷೇಧ) ಕಾಯ್ದೆ–2005' ಉಲ್ಲಂಘಿಸಿಲ್ಲವೆಂದು ಸುಪ್ರೀಂ ಕೋರ್ಟ್ ಹೇಳಿತು.
- ಕೊನೆಯದಾಗಿ, ನೂತನ ಸಂಸತ್ ಭವನವನ್ನು ರಾಷ್ಟ್ರಪತಿಯಿಂದಲೇ ಉದ್ಘಾಟಿಸಲು ಲೋಕಸಭೆ ಸಚಿವಾಲಯಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ತಮಿಳುನಾಡು ಮೂಲದ ವಕೀಲೆ ಸಿ.ಆರ್.ಜಯಾ ಸುಕಿನ್ ಅವರಿಂದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಯಿತು
- ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಹಾಗೂ ಪಿ.ಎಸ್. ನರಸಿಂಹ ಅವರಿದ್ದ ರಜಾಕಾಲದ ಪೀಠವು ಉದ್ಘಾಟನೆಗೆ ಎರಡು ದಿನ ಇರುವಾಗ ಪಿಐಎಲ್ ವಜಾಗೊಳಿಸಿತು.

ಸೆಂಟ್ರಲ್ ವಿಸ್ತಾ ಪುನರ್ ಅಭಿವೃದ್ಧಿ ಯೋಜನೆ ಸಾಗಿ ಬಂದ ಹಾದಿ...

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಉದ್ಘಾಟಿಸಿದ ನೂತನ ಸಂಸತ್ ಭವನ ಮತ್ತು ಸಂಸತ್ತಿನ ಹಳೆಯ ಕಟ್ಟಡ ಸಾಗಿಬಂದ ಹಾದಿ..

ಫೆ.12, 1921	ಸಂಸತ್ ಭವನಕ್ಕೆ ಡ್ಯೂಕ್ ಆಫ್ ಕನ್ನಾಟ್ ಅವರಿಂದ ಶಂಕುಸ್ಥಾಪನೆ
ಜ.18, 1927	ಗವರ್ನರ್ ಜನರಲ್ ಲಾರ್ಡ್ ಇರ್ವಿನ್ ಸಂಸತ್ ಭವನ ಉದ್ಘಾಟನೆ
ಜ.19, 1927	ಸಂಸತ್ತಿನಲ್ಲಿ ಕೇಂದ್ರ ಶಾಸನ ಸಭೆಯ ಮೂರನೇ ಅಧಿವೇಶನ ಮೊದಲ ಬಾರಿಗೆ ನಡೆಯಿತು
ಡಿ.9, 1946	ಸಂವಿಧಾನ ರಚನಾ ಸಭೆಯ ಮೊದಲ ಅಧಿವೇಶನ
ಆಗಸ್ಟ್ 14/15, 1947	ಸಂವಿಧಾನ ರಚನಾ ಸಭೆಯಲ್ಲಿ ಮಧ್ಯರಾತ್ರಿ ಬ್ರಿಟಿಷರಿಂದ ಅಧಿಕಾರ ಹಸ್ತಾಂತರ
ಮೇ 13, 1952	ಲೋಕಸಭೆ–ರಾಜ್ಯಸಭೆಯ ಮೊದಲ ಅಧಿವೇಶನ
ಆ 3, 1970	ಪಾರ್ಲಿಮೆಂಟ್ ಅನೆಕ್ಸ್‌ಗೆ ರಾಷ್ಟ್ರಪತಿ ವಿ.ವಿ. ಗಿರಿ ಶಂಕುಸ್ಥಾಪನೆ
ಅ.24,1975	ಪಾರ್ಲಿಮೆಂಟ್ ಅನೆಕ್ಸ್ ಉದ್ಘಾಟಿಸಿದ ಪ್ರಧಾನಿ ಇಂದಿರಾ ಗಾಂಧಿ
ಆಗಸ್ಟ್ 15, 1987	ಪ್ರಧಾನಿ ರಾಜೀವ್ ಗಾಂಧಿ ಅವರಿಂದ ಸಂಸತ್ ಗ್ರಂಥಾಲಯಕ್ಕೆ ಶಂಕುಸ್ಥಾಪನೆ
ಮೇ 7, 2002	ಸಂಸತ್ ಭವನದ ಗ್ರಂಥಾಲಯ ಉದ್ಘಾಟಿಸಿದ ರಾಷ್ಟ್ರಪತಿ ಕೆ. ಆರ್. ನಾರಾಯಣನ್
ಮೇ 5, 2009	ಸಂಸತ್ತಿನ ಅನೆಕ್ಸ್ ವಿಸ್ತರಣೆಗೆ ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಮತ್ತು ಸ್ಪೀಕರ್ ಸೋಮನಾಥ ಚಟರ್ಜಿ ಶಂಕುಸ್ಥಾಪನೆ
ಜುಲೈ 31, 2017	ಸಂಸತ್ ಭವನದ ಅನೆಕ್ಸ್ ವಿಸ್ತರಣೆ ಉದ್ಘಾಟಿಸಿದ ಪ್ರಧಾನಿ ಮೋದಿ
ಆ.5, 2019	ಆಧುನಿಕ ಸಂಸತ್ ಭವನ ಕಟ್ಟಡ ನಿರ್ಮಾಣಕ್ಕೆ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಮತ್ತು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಪ್ರಸ್ತಾವ
ಸೆಪ್ಟೆಂಬರ್, 2019	ಹೊಸ ಸಂಸತ್ ಭವನ ನಿರ್ಮಾಣ ಯೋಜನೆ ಘೋಷಣೆ
ಡಿ.10, 2020	ಸಂಸತ್ ಭವನ ನಿರ್ಮಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಶಿಲಾನ್ಯಾಸ
ಮೇ 28, 2023	ನೂತನ ಸಂಸತ್ ಭವನ ಉದ್ಘಾಟಿಸಿದ ಪ್ರಧಾನಿ ಮೋದಿ

ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ ಟೀಕೆ

'ನಮ್ಮದು ಪ್ರಜಾಪ್ರಭುತ್ವ, ರಾಜಪ್ರಭುತ್ವವಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಂಸತ್ತಿನ ಕಾರ್ಯವಿಧಾನಗಳನ್ನು ಗಾಳಿಗೆ ತೂರುವ ಹಾಗೂ ತಮ್ಮನ್ನೇ ವೈಭವೀಕರಿಸಿಕೊಳ್ಳುವ ಸರ್ವಾಧಿಕಾರಿ ಪ್ರಧಾನಿ ನರೇಂದ್ರ ಮೋದಿ ಅವರು ನೂತನ ಸಂಸತ್ ಭವನವನ್ನು ಉದ್ಘಾಟಿಸಿದ್ದಾರೆ' ಎಂದು ಕಾಂಗ್ರೆಸ್ ಭಾನುವಾರ ಟೀಕಿಸಿದೆ.

'ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ಕಾಪಿಡುವ ಕೆಲಸ ಮಾಡಿದ ನೆಹರೂ ಅವರ ಅಂತ್ಯಸಂಸ್ಕಾರ ನೆರವೇರಿದ ದಿನ ಮೇ 28. ಮಹಾತ್ಮ ಗಾಂಧಿಯನ್ನು ಕೊಲ್ಲಲು ಪ್ರೇರೇಪಿಸಿದ ಹಿಂದುತ್ವ ಸಿದ್ಧಾಂತವನ್ನು ಬಿತ್ತಿದ ಸಾವರ್ಕರ್ ಅವರು ಹುಟ್ಟಿದ ದಿನವೂ ಮೇ 28. ಇದೇ ದಿನವೇ ಆದಿವಾಸಿ ಮಹಿಳೆಯಾದ ದ್ರೌಪದಿ ಮುರ್ಮು ಅವರು ಮೊದಲ ಬಾರಿಗೆ ರಾಷ್ಟ್ರಪತಿಯಾದರು. ಇಂಥ ರಾಷ್ಟ್ರಪತಿಗೆ ಅವರ ಸಾಂವಿಧಾನಿಕ ಕರ್ತವ್ಯವನ್ನು ನೆರವೇರಿಸಲು ನಿರಾಕರಿಸಿ ಭವನವನ್ನು ಮೋದಿ ಅವರೇ ಉದ್ಘಾಟಿಸಿದ್ದಾರೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಟ್ವೀಟ್ ಮಾಡಿದ್ದಾರೆ.

'ಯಾವತ್ತೋ ಒಂದು ದಿನ ಸಂಸತ್ತಿಗೆ ಬಂದು ಕಲಾಪಗಳಲ್ಲಿ ಭಾಗವಹಿಸುವ ಮೋದಿ, ನೂತನ ಸಂಸತ್ ಭವನವನ್ನು ಉದ್ಘಾಟಿಸಿದ್ದಾರೆ. ಜೊತೆಗೆ ನಕಲಿ ಇತಿಹಾಸಕಾರರಿಂದ ಇತಿಹಾಸ ತಿರುಚುವಿಕೆ ಮತ್ತು ಮಾಧ್ಯಮದ ತುತ್ತೂರಿ ಊದುವಿಕೆಯು 2023ರಲ್ಲಿ ವಿಪರೀತವಾಗಿದೆ' ಎಂದೂ ಹೇಳಿದರು.

'ಸಂಪ್ರದಾಯ ಹಾಗೂ ಶಿಷ್ಟಾಚಾರಕ್ಕೆ ವಿರುದ್ಧವಾಗಿ ರಾಷ್ಟ್ರಪತಿಯನ್ನು ನಿರ್ಲಕ್ಷಿಸಿ ನೂತನ ಸಂಸತ್ ಭವನವನ್ನು ಉದ್ಘಾಟಿಸಲಾಗಿದೆ. ಸಂಸತ್ತನ್ನು ಮುಷ್ಟಿಯೊಳಗೆ ಇರಿಸಿಕೊಳ್ಳಲು ನಡೆಸುತ್ತಿರುವ ಎಲ್ಲ ಯತ್ನಗಳೂ ಪ್ರಜಾಪ್ರಭುತ್ವಕ್ಕೆ ಮಾರಕವಾಗಿವೆ' ಎಂದು ಶಿವಸೇನಾ ಸಂಸದ ಸಂಜಯ್ ರಾವುತ್ ಅವರು 'ಸಾಮ್ನಾ'ದಲ್ಲಿ ಬರೆದಿದ್ದಾರೆ.

ಎನ್‌ಸಿಪಿಯ ರಾಷ್ಟ್ರೀಯ ವಕ್ತಾರ ಕ್ಲಾಯ್ಡ್ ಕ್ರಾಸ್ಟೊ ಟ್ವೀಟ್ ಮಾಡಿ, 'ನಮ್ಮದು ಪ್ರಜಾಪ್ರಭುತ್ವವೇ ಹೊರತು ರಾಜಪ್ರಭುತ್ವವಲ್ಲ. ಅಧಿಕಾರವನ್ನು ದೇಶದ ಜನರು ನೀಡಬೇಕು' ಎಂದಿದ್ದಾರೆ.

'ಮೋದಿ ಅವರು ಇಡೀ ಸಮಾರಂಭವನ್ನು ರಾಜನ ಪಟ್ಟಾಭಿಷೇಕದಂತೆ ಆಚರಿಸಿದರು. ಜೊತೆಗೆ ಜನರನ್ನು 'ಪ್ರಜೆ'ಗಳಂತೆ ಕಂಡರು' ಎಂದು ಪ್ರಧಾನಿ ಅವರನ್ನು ಎಡಪಕ್ಷಗಳು ಟೀಕಿಸಿವೆ.

'ಸೆಂಗೋಲ್ ರಾಜಪ್ರಭುತ್ವದ ಪ್ರತೀಕ. ಭಾರತದ ಜನರು ಇಂಥ ಬಂಧಗಳನ್ನು ಕಿತ್ತೊಗೆದು ಜಾತ್ಯತೀತವಾದ ಪ್ರಜಾಪ್ರಭುತ್ವವಾದಿ ಗಣರಾಜ್ಯವನ್ನು ಸ್ಥಾಪಿಸಿದ್ದಾರೆ. ಇಲ್ಲಿ ಎಲ್ಲರೂ ಸಮಾನರು. ಪ್ರಜಾಪ್ರಭುತ್ವದಲ್ಲಿ ಸೆಂಗೋಲ್‌ಗೆ ಯಾವ ಕೆಲಸವೂ ಇಲ್ಲ' ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯಚೂರಿ ಅವರು ಟ್ವೀಟ್ ಮಾಡಿದ್ದಾರೆ.

ಭಾರತದ ಇತಿಹಾಸದಲ್ಲಿ ನೂತನ ಸಂಸತ್ ಭವನದ ಉದ್ಘಾಟನಾ ಸಮಾರಂಭವು ಬಂಗಾರದ ಅಕ್ಷರಗಳಲ್ಲಿ ಬರೆದಿಡಬೇಕಾದಂಥ ಸಂಭ್ರಮವಾಗಿದೆ
ದ್ರೌಪದಿ ಮುರ್ಮು, ರಾಷ್ಟ್ರಪತಿ

ಆತ್ಮನಿರ್ಭರ ಭಾರತದ ನಿರ್ಮಾಣದೊಂದಿಗೆ ಈ ಹೊಸ ಭವನವು ಭವಿಷ್ಯದಲ್ಲಿ ಜರುಗುವ ಐತಿಹಾಸಿಕ ಘಟನೆಗಳ ಭಾಷ್ಯ ಬರೆಯಲಿದೆ
ಜಗದೀಪ್ ಧನಕರ್, ಉಪ ರಾಷ್ಟ್ರಪತಿ

ಈ ಭವನವು ಜನರ ಆಕಾಂಕ್ಷೆಗಳು ಪೂರ್ಣಗೊಳ್ಳುವ ಕಟ್ಟಡ ಮಾತ್ರವಲ್ಲ. ಇದು ಅಮೃತಕಾಲದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಪ್ರಗತಿ ಸಾಧಿಸುವ ಪ್ರಯಾಣದ ಆರಂಭವೂ ಹೌದು
ಅಮಿತ್ ಶಾ, ಗೃಹ ಸಚಿವ

ನೂತನ ಸಂಸತ್ತಿನ ಶಿಲಾನ್ಯಾಸ ಸಮಾರಂಭದಿಂದ ಅಂದಿನ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಹೊರಗಿಡಲಾಯಿತು. ಈಗ ಉದ್ಘಾಟನೆ ವೇಳೆ ದ್ರೌಪದಿ ಮುರ್ಮು ಅವರನ್ನು ಹೊರಗಿಡಲಾಗಿದೆ
ಕೆ.ಸಿ. ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ, ಕಾಂಗ್ರೆಸ್



ಸಂಸತ್ ಭವನದಲ್ಲಿ ಪ್ರತಿಷ್ಠಾಪಿಸಲು ಸೆಂಗೋಲ್ ಅನ್ನು ಮೆರವಣಿಗೆ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಯತಿಗಳೊಂದಿಗೆ ತಂದರು –ಪಿಟಿಐ ಚಿತ್ರ



ದೆಹಲಿಯ ನೂತನ ಸಂಸತ್ ಭವನದಲ್ಲಿ ಮಸ್ಕಿಯ ಅಶೋಕನ ಶಾಸನ, ಸನ್ನತಿಯಲ್ಲಿರುವ ಅಶೋಕ ತನ್ನ ಕುಟುಂಬದೊಂದಿಗೆ ಇರುವ ಚಿತ್ರ

ಸಂಸತ್‌ನಲ್ಲಿ ಮಸ್ಕಿ, ಸನ್ನತಿ ಶಾಸನಗಳ ಪ್ರತಿಕೃತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ನವದೆಹಲಿಯಲ್ಲಿ ಭಾನುವಾರ ಉದ್ಘಾಟನೆಗೊಂಡ ನೂತನ ಸಂಸತ್ ಭವನದಲ್ಲಿ ಕಲ್ಯಾಣ ಕರ್ನಾಟಕದ ಪ್ರಮುಖ ಐತಿಹಾಸಿಕ ತಾಣಗಳನ್ನು ಉಲ್ಲೇಖಿಸಲಾಗಿದೆ.

ರಾಯಚೂರು ಜಿಲ್ಲೆ ಮಸ್ಕಿಯಲ್ಲಿರುವ ಅಶೋಕನ ಶಿಲಾಶಾಸನ, ಕಲಬುರಗಿ ಜಿಲ್ಲೆಯ ಸನ್ನತಿಯಲ್ಲಿರುವ ಸಾಮ್ರಾಟ್ ಅಶೋಕನ ಕುಟುಂಬ ಸದಸ್ಯರಿರುವ ಶಿಲ್ಪದ ಪ್ರತಿಕೃತಿ ಹಾಗೂ ಭಾರತದ ನಕ್ಷೆಯಲ್ಲಿ ಕೊಪ್ಪಳದ ಹೆಸರನ್ನು ಉಲ್ಲೇಖಿಸಲಾಗಿದೆ.

ಸಾಮ್ರಾಟ್ ಅಶೋಕನ ಸ್ಮರಣೆಗಾಗಿ ಸಂಸತ್ತಿನ ಒಂದು ಭಾಗದಲ್ಲಿ ಬೃಹತ್ ಚಿತ್ರವನ್ನು ಅಳವಡಿಸಲಾಗಿದ್ದು, ಇದರಲ್ಲಿ ಮಸ್ಕಿಯ ಶಿಲಾಶಾಸನ, ಸನ್ನತಿಯ ಅಶೋಕ ಸಾಮ್ರಾಟ, ಆತನ ಪತ್ನಿ ಹಾಗೂ ಇಬ್ಬರು ಮಕ್ಕಳಿರುವ ಸುಣ್ಣದ ಕಲ್ಲಿನಲ್ಲಿ ಕೆತ್ತಿದ ಉಬ್ಬುಶಿಲ್ಪದ ಚಿತ್ರದ ಪ್ರತಿಕೃತಿಯನ್ನು ಅಳವಡಿಸಲಾಗಿದೆ.

'ಮೌರ್ಯ, ಶಾತವಾಹನರ ಕಾಲದ ನಕಾಶೆ ಹಾಕಲಾಗಿದ್ದು, ಆ ಕಾಲದಲ್ಲಿ ರಾಜ್ಯದ ಪ್ರಮುಖ ಸ್ಥಳಗಳಾಗಿದ್ದ ರಾಯಚೂರು ಜಿಲ್ಲೆಯ ಮಸ್ಕಿ, ಕೊಪಬಲ್ ಎಂದಿರುವ ಕೊಪ್ಪಳದ ಹೆಸರು ಉಲ್ಲೇಖಿಸಲಾಗಿದೆ. ಸನ್ನತಿಯಲ್ಲಿ ಸಿಕ್ಕಿರುವ ಅಶೋಕನ ಶಿಲ್ಪ ಕೂಡ ನಕಾಶೆಯಲ್ಲಿದೆ' ಎಂದು ಇತಿಹಾಸ ಸಂಶೋಧಕ, ಕೊಪ್ಪಳದ ಡಾ.ಶರಣಬಸಪ್ಪ ಕೋಲ್ಕಾರ ತಿಳಿಸಿದರು.

ಮಸ್ಕಿ ಪಟ್ಟಣದ ಮುದಗಲ್ ರಸ್ತೆ ಬಳಿಯ ಗುಡ್ಡದ ಬಂಡೆಯ ಮೇಲೆ ಬ್ರಾಹ್ಮಿ ಲಿಪಿಯಲ್ಲಿ ಅಶೋಕನ ಶಿಲಾಶಾಸನ ಕೆತ್ತಲಾಗಿದ್ದು, 1915ರಲ್ಲಿ ಎಂಜಿನಿಯರ್ ಸಿ. ಬಿಡನ್ ಇದನ್ನು ಪತ್ತೆ ಹಚ್ಚಿದ್ದರು. 'ಈ ಶಾಸನದಲ್ಲಿ 'ದೇವನಾಂಪ್ರಿಯ ಅಸೋಕ ಸ' ಎಂದು ಉಲ್ಲೇಖಿಸಲಾಗಿದೆ.

ಗಣ್ಯಾತಿಗಣ್ಯರು, ರಾಜತಾಂತ್ರಿಕರು ಸಾಕ್ಷಿಯಾದ ಕ್ಷಣ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರದ ಐತಿಹಾಸಿಕ ನೂತನ ಸಂಸತ್ ಭವನ ಉದ್ಘಾಟನೆಯ ಸಮಾರಂಭದಲ್ಲಿ ಭಾರಿ ಸಂಖ್ಯೆಯಲ್ಲಿ ಗಣ್ಯಾತಿಗಣ್ಯರು, ರಾಜತಾಂತ್ರಿಕರು ಸೇರಿದ್ದರು. ಭವನದ ನೋಟವನ್ನು ಅನೇಕ ಜನರು ಕುತೂಹಲದಿಂದ ಕಣ್ತುಂಬಿಸಿಕೊಳ್ಳಲು ಯತ್ನಿಸುತ್ತಿದ್ದುದು ಕಂಡುಬಂತು. ಉದ್ಘಾಟನಾ ಸಮಾರಂಭದಲ್ಲಿ ಕಂಡುಬಂದ ವಿಶೇಷಗಳ ಚಿತ್ರಣ ಇಲ್ಲಿದೆ.

- ಹೊಸ ಕಟ್ಟಡದಲ್ಲಿ ಕೇಂದ್ರ ಸಭಾಂಗಣ (ಸೆಂಟ್ರಲ್ ಹಾಲ್) ಇಲ್ಲ. ಆದರೆ, ರಾಷ್ಟ್ರದ ಪ್ರಜಾಸತ್ತಾತ್ಮಕ ಪರಂಪರೆ ಪ್ರದರ್ಶಿಸುವ ಭವ್ಯ ಸಭಾಂಗಣ ಇದೆ. ಸೆಂಟ್ರಲ್ ಹಾಲ್ ಬದಲು ಸಂಸದರಿಗೆ ಒಂದು ಲಾಂಜ್ ಇದೆ. ಹಾಲಿ ಇರುವ ಸಂಸತ್ ಗ್ರಂಥಾಲಯ ಕಟ್ಟಡವಲ್ಲದೆ, ಹೊಸ ಕಟ್ಟಡದಲ್ಲಿ ಒಂದು ಗ್ರಂಥಾಲಯ, ಭೋಜನಾಲಯ ಸೇರಿ ಹಲವು ಸಮಿತಿಗಳ ಕೊಠಡಿಗಳು ಇವೆ.
- ಹೊಸ ಕಟ್ಟಡಕ್ಕೆ ಜ್ಞಾನದ್ವಾರ, ಶಕ್ತಿದ್ವಾರ, ಕರ್ಮದ್ವಾರ ಹೆಸರಿನ ಮೂರು ಮುಖ್ಯ ದ್ವಾರಗಳು ಇವೆ. ಅಲ್ಲದೆ, ಗಣ್ಯರು, ಸಂಸದರು ಮತ್ತು ಸಂದರ್ಶಕರಿಗೆ ಪ್ರತ್ಯೇಕ ಪ್ರವೇಶದ್ವಾರಗಳಿವೆ.
- ಹೊಸ ಕಟ್ಟಡದಲ್ಲಿ 1,700 ಕಿಟಕಿ ಮತ್ತು ಬಾಗಿಲುಗಳಿವೆ. 3.5 ಕಿ.ಮೀ ಉದ್ದನೆಯ ಕಾರಿಡಾರ್‌ಗಳು ಇವೆ. 60,000 ಕಾರ್ಮಿಕರು ಇದರ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು.
- ಹೊಸ ಸಂಸತ್ ಭವನವನ್ನು ದೇಶದಾದ್ಯಂತ ತಂದಿರುವ ಹಲವು ವಸ್ತುಗಳಿಂದ ನಿರ್ಮಿಸಲಾಗಿದೆ. ನಾಗ್ಪುರದ ತೇಗದ ಮರ, ರಾಜಸ್ಥಾನದ ಕೆಂಪು ಮತ್ತು ಬಿಳಿ ಮರಳುಶಿಲೆ, ಉದಯಪುರದ ಕೇಶರಿಯಾ ಹಸಿರು ಕಲ್ಲು, ಅಜ್ಮೇರ್‌ನ ಲಖಾದಿಂದ ಕೆಂಪು ಗ್ರಾನೈಟ್, ರಾಜಸ್ಥಾನದ ಅಂಬಾಜಿಯಿಂದ ಬಿಳಿ ಅಮೃತಶಿಲೆಗಳನ್ನು ಹೊಸ ಭವನದಲ್ಲಿ ಬಳಸಿಕೊಳ್ಳಲಾಗಿದೆ. ದಿಯು ಮತ್ತು ದಮನ್‌ನಿಂದ ತರಲಾದ ಉಕ್ಕಿನ ಸಾಮಗ್ರಿಗಳನ್ನು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿನ ಛಾವಣಿಗಳ ಫಾಲ್ಸ್‌ಸೀಲಿಂಗ್‌ಗೆ ಉಪಯೋಗಿಸಲಾಗಿದೆ.
- ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ ಭವನಕ್ಕೆ ಆಗಮಿಸಿದಾಗ ಸಂಸತ್ ಭವನದಲ್ಲಿ ಒಂದೆಡೆ ಸೇರಿದ್ದ ಸಂಸದರು 'ಮೋದಿ, ಮೋದಿ' ಎಂಬ ಜೈಕಾರ ಕೂಗಿದರು. ಭಾರತ್ ಮಾತಾ ಕೀ ಜೈ, ಶಿವಾಜಿ ಮಹಾರಾಜ್ ಕಿ ಜೈ ಎಂಬ ಘೋಷಣೆಗಳು ಮೊಳಗಿದವು.
- ಉದ್ಘಾಟನೆ ಸಮಾರಂಭದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಾಣಿಸಲಿಲ್ಲ. ಅವರು ನೈಜೀರಿಯಾದ ಅಧ್ಯಕ್ಷ ಬೋಲಾ ಟಿನುಬು ಅವರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲು ನೈಜೀರಿಯಾಕ್ಕೆ ತೆರಳಿದ್ದಾರೆ.
- ಸಚಿವರಾದ ಅಮಿತ್ ಶಾ, ನಿರ್ಮಲಾ ಸೀತಾರಾಮನ್, ನಿತಿನ್ ಗಡ್ಕರಿ ಮತ್ತು ಪೀಯೂಷ್ ಗೋಯಲ್ ಮೊದಲ ಸಾಲಿನಲ್ಲಿ ಆಸೀನರಾಗಿದ್ದರು. ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಮೊದಲ ಸಾಲಿನಲ್ಲಿ ಸ್ಥಾನ ಸಿಗಲಿಲ್ಲ.
- ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡ, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್, ಮಾಜಿ ಸ್ಪೀಕರ್ ಸುಮಿತ್ರಾ ಮಹಾಜನ್, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರೂ ಮುಂದಿನ ಸಾಲಿನಲ್ಲಿ ಆಸೀನರಾಗಿದ್ದರು.

₹75ರ ವಿಶೇಷ ನಾಣ್ಯ, ಅಂಚೆ ಚೀಟಿಯನ್ನು ಪ್ರಧಾನಿ ನರೇಂದ್ರ ಮೋದಿ ಬಿಡುಗಡೆ ಮಾಡಿದರು

ಶವಪೆಟ್ಟಿಗೆಗೆ ಹೋಲಿಸಿದ ಆರ್‌ಜೆಡಿ

ನವದೆಹಲಿ (ಪಿಟಿಐ): ನೂತನ ಸಂಸತ್ ಭವನದ ಆಕಾರವನ್ನು ಶವಪೆಟ್ಟಿಗೆಗೆ ಹೋಲಿಸಿ ಆರ್‌ಜೆಡಿ ಭಾನುವಾರ ಟ್ವೀಟ್ ಮಾಡಿದೆ. ನೂತನ ಸಂಸತ್ ಭವನ ಹಾಗೂ ಶವಪೆಟ್ಟಿಗೆಯನ್ನು ಅಕ್ಕಪಕ್ಕದಲ್ಲಿ ಇರಿಸಿ, 'ಇದು ಏನು?' ಎಂದು ಟ್ವೀಟ್ ಮಾಡಿದೆ. ಇದು ವಿವಾದಕ್ಕೆ ಕಾರಣವಾಗಿದೆ.

ಆರ್‌ಜೆಡಿ ವಿರುದ್ಧ ಬಿಜೆಪಿ ಹಾಗೂ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಟೀಕಾಪ್ರಹಾರ ನಡೆಸಿವೆ. '2024ರ ಲೋಕಸಭಾ ಚುನಾವಣೆಯಲ್ಲಿ ಜನರು ಆರ್‌ಜೆಡಿಗೆ ಪಾಠ ಕಲಿಸಲಿದ್ದಾರೆ' ಎಂದು ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ. ಆರ್‌ಜೆಡಿ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಬೇಕು ಎಂದೂ ಆಗ್ರಹಿಸಿದೆ.

ಆರ್‌ಜೆಡಿ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಬಿಹಾರದ ಬಿಜೆಪಿ ಘಟಕವು, 'ಮೊದಲ ಚಿತ್ರವು ನಿಮ್ಮ ಭವಿಷ್ಯ ಮತ್ತು ಎರಡನೇದು ಭಾರತ. ಅರ್ಥವಾಯಿತೇ?' ಎಂದಿದೆ.

ಮಯೂರ
ಸಹೃದಯರ ಒಡನಾಡಿ
ಜೂನ್ 2023
ಶ್ರೇಷ್ಠತೆಯ ಸೊಕ್ಕು! ಬರಗೂರು ರಾಮಚಂದ್ರಪ್ಪ
'ಎರಡೂ ಅಲ್ಲದ ನಡುವಿನ ಸ್ಪೇಸ್ ಎಕ್ಸೈಟಿಂಗ್..' ಎಲ್.ಎನ್. ತಲ್ಲೂರ್ ಜತೆ ರಹಮತ್ ತರೀಕೆರೆ ಮಾತುಕತೆ
ನಂದಾದೀಪ
ಶ್ರೀನಿವಾಸ ವೈದ್ಯ ಅಳುವುದಕ್ಕೆ ಕಾರಣಗಳಿದ್ದರೂ ನಗುತ್ತಲೇ ಬದುಕಿದವರು
ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಕಥೆಗಳು
● ಮಂಜುಳಾ ಜಿ.ಎಚ್.
● ಗಣೇಶ್ ಪ್ರಸಾದ್ ಮಂಜೇಶ್ವರ
● ಗೋವಿಂದರಾಜು ಎಂ. ಕಲ್ಲೂರು
● ಮಾಧವಿ ಭಂಡಾರಿ ಕೆರೆಕೋಣ
● ಡಾ. ಪ್ರೇಮಲತ ಬಿ.
● ಮಂಜುನಾಥ್ ಚಾಂದ್
● ಎಚ್.ಆರ್. ರಮೇಶ
ಕವಿತೆಗಳು
● ಕಮಲಾಕರ ಕಡವೆ
● ಸಿದ್ಧಲಿಂಗ ಪಟ್ಟಣಶೆಟ್ಟಿ
● ಕಾತ್ಯಾಯಿನಿ ಕುಂಜಿಬೆಟ್ಟು
● ಟಿ. ಯಲ್ಲಪ್ಪ
● ಬಿ.ಎನ್. ಮಲ್ಲೇಶ್
● ತೇಜಾವತಿ ಎಚ್.ಡಿ.
● ಶ್ರೀದೇವಿ ಕಾಯಂಬಾಡಿ
● ರಾಜಶೇಖರ ಕುಕ್ಕುಂದಾ
● ಕಲ್ಲೇಶ್ ಕುಂಬಾರ್
ಪ್ರಬಂಧಗಳು
ರಾಮನವಮಿ ಮತ್ತು ಖಲಂದರ್ ಸಾಹೇಬರು
ಜಿ.ವಿ. ಆನಂದಮೂರ್ತಿ
ಹತ್ತು ಗಂಟೆ ಬಸ್ ಅರ್ಥಾತ್ ಕಟ್ ಸರ್ವಿಸ್ ಬಸ್
ನಿಂಗಪ್ಪ ಮುದೇನೂರು
₹15 editormy@mayura.co.in mayuraezine.com /mayuramonthly 080-45557333/264

ಭಾನುವಾರ ನಡೆಯದ ಚೆನ್ನೈ ಸೂಪರ್ ಕಿಂಗ್ಸ್– ಗುಜರಾತ್ ಟೈಟನ್ಸ್ ಸೆಣಸಾಟ

ಮಳೆಯದ್ದೇ ಆಟ; ಫೈನಲ್ ಇಂದು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಯುವತಾರೆ ಶುಭಮನ್ ಗಿಲ್ ಚೆಂದದ ಬ್ಯಾಟಿಂಗ್, ರಶೀದ್ ಖಾನ್ ಸ್ಪಿನ್ ಮೋಡಿ ಹಾಗೂ ಮಹೇಂದ್ರಸಿಂಗ್ ಧೋನಿಯ ಚಾಣಾಕ್ಷ ನಡೆಗಳನ್ನು ಕಣ್ತುಂಬಿಕೊಳ್ಳಲು ಕಾತರಿಸಿದ್ದ ಕ್ರಿಕೆಟ್‌ಪ್ರೇಮಿಗಳ ಆಸೆಗೆ 'ಮಳೆರಾಯ' ತಣ್ಣೀರೆರಚಿದ!

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆಯಬೇಕಿದ್ದ ಗುಜರಾತ್ ಟೈಟನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ನಡುವಣ ಐಪಿಎಲ್ ಫೈನಲ್ ಪಂದ್ಯಕ್ಕೆ ಮಳೆ ಅಡ್ಡಿಯಾಯಿತು. ಇದರಿಂದ ಪಂದ್ಯವನ್ನು ಮೀಸಲು ದಿನವಾದ ಸೋಮವಾರಕ್ಕೆ ಮುಂದೂಡಲಾಯಿತು.

ಐಪಿಎಲ್ ಟೂರ್ನಿಯ 16 ವರ್ಷಗಳ ಇತಿಹಾಸದಲ್ಲಿ ಫೈನಲ್ ಪಂದ್ಯ ಮೀಸಲು ದಿನಕ್ಕೆ ಮುಂದೂಡಿದ್ದು ಇದೇ ಮೊದಲು.

ಭಾನುವಾರ ರಾತ್ರಿ 7.30ಕ್ಕೆ ಪಂದ್ಯ ಆರಂಭವಾಗಬೇಕಿತ್ತು. ಆದರೆ ಪಂದ್ಯಕ್ಕೆ ಟಾಸ್ ಹಾಕುವ ಅರ್ಧಗಂಟೆಗೂ ಮುನ್ನ, ಸಂಜೆ 6.30ರ ವೇಳೆಗೆ ರಭಸವಾಗಿ ಮಳೆ ಸುರಿಯಲಾರಂಭಿಸಿತು.

ಮೈದಾನ ಸಿಬ್ಬಂದಿ ಲಗುಬಗೆಯಲ್ಲಿ ಪಿಚ್‌ಗಳಿಗೆ ಹೊದಿಕೆ ಹಾಕಿದರು. ವೇಗದ ಬೌಲರ್‌ಗಳ ರನ್ ಅಪ್ ಏರಿಯಾಗಳಿಗೂ ಟಾರ್ಪಾಲಿನ್‌ಗಳನ್ನು ಹೊದಿಸಿದರು.

ಚೆನ್ನೈ ಸೂಪರ್ ಕಿಂಗ್ಸ್– ಗುಜರಾತ್ ಟೈಟನ್ಸ್ ನಡುವಣ ಐಪಿಎಲ್ ಟೂರ್ನಿಯ ಫೈನಲ್ ಪಂದ್ಯ ನಡೆಯಬೇಕಿದ್ದ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ಮಳೆ ನೀರು ನಿಂತಿತ್ತು –ಪಿಟಿಐ ಚಿತ್ರ

ಆದರೆ ಗುಡುಗು ಮತ್ತು ಮಿಂಚು ಸಹಿತ ಮಳೆಯ ಆರ್ಭಟ ಹೆಚ್ಚಿದ್ದರಿಂದ ಕ್ರೀಡಾಂಗಣದಲ್ಲಿ ನೀರು ಹರಿಯಿತು. ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಅಭಿಮಾನಿಗಳು ಮಳೆಯಿಂದ ರಕ್ಷಿಸಿಕೊಳ್ಳಲು ಆಸರೆ ಹುಡುಕಿ ಓಡಿದರು.

8.30ರ ಸುಮಾರಿಗೆ ಮಳೆ ನಿಂತ ನಂತರ ಅಂಪೈರ್‌ಗಳು ಮೈದಾನ ಪರಿಶೀಲಿಸಿದರು. ಟಾಸ್ ಮಾಡಲು ಸಿದ್ಧತೆಗಳೂ ನಡೆದವು. ಉಭಯ ತಂಡಗಳ ಆಟಗಾರರು ಮೈದಾನಕ್ಕಿಳಿದು ತಾಲೀಮು ಆರಂಭಿಸಿದರು. ಆದರೆ ಇದೇ ಸಂದರ್ಭದಲ್ಲಿ ಮತ್ತೆ ಮಳೆ ಸುರಿಯಲಾರಂಭಿಸಿತು. ರಾತ್ರಿ 10.30ರವರೆಗೂ ಮಳೆ ಮುಂದುವರಿಯಿತು. ಪಿಚ್‌ಗೆ ಹಾಕಿದ್ದ ಹೊದಿಕೆ ಮತ್ತು ಔಟ್‌ಫೀಲ್ಡ್‌ನಲ್ಲಿ ಸಾಕಷ್ಟು ನೀರು ನಿಂತಿತು.

ರಾತ್ರಿ 10.55ರ ವೇಳೆಗೆ ಮ್ಯಾಚ್ ರೆಫರಿ ಜಾವಗಲ್ ಶ್ರೀನಾಥ್ ಮತ್ತು ಅಂಪೈರ್‌ಗಳು ಸಮಾಲೋಚನೆ ನಡೆಸಿ ಪಂದ್ಯವನ್ನು ಸೋಮವಾರಕ್ಕೆ ಮುಂದೂಡಲು ನಿರ್ಧರಿಸಿದರು.

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)		
ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	28

ಆರೆಂಜ್ ಕ್ಯಾಪ್ (ಹೆಚ್ಚು ರನ್)		
ಆಟಗಾರ	ತಂಡ	ರನ್
ಶುಭಮನ್	ಗುಜರಾತ್	851

ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಟೈಟನ್ಸ್ ತಂಡವು ಸತತ ಎರಡನೇ ಬಾರಿ ಪ್ರಶಸ್ತಿ ಜಯಿಸುವ ಛಲದಲ್ಲಿದೆ. ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ತಂಡವು ಐದನೇ ಬಾರಿ ಟ್ರೋಫಿಯನ್ನು ತನ್ನದಾಗಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಮೇ 3ರಂದು ಲಖನೌನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಲಖನೌ ಸೂಪರ್‌ಜೈಂಟ್ಸ್ ನಡುವಣ ಲೀಗ್ ಪಂದ್ಯವು ಮಳೆಯಿಂದ ರದ್ದಾಗಿತ್ತು. ಆಗ ಉಭಯ ತಂಡಗಳಿಗೂ ತಲಾ ಒಂದು ಅಂಕ ಹಂಚಲಾಗಿತ್ತು.

ಮೇ 21ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುಜರಾತ್ ಟೈಟನ್ಸ್ ಮತ್ತು ಆರ್‌ಸಿಬಿ ತಂಡದ ಪಂದ್ಯದ ದಿನ ಸಂಜೆ ರಭಸದ ಮಳೆ ಸುರಿದಿತ್ತು.

ಆದರೆ ರಾತ್ರಿ ಏಳು ಗಂಟೆ ಸುಮಾರಿಗೆ ಮಳೆ ಸ್ಥಗಿತವಾಗಿತ್ತು. ಪಂದ್ಯವು ಅರ್ಧ ಗಂಟೆ ವಿಳಂಬವಾಗಿ ಆರಂಭವಾಗಿತ್ತು. ಗುಜರಾತ್ ತಂಡ ಜಯಿಸಿತ್ತು.

ಪಂದ್ಯ ಆರಂಭ: ರಾತ್ರಿ 7.30

ಐಪಿಎಲ್‌ಗೆ ರಾಯುಡು ವಿದಾಯ

ಅಹಮದಾಬಾದ್ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರ ಅಂಬಟಿ ರಾಯುಡು ಅವರು ಐಪಿಎಲ್‌ಗೆ ವಿದಾಯ ಹೇಳಿದ್ದಾರೆ.

ಗುಜರಾತ್ ಟೈಟನ್ಸ್ ವಿರುದ್ಧದ ಫೈನಲ್ ಪಂದ್ಯವೇ ಅವರ ವೃತ್ತಿಜೀವನದ ಕೊನೆಯ ಐಪಿಎಲ್ ಪಂದ್ಯ ಎನಿಸಿಕೊಳ್ಳಲಿದೆ. ರಾಯುಡು ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಈ ಹಿಂದೆಯೇ ನಿವೃತ್ತಿಯಾಗಿದ್ದರು.

'ಎರಡು ಪ್ರಮುಖ ತಂಡಗಳಾದ ಮುಂಬೈ ಇಂಡಿಯನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ಪರ ಆಡಿದ್ದೇನೆ. 204 ಪಂದ್ಯಗಳು, 14 ಆವೃತ್ತಿಗಳು, 11 ಪ್ಲೇ ಆಫ್‌ಗಳು, 8 ಫೈನಲ್, 5 ಪ್ರಶಸ್ತಿಗಳು. ಇದೊಂದು ಸುದೀರ್ಘ ಪಯಣ. ಫೈನಲ್ ಪಂದ್ಯದೊಂದಿಗೆ ಐಪಿಎಲ್ ವೃತ್ತಿಜೀವನಕ್ಕೆ ತೆರೆ ಎಳೆಯಲು ನಿರ್ಧರಿಸಿದ್ದೇನೆ' ಎಂದು ಗುಜರಾತ್ ವಿರುದ್ಧ ಭಾನುವಾರ ನಡೆಯಬೇಕಿದ್ದ ಫೈನಲ್‌ಗೂ ಮುನ್ನ ಅವರು ಟ್ವೀಟ್ ಮಾಡಿದ್ದಾರೆ. ಆದರೆ ಫೈನಲ್ ಪಂದ್ಯವನ್ನು ಮೀಸಲು ದಿನ ಸೋಮವಾರಕ್ಕೆ ಮುಂದೂಡಲಾಗಿದೆ.

ಅಂಬಟಿ ರಾಯುಡು

ರಾಯುಡು ಕಳೆದ 10 ಋತುಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪರ ಆಡುತ್ತಿದ್ದಾರೆ. ಫೈನಲ್ ಪಂದ್ಯಕ್ಕೂ ಮುನ್ನ ಅವರು 203 ಐಪಿಎಲ್ ಪಂದ್ಯಗಳಿಂದ 127ರ ಸ್ಟ್ರೈಕ್‌ರೇಟ್‌ನಲ್ಲಿ 4,329 ರನ್ ಗಳಿಸಿದ್ದಾರೆ. ಅದರಲ್ಲಿ ಒಂದು ಶತಕ ಮತ್ತು 22 ಅರ್ಧಶತಕಗಳು ಸೇರಿವೆ. 2018ರ ಟೂರ್ನಿಯಲ್ಲಿ ಸಿಎಸ್‌ಕೆ ಪರ 602 ರನ್ ಗಳಿಸಿದ್ದು ಅವರ ಅತ್ಯುತ್ತಮ ಸಾಧನೆ ಎನಿಸಿದೆ.

ಹೈದರಾಬಾದ್‌ನ 38 ವರ್ಷದ ಆಟಗಾರ ರಾಯುಡು ಅವರು ಭಾರತ ತಂಡದ ಪರ 55 ಏಕದಿನ ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿದ್ದು, 1,694 ರನ್‌ಗಳನ್ನು ಕಲೆಹಾಕಿದ್ದಾರೆ. ಮೂರು ಶತಕ ಮತ್ತು 10 ಅರ್ಧಶತಕಗಳನ್ನು ಗಳಿಸಿದ್ದಾರೆ.

ಫ್ರೆಂಚ್ ಓಪನ್: ರಷ್ಯಾ–ಉಕ್ರೇನ್ ಸಂಘರ್ಷದ ಕರಿನೆರಳು

ಅರಿನಾ ಸಬಲೆಂಕಾ ಶುಭಾರಂಭ

ಪ್ಯಾರಿಸ್ (ಎಎಫ್‌ಪಿ): ಸುಲಭ ಜಯ ಸಂಪಾದಿಸಿದ ಬೆಲಾರೂಸ್‌ನ ಅರಿನಾ ಸಬಲೆಂಕಾ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಎರಡನೇ ಸುತ್ತಿಗೆ ಮುನ್ನಡೆದರು.

ರೋಲ್ಯಾಂಡ್ ಗ್ಯಾರೊಸ್‌ನಲ್ಲಿ ಭಾನುವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಅರಿನಾ 6-3, 6-2ರಿಂದ ಮಾರ್ಟಾ ಅವರನ್ನು ಪರಾಭವಗೊಳಿಸಿದರು.

ಪಂದ್ಯ ಮುಗಿದ ಬಳಿಕ ಉಕ್ರೇನ್‌ನ ಮಾರ್ಟಾ ಕೊಸ್ತಿಯುಕ್ ಅವರು ಅರಿನಾ ಅವರ ಕೈಕುಲುಕಲು ನಿರಾಕರಿಸಿ ಅಪಹಾಸ್ಯಕ್ಕೊಳಗಾದರು. ರಷ್ಯಾ ಮತ್ತು ಉಕ್ರೇನ್ ನಡುವಣ ರಾಜಕೀಯ ಸಂಘರ್ಷದ ಕರಿನೆರಳು ಕ್ರೀಡೆಯನ್ನು ಇನ್ನೂ ಬಾಧಿಸುತ್ತಿದೆ ಎಂಬುದಕ್ಕೆ ಈ ಪ್ರಸಂಗ ಸಾಕ್ಷಿಯಾಯಿತು.

ಪಂದ್ಯದ ಕೊನೆಯ 12 ಗೇಮ್‌ಗಳಲ್ಲಿ 10ನ್ನು ತನ್ನದಾಗಿಸಿಕೊಂಡ ಅರಿನಾ, ಉಕ್ರೇನ್ ಆಟಗಾರ್ತಿಯನ್ನು ಸುಲಭವಾಗಿ ಸೋಲಿಸಿದರು. ಪಂದ್ಯ ಕೊನೆಗೊಂಡ ತಕ್ಷಣವೇ ಮಾರ್ಟಾ ಅವರು ಅರಿನಾ ಅವರನ್ನು ಅಭಿನಂದಿಸದೇ ತಮಗೆ ಮೀಸಲಿದ್ದ ಖುರ್ಚಿಯತ್ತ ತೆರಳಿದರು.

ಅರಿನಾ ಸಬಲೆಂಕಾ ಆಟದ ಪರಿ– ಎಎಫ್‌ಪಿ ಚಿತ್ರ

ಮಹಿಳೆಯರ ಸಿಂಗಲ್ಸ್ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ ಅರ್ಜೆಂಟೀನಾದ ನಾದಿಯಾ ಪೊಡೊರೊಸ್ಕಾ 6-0, 6-2ರಿಂದ ಫ್ರಾನ್ಸ್‌ನ ಜೆಸ್ಸಿಕಾ ಪೊಂಚೆಸ್ ಎದುರು, ಆಸ್ಟ್ರೇಲಿಯಾದ ಸ್ಟಾರ್ಮ್ ಸ್ಯಾಂಡರ್ಸ್ 4-6, 6-2, 6-4ರಿಂದ ಸ್ಪೇನ್‌ನ ನೂರಿಯಾ ಪರಿಜಾಸ್ ಡಿಯಾಜ್ ವಿರುದ್ಧ, ಪೋಲೆಂಡ್‌ನ ಮ್ಯಾಗ್ದಾಲೆನಾ 6-1, 6-1ರಿಂದ ಚೀನಾದ ಜಾಂಗ್ ಶುಯಿ ಎದುರು ಮುನ್ನಡೆದರು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಆಸ್ಟ್ರಿಯಾದ ಸೆಬಾಸ್ಟಿಯನ್ ಆರ್ಫನ್ 6-4, 7-6, (8/6)ರಿಂದ ಅಮೆರಿಕದ ಮ್ಯಾಕ್ಸಿಮ್ ಕ್ರೆಸ್ಸಿ ವಿರುದ್ಧ ಜಯ ಸಾಧಿಸಿದರು. ಗ್ರೀಸ್‌ನ ಸ್ಟೆಫಾನೋಸ್ ಸಿಟ್ಸಿಪಸ್ 7-5, 6-3, 4-6, 7-6 ರಲ್ಲಿ ಜೆಕ್ ಗಣರಾಜ್ಯದ ಜಿರಿ ವೆಸೆಲಿ ಅವರನ್ನು ಮಣಿಸಿದರು.

ಮಲೇಷ್ಯಾ ಮಾಸ್ಟರ್ಸ್: ಪ್ರಣಯ್ 'ರಾಜ'

ಬ್ಯಾಡ್ಮಿಂಟನ್: 6 ವರ್ಷಗಳ ಪ್ರಶಸ್ತಿ ಬರ ನೀಗಿಸಿಕೊಂಡ ಭಾರತದ ಆಟಗಾರ

ಕ್ವಾಲಾಲಂಪುರ (ಪಿಟಿಐ): ಅಮೋಘ ಆಟವಾಡಿದ ಎಚ್.ಎಸ್. ಪ್ರಣಯ್ ಅವರು ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದರು. ಇದರೊಂದಿಗೆ ಆರು ವರ್ಷಗಳ ದೀರ್ಘಕಾಲದ ಪ್ರಶಸ್ತಿ ಬರವನ್ನು ನೀಗಿಸಿಕೊಂಡರು.

ಇಲ್ಲಿ ನಡೆದ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಜಿದ್ದಾಜಿದ್ದಿ ಫೈನಲ್ ಹಣಾಹಣಿಯಲ್ಲಿ ಭಾನುವಾರ ಪ್ರಣಯ್ 21-19, 13-21, 21-18ರಿಂದ ಚೀನಾದ ವೆಂಗ್ ಹಾಂಗ್ ಯಾಂಗ್ ಅವರನ್ನು ಮಣಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 34ನೇ ಸ್ಥಾನದಲ್ಲಿರುವ ಯಾಂಗ್ ವಿರುದ್ಧ ಭಾರತದ ಆಟಗಾರನಿಗೆ 94 ನಿಮಿಷಗಳಲ್ಲಿ ಗೆಲುವು ಒಲಿಯಿತು.

ಜಿದ್ದಾಜಿದ್ದಿ: ವಿಶ್ವ ಕ್ರಮಾಂಕದಲ್ಲಿ 9ನೇ ಸ್ಥಾನದಲ್ಲಿರುವ ಪ್ರಣಯ್ ಈ ಪಂದ್ಯದಲ್ಲಿ ತಮ್ಮ ಬತ್ತಳಿಕೆಯಲ್ಲಿದ್ದ ಎಲ್ಲ ಪ್ರಮುಖ ಅಸ್ತ್ರಗಳನ್ನು ಪ್ರಯೋಗಿಸಿದರು. ನಿರಂತರ ಆಕ್ರಮಣ, ಅದ್ಭುತ ರಿಟರ್ನ್ಸ್, ಎದುರಾಳಿಯ ತಪ್ಪುಗಳ ಲಾಭ ಪಡೆಯುವುದು, ಚುರುಕಿನ ಆಟದ ಮೂಲಕ ಎದುರಾಳಿಯನ್ನು ಕಾಡಿದರು.

ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಎಚ್.ಎಸ್. ಪ್ರಣಯ್– ಎಎಫ್‌ಪಿ ಚಿತ್ರ

ಮೊದಲ ಗೇಮ್‌ನ ಆರಂಭದಲ್ಲಿ 1-3ರಿಂದ ಹಿನ್ನಡೆಯಲ್ಲಿದ್ದ ಅವರು ಬಳಿಕ 10-10ರ ಸಮಬಲ ಸಾಧಿಸಿದರು. 16-16ರವರೆಗೆ ಸಮ ಹೋರಾಟ ಮುಂದುವರಿಯಿತು. ಬಳಿಕ ಎರಡು ಪಾಯಿಂಟ್ಸ್ ಗಳಿಸಿದ ಪ್ರಣಯ್, ಅದೇ ಲಯದೊಂದಿಗೆ ಗೇಮ್ ಗೆದ್ದುಕೊಂಡರು.

ಎರಡನೇ ಗೇಮ್ ಜಯಿಸಿದ ಚೀನಾದ ಆಟಗಾರ ಪಂದ್ಯವನ್ನು ಸಮಸ್ಥಿತಿಗೆ ತಂದರು. ಮೂರನೇ ಗೇಮ್‌ನಲ್ಲಿ ಆಟ ಮತ್ತಷ್ಟು ರಂಗೇರಿತು.

ಮುಖ್ಯಾಂಶಗಳು

- ಬಿಡಬ್ಲ್ಯುಎಫ್ ವಿಶ್ವ ಟೂರ್ ವಿಭಾಗದಲ್ಲಿ ಪ್ರಣಯ್‌ಗೆ ಮೊದಲ ಕಿರೀಟ
- ಚೀನಾದ ವೆಂಗ್ ಹಾಂಗ್ ಯಾಂಗ್ ವಿರುದ್ಧ ಜಯ
- 2017ರ ಅಮೆರಿಕ ಓಪನ್ ಗ್ರ್ಯಾನ್‌ಪ್ರಿಯಲ್ಲಿ ಚಿನ್ನ ಗೆದ್ದಿದ್ದ ಪ್ರಣಯ್

ಪ್ರಣಯ್ 6-8ರಿಂದ ಆರಂಭದ ಮುನ್ನಡೆ ಗಳಿಸಿದರು. ವಿರಾಮದ ವೇಳೆಗೆ ಒಂದು ಪಾಯಿಂಟ್‌ನಿಂದ ಅವರು ಮುನ್ನಡೆಯಲ್ಲಿದ್ದರು.

ಬಳಿಕ ಕ್ರಾಸ್‌ಕೋರ್ಟ್ ಸ್ಮ್ಯಾಷ್‌ಗಳಿಂದ ಗಮನಸೆಳೆದ ಪ್ರಣಯ್ 14–11ರ ಮೇಲುಗೈ ಪಡೆದರು. ಬಳಿಕ ಚೇತರಿಸಿಕೊಂಡ ಯಾಂಗ್ 18–18ರ ಸಮಬಲ ಸಾಧಿಸಿದರು. ನಂತರ ಒತ್ತಡವನ್ನು ಮೀರಿನಿಂತ ಪ್ರಣಯ್ ಮಾಂತ್ರಿಕ ಸ್ಮ್ಯಾಷ್‌ಗಳ ನೆರವಿನಿಂದ ಚಾಂಪಿಯನ್‌ಷಿಪ್ ಪಾಯಿಂಟ್ಸ್ ಗಳಿಸಿ ಜಯದ ಹೊಳೆಯಲ್ಲಿ ಮಿಂದೆದ್ದರು.

ಟೆನಿಸ್: ಶರ್ಮದಾ ರನ್ನರ್ ಅಪ್

ಬೆಂಗಳೂರು: ಭಾರತದ ಶರ್ಮದಾ ಬಾಲು ಮತ್ತು ಈಜಿಪ್ಟ್‌ನ ಲಮೀಝ್ ಅಲ್‌ಹುಸೇನ್ ಅಬ್ದೆಲ್ ಅಜೀಜ್ ಜೋಡಿ ಟ್ಯುನೀಷಿಯಾದ ಮೊನಾಸ್ಟಿರ್‌ನಲ್ಲಿ ನಡೆದ ಐಟಿಎಫ್ ಟೆನಿಸ್ ಟೂರ್ನಿಯ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ರನ್ನರ್ ಅಪ್ ಆಯಿತು.

ಶನಿವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿ 3–6, 6–1 ರಲ್ಲಿ ಬ್ರಿಟನ್‌ನ ಲಾರಿನಾ ಜಾನ್ ಮತ್ತು ಫ್ರಾನ್ಸ್‌ನ ಯಾಸ್ಮಿನ್ ಮನ್ಸೂರಿ ಎದುರು ಪರಾಭವಗೊಂಡಿತು.

ಬೆಂಗಳೂರಿನ ಶರ್ಮದಾ ಮತ್ತು ಲಮೀಝ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಜೋಡಿಯನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿತ್ತು.

ಗಾಲ್ಫ್: ನಾಕೌಟ್ ಪ್ರವೇಶಿಸಲು ಅದಿತಿ ವಿಫಲ

ಲಾಸ್ ವೆಗಾಸ್, ಅಮೆರಿಕ (ಪಿಟಿಐ): ಭಾರತದ ಅದಿತಿ ಅಶೋಕ್ ಅವರು ಇಲ್ಲಿ ನಡೆಯುತ್ತಿರುವ ಬ್ಯಾಂಕ್ ಆಫ್ ಹೋಪ್ ಎಲ್‌ಪಿಜಿಎ ಮ್ಯಾಚ್ ಪ್ಲೇ ಗಾಲ್ಫ್ ಟೂರ್ನಿಯ ನಾಕೌಟ್ ಹಂತ ಪ್ರವೇಶಿಸುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡರು.

ಅದಿತಿ ಹಾಗೂ ಅಮೆರಿಕದ ಜೆನಿಫರ್ ಕುಪ್‌ಚೊ ನಡುವಣ ಶನಿವಾರ ನಡೆದ ಮೂರನೇ ಪಂದ್ಯ 'ಟೈ'ನಲ್ಲಿ ಕೊನೆಗೊಂಡಿತು. ಈ ಪಂದ್ಯವನ್ನು ಗೆದ್ದಿದ್ದರೆ ಬೆಂಗಳೂರಿನ ಆಟಗಾರ್ತಿಗೆ ನಾಕೌಟ್ ಸ್ಥಾನಕ್ಕಾಗಿ 'ಪ್ಲೇ ಆಫ್'ನಲ್ಲಿ ಆಡುವ ಅವಕಾಶ ಲಭಿಸುತ್ತಿತ್ತು.

ಮೊದಲ ಪಂದ್ಯದಲ್ಲಿ ಪೆರ‍್ರೈನ್ ಡೆಲಾಕರ್ ಎದುರು ಸೋತಿದ್ದ ಅದಿತಿ, ಎರಡನೇ ಪಂದ್ಯದಲ್ಲಿ ಕರೋಲಿನ್ ಇಂಗ್ಲಿಸ್ ಅವರನ್ನು ಮಣಿಸಿದ್ದರು. ಅದಿತಿ ಮೂರನೇ ಪಂದ್ಯ ಗೆದ್ದಿದ್ದರೆ, ಡೆಲಾಕರ್ ವಿರುದ್ಧ 'ಪ್ಲೇ ಆಫ್' ಆಡಬೇಕಿತ್ತು. ಅಲ್ಲಿ ಗೆದ್ದರೆ 16ರ ಘಟ್ಟ ಪ್ರವೇಶಿಸುತ್ತಿದ್ದರು.

ಮೆಸ್ಸಿ ಗೋಲು ಪಿಎಸ್‌ಜಿಗೆ ಪ್ರಶಸ್ತಿ

ಮೆಸ್ಸಿ

ಪ್ಯಾರಿಸ್ (ಎಪಿ): ತಾರಾ ಆಟಗಾರ ಲಯೊನೆಲ್ ಮೆಸ್ಸಿ ಗಳಿಸಿದ ಗೋಲಿನ ನೆರವಿನಿಂದ ಪ್ಯಾರಿಸ್ ಸೇಂಟ್ ಜರ್ಮನ್ ತಂಡವು ದಾಖಲೆಯ 11ನೇ ಬಾರಿ ಲೀಗ್ 1 ಫ್ರೆಂಚ್ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ಶನಿವಾರ ಸ್ಟ್ರಾಸ್‌ಬರ್ಗ್‌ನಲ್ಲಿ ನಡೆದ ಪಂದ್ಯದಲ್ಲಿ ಪ್ಯಾರಿಸ್ ಸೇಂಟ್ ಜರ್ಮನ್ (ಪಿಎಸ್‌ಜಿ) 1-1 ಗೋಲಿನಿಂದ ಆರ್‌ಸಿ ಸ್ಟ್ರಾಸ್‌ಬರ್ಗ್ ಎದುರು ಡ್ರಾ ಸಾಧಿಸಿತು. ಈ ಮೂಲಕ ಒಂದು ಸುತ್ತು ಬಾಕಿ ಇರುವಂತೆಯೇ ಪಾಯಿಂಟ್ಸ್ ಆಧಾರದಲ್ಲಿ ಪ್ರಶಸ್ತಿ ಗೆದ್ದಿತು. ತಂಡವು 37 ಪಂದ್ಯಗಳಿಂದ 85 ಪಾಯಿಂಟ್ಸ್ ಕಲೆಹಾಕಿತು.

ಸೇಂಟ್ ಎಟೀನ್ಸ್ 10 ಬಾರಿ ಪ್ರಶಸ್ತಿ ಗೆದ್ದಿದ್ದು ಇದುವರೆಗಿನ ದಾಖಲೆಯಾಗಿತ್ತು. ಈ ಪಂದ್ಯದಲ್ಲಿ ಮೆಸ್ಸಿ 59ನೇ ನಿ.ದಲ್ಲಿ ಗೋಲು ತಂದಿತ್ತರು.

ಈಜು: ಶಿವ, ಅನೀಶ್ ಮಿಂಚು

ಲಖನೌ: ಕರ್ನಾಟಕದ ಜೈನ್ ವಿಶ್ವವಿದ್ಯಾಲಯದ ಶಿವ ಶ್ರೀಧರ್ ಅವರು ಇಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ 400 ಮೀಟರ್ಸ್ ವೈಯಕ್ತಿಕ ಮೆಡ್ಲೆಯಲ್ಲಿ ಭಾನುವಾರ ಕೂಟ ದಾಖಲೆಯೊಂದಿಗೆ ಚಿನ್ನ ಜಯಿಸಿದರು.

4 ನಿಮಿಷ 37.21 ಸೆಕೆಂಡುಗಳಲ್ಲಿ ಗುರಿ ತಲುಪಿದ ಅವರು ಈ ಹಿಂದಿನ ಆವೃತ್ತಿಯಲ್ಲಿ ತಾವೇ ನಿರ್ಮಿಸಿದ್ದ ದಾಖಲೆಯನ್ನು (4 ನಿ. 38.98 ಸೆ.) ಉತ್ತಮಪಡಿಸಿಕೊಂಡರು. ಈ ಪದಕದೊಂದಿಗೆ ಅವರು ಗೆದ್ದ ಒಟ್ಟು ಪದಕಗಳ ಸಂಖ್ಯೆ ಏಳಕ್ಕೇರಿತು.

ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯದ ಅನೀಶ್ ಗೌಡ ಎರಡನೇ ಸ್ಥಾನ ಪಡೆದರು. ಅನೀಶ್ ಅವರು 4X100 ಮೆಡ್ಲೆಯಲ್ಲಿ ತಮ್ಮ ತಂಡದೊಂದಿಗೆ ಚಿನ್ನ ಜಯಿಸಿದರು. ಅವರು 200 ಮೀಟರ್ಸ್ ಫ್ರೀಸ್ಟೈಲ್‌ನಲ್ಲೂ ಅಗ್ರಸ್ಥಾನ ಗಳಿಸಿದರು. ಅವರು ಕೂಡ ಒಟ್ಟು ಏಳು ಪದಕ ಜಯಿಸಿದ್ದಾರೆ.

ಶಿವ ಶ್ರೀಧರ್

ಶಿವ ಹಾಗೂ ಅನೀಶ್ 100 ಮೀಟರ್ಸ್ ಬಟರ್‌ಫ್ಲೈನಲ್ಲಿ ಬೆಳ್ಳಿ ಮತ್ತು ಕಂಚು ಗೆದ್ದರು.

ಪ್ರೀತಾಗೆ ಎರಡು ಚಿನ್ನ: ಬೆಂಗಳೂರು ವಿಶ್ವವಿದ್ಯಾಲಯದ ಪ್ರೀತಾ ವಿ. ಅವರಿಗೆ ಮಹಿಳೆಯರ 800 ಮೀ. ಮತ್ತು 200 ಮೀ. ಫ್ರೀಸ್ಟೈಲ್‌ಗಳಲ್ಲಿ ಚಿನ್ನದ ಪದಕ ಒಲಿಯಿತು.

ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಿವಯ್ಯ ಪೂಜಾರಿ 97 ಕೆಜಿ ವಿಭಾಗದ ಗ್ರೀಕೊ ರೋಮನ್ ಕುಸ್ತಿಯಲ್ಲಿ ಚಿನ್ನ ಗೆದ್ದರು.

ಮಹಿಳೆಯರ ಟೆನಿಸ್ ಟೂರ್ನಿಯಲ್ಲಿ ಜೈನ್ ವಿವಿ ಸೆಮಿಫೈನಲ್ ತಲುಪಿದ್ದು, ಪುಣೆಯ ಸಾವಿತ್ರಿಬಾಯಿ ಫುಲೆ ವಿವಿಯನ್ನು ಎದುರಿಸಲಿದೆ.

ಶಾಟ್‌ಗನ್ ವಿಶ್ವಕಪ್: ಭಾರತಕ್ಕೆ 5ನೇ ಸ್ಥಾನ

ಅಲ್ಮೇಟಿ (ಪಿಟಿಐ): ಭಾರತದ ಶೂಟರ್‌ಗಳು ಭಾನುವಾರ ಇಲ್ಲಿ ಕೊನೆಗೊಂಡ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್‌ನಲ್ಲಿ ಐದನೇ ಸ್ಥಾನ ಪಡೆದುಕೊಂಡರು.

ಕೊನೆಯ ದಿನ ಭಾರತಕ್ಕೆ ಪದಕ ಸಿಗಲಿಲ್ಲ. ಕೂಟದಲ್ಲಿ ಒಟ್ಟಾರೆಯಾಗಿ ಒಂದು ಬೆಳ್ಳಿ ಮತ್ತು ಎರಡು ಕಂಚಿನ ಪದಕ ಗೆದ್ದುಕೊಂಡಿತು.

ಭಾನುವಾರ ನಡೆದ ಟ್ರ್ಯಾಪ್ ಮಿಕ್ಸೆಡ್ ತಂಡ ವಿಭಾಗದಲ್ಲಿ ಪೃಥ್ವಿರಾಜ್ ತೊಂಡೈಮನ್ ಮತ್ತು ಶ್ರೇಯಸಿ ಸಿಂಗ್ ಐದನೇ ಸ್ಥಾನ ಪಡೆದುಕೊಂಡರು. ಅವರು 150 ರಲ್ಲಿ 136 ಪಾಯಿಂಟ್ಸ್ ಕಲೆಹಾಕಿದರು.

ಕಣದಲ್ಲಿದ್ದ ಭಾರತದ ಇನ್ನೊಂದು ಜೋಡಿ ಜೊರಾವರ್ ಸಂಧು– ಪ್ರೀತಿ ರಜಕ್ 134 ಪಾಯಿಂಟ್ಸ್‌ಗಳೊಂದಿಗೆ ಎಂಟನೇ ಸ್ಥಾನ ಗಳಿಸಿತು.

ಕಜಕಸ್ತಾನದ ಮರಿಯಾ ದಿಮಿತ್ರಿಯೆಂಕೊ– ವಿಕ್ಟರ್ ಖಾಸಿಯನೊವ್ ಅವರು ಒಟ್ಟು 142 ಪಾಯಿಂಟ್ಸ್‌ಗಳೊಂದಿಗೆ ಚಿನ್ನ ಗೆದ್ದುಕೊಂಡರು.

ಸಂಕ್ಷಿಪ್ತ ಸುದ್ದಿ

ಅಥ್ಲೆಟಿಕ್ಸ್: ಜ್ಯೋತಿ ಯರಾಜಿಗೆ ಚಿನ್ನ

ಜ್ಯೋತಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ದಾಖಲೆ ಹೊಂದಿರುವ ಭಾರತದ ಜ್ಯೋತಿ ಯರಾಜಿ ಅವರು ಜರ್ಮನಿಯ ವೆನೆಮ್‌ನಲ್ಲಿ ನಡೆದ 'ಕುರ್ಫಾಲ್ಜ್ ಗಾಲಾ' ಅಥ್ಲೆಟಿಕ್ಸ್ ಟೂರ್ನಿಯ 100 ಮೀಟರ್ಸ್ ಹರ್ಡಲ್ಸ್‌ನಲ್ಲಿ ಭಾನುವಾರ ಚಿನ್ನದ ಪದಕ ಜಯಿಸಿದರು.

ಜ್ಯೋತಿ ಅವರು ಸ್ಪರ್ಧೆಯನ್ನು 12.84 ಸೆಕೆಂಡುಗಳಲ್ಲಿ ಕೊನೆಗೊಳಿಸಿದರು. ಇದರೊಂದಿಗೆ ವೈಯಕ್ತಿಕ ಎರಡನೇ ಶ್ರೇಷ್ಠ ಸಾಧನೆ ದಾಖಲಿಸಿದರು. ಕಳೆದ ವರ್ಷ 12.82 ಸೆಕೆಂಡುಗಳಲ್ಲಿ ಗುರಿ ತಲುಪಿದ್ದು ಅವರ ರಾಷ್ಟ್ರೀಯ ದಾಖಲೆಯಾಗಿದೆ.

ಶಾಟ್‌ಪಟ್: ಕ್ರೋಸರ್ ದಾಖಲೆ

ಲಾಸ್ ಏಂಜಲೀಸ್ (ಎಎಫ್‌ಪಿ): ಒಲಿಂಪಿಕ್ಸ್ ಮತ್ತು ವಿಶ್ವಚಾಂಪಿಯನ್ ಶಾಟ್‌ಪಟ್ ಸ್ಪರ್ಧಿ ಅಮೆರಿಕದ ರಯಾನ್ ಕ್ರೋಸರ್ ಅವರು ತಮ್ಮದೇ ಹೆಸರಲ್ಲಿದ್ದ ವಿಶ್ವದಾಖಲೆಯನ್ನು ಉತ್ತಮಪಡಿಸಿಕೊಂಡರು.

ಶನಿವಾರ ನಡೆದ ಲಾಸ್ ಏಂಜಲೀಸ್ ಗ್ರ್ಯಾನ್ ಪ್ರಿ ಅಥ್ಲೆಟಿಕ್ ಕೂಟದಲ್ಲಿ ಅವರು 23.56 ಮೀ. ಸಾಧನೆ ಮಾಡಿದರು. 2021 ರಲ್ಲಿ ಒಲಿಂಪಿಕ್ಸ್ ಟ್ರಯಲ್ಸ್ ವೇಳೆ 23.37 ಮೀ. ದೂರ ಎಸೆದದ್ದು ಇದುವರೆಗಿನ ದಾಖಲೆಯಾಗಿತ್ತು.

ಫೈನಲ್‌ಗೆ ಡಿಪಿಎಸ್, ಸಿಕ್ಸ್ ಅಕಾಡೆಮಿ

ಬೆಂಗಳೂರು: ಡಿಪಿಎಸ್ ಈಸ್ಟ್ ತಂಡವು ಟೈಗರ್ ಕಪ್ 14 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಫೈನಲ್ ತಲುಪಿತು.

ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಅಂಗಣದಲ್ಲಿ ಭಾನುವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಡಿಪಿಎಸ್ ಈಸ್ಟ್ 94 ರನ್‌ಗಳಿಂದ ಗೋಪಾಲನ್ ತಂಡಕ್ಕೆ ಸೋಲುಣಿಸಿತು.

ಇನ್ನೊಂದು ಸೆಮಿಫೈನಲ್ ಹಣಾಹಣಿಯಲ್ಲಿ ಸಿಕ್ಸ್ ಅಕಾಡೆಮಿ ತಂಡವು 30 ರನ್‌ಗಳಿಂದ ಡಿಪಿಎಸ್ ಸೌತ್ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರುಗಳು: ಡಿಪಿಎಸ್ ಈಸ್ಟ್: 30 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 211 (ಅಭಿನವ್ ಕುಲಕರ್ಣಿ 81, ಶಹಾನ್ ಶಾದಾಬ್ 40, ಋತ್ವಿಕ್ ಕುಮಾರ್ 31ಕ್ಕೆ 3). ಗೋಪಾಲನ್: 30 ಓವರ್‌ಗಳಲ್ಲಿ 8 ವಿಕೆಟ್‌ಗೆ 117 (ಭವಿಕ್ ಬನ್ಸಾಲ್ 38, ಸುಹಾನ್ 35; ಆರ್ಯಮನ್ 12ಕ್ಕೆ 3, ಆಯುಷ್ ಜೈನ್ 15ಕ್ಕೆ 3). ಫಲಿತಾಂಶ: ಡಿಪಿಎಸ್ ಈಸ್ಟ್‌ಗೆ 94 ರನ್‌ಗಳ ಜಯ

ಸಿಕ್ಸ್ ಅಕಾಡೆಮಿ: 30 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 172 (ರಫಾ ಪೂಣಚ್ಚ 69, ಪಾರ್ಥ್ ಮದನ್ 39; ವಿಯಾನ್ ಜೋಷಿ 25ಕ್ಕೆ 2). ಡಿಪಿಎಸ್ ಸೌತ್: 28.3 ಓವರ್‌ಗಳಲ್ಲಿ 142 (ಕಿಶನ್ ಜೆ. 56; ವೇದಾಂತ್ ವೆಂಕಟ್ 24ಕ್ಕೆ 3, ಚೇತನ್ 31ಕ್ಕೆ 3). ಫಲಿತಾಂಶ: ಸಿಕ್ಸ್ ಅಕಾಡೆಮಿಗೆ 30 ರನ್‌ಗಳ ಗೆಲುವು.

ಚೆಸ್: ಸಿದ್ಧಾಂತ್– ತೇಜ್‌ಕುಮಾರ್ ಪಂದ್ಯ ಡ್ರಾ

ಬೆಂಗಳೂರು: ಸಿದ್ಧಾಂತ್ ಪೂಂಜಾ ಅವರು ಅಕ್ಷಯಕಲ್ಪ ಆರ್ಗ್ಯಾನಿಕ್ ಕರ್ನಾಟಕ ರಾಜ್ಯ ಓಪನ್ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್‌ನ ಐದನೇ ಸುತ್ತಿನಲ್ಲಿ ಗ್ರ್ಯಾಂಡ್‌ಮಾಸ್ಟರ್ ಎಂ.ಎಸ್. ತೇಜಕುಮಾರ್ ಅವರನ್ನು ಡ್ರಾದಲ್ಲಿ ಕಟ್ಟಿಹಾಕಿದರು.

ಕೋಣನಕುಂಟೆಯ ಫೋರಂ ಮಾಲ್‌ನಲ್ಲಿ ನಡೆಯುತ್ತಿರುವ ಈ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಐದನೇ ಸುತ್ತಿನ ಬಳಿಕ ಎಂಟು ಆಟಗಾರರು ತಲಾ ಐದು ಪಾಯಿಂಟ್ಸ್ ಕಲೆಹಾಕಿದ್ದಾರೆ. ವಿಯಾನಿ ಡಿಕುನ್ಹ ಅವರು ಐದನೇ ಸುತ್ತಿನಲ್ಲಿ ಧನುಷ್ ರಾಮ್ ವಿರುದ್ಧ ಗೆದ್ದರು.